Mr. SPEAKER.—The question is :

"That the Mysore Land Revenue (Amendment) Bill, 1966 be passed' :

The motion was adopted.

Mr. SPEAKER.—Hon'ble Minister for Forest may move his Bill.

Sri B. RACHAIAH (Minister for Forests and Fisharies).—Sir, I am not moving it to-day.

Sri K. LAKKAPPA.—The Government is unnecessarily wasting time of the House. They promised to introduce two Bills ; but they have introduced and passed only one Bill. The other Bill they have not introduced at all. I do not know how the Government will justify this. What in the intention of the Government in not introducing the Bill. The Government should answer this question.

Mr. SPEAKER.—Under Rule 21 (2) of the Rules of Procedure, it is mentioned "subsequent day". It does not mean the same day. Please look into it. It says "the subsequent day to be appointed by the Speaker. It necessarily means the day other than the one fixed for discussion of the Bill.

3-00 P.M.

MOTION OF THANKS TO THE GOVERNOR'S ADDRESS

(Debate continued)

† ಶ್ರೀ ಕೆ. ಲಕ್ಕಪ್ಪ.—ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಬಗ್ಗೆ ಪ್ರಸ್ತಾಪ ಮಾಡುತ್ತಾ ಈ ಸಭೆಯ ಮಾನ್ಯ ಸದಸ್ಯರುಗಳು ಸರ್ಕಾರದ ನೀತಿ, ಧೋರಣೆಯನ್ನು ಬಹುತೇಕವಾಗಿ ಟೀಕೆ ಮಾಡಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ನಾವು ಹೊಗಳತಕ್ಕಂತಹ ಮತ್ತು ಶ್ಲಾಘನೆಯನ್ನು ಮಾಡತಕ್ಕಂತಹ ಅಂಶ ಒಂದನ್ನು ಬಿಟ್ಟರೆ ಇನ್ನು ಯಾವ ಅಂಶವೂ ಕೂಡ ಸರ್ಕಾರದ ನೀತಿಯಾಗಲಿ, ಧೋರಣೆಯಾಗಲಿ ಈ ರಾಜ್ಯಪಾಲರ ಭಾಷಣದಲ್ಲಿ ಅಳವಡಿಸಿಲ್ಲ ಎಂಬುದು ವ್ಯಕ್ತಪಡುತ್ತದೆ. ಒಂದು ಅಂಶವನ್ನು ಹೇಳಿದ್ದಾರೆ, ಪಾಕಿಸ್ತಾನ ನಮ್ಮ ದೇಶದ ಮೇಲೆ ಧಾಳಿ ಮಾಡಿದಾಗ ನಮ್ಮ ಸೈನಿಕರು, ಯೋಧರು ಮಾಡಿದಂಥ ಸೇವೆ ಮತ್ತು ತ್ಯಾಗಗಳ ಬಗ್ಗೆ ಒಂದು ಮಾತನ್ನು ರಾಜ್ಯಪಾಲರು ಹೇಳಿದ್ದಾರೆ. ಈ ಅಂಶವನ್ನು ನಾವು ಮತ್ತು ಎಲ್ಲಾ ದೇಶದ ಪ್ರಜೆಗಳೂ ಕೂಡ ಒಪ್ಪತಕ್ಕ ಮತ್ತು ಮೆಚ್ಚತಕ್ಕ ಮಾತಾಗಿದೆ. ಈ ವಿಷಯವನ್ನು ಬಿಟ್ಟರೆ ಬಾಕಿ ಎಲ್ಲಾ ರಾಜ್ಯಪಾಲರ ಭಾಷಣ ಸಪ್ಪೆಯಾಗಿದೆ.

[MR. CHAIRMAN (Sri Y. Manjayya Shetty) in the Chair.]

ಮತ್ತು ಈ ಸರ್ಕಾರ ರೂಪಿಸತಕ್ಕಂಥ ನೀತಿ ಧೋರಣೆಗಳ ಮೇಲೆ ಯಾವ ಬೆಳಕನ್ನೂ ಕೂಡ ಚೆಲ್ಲತಕ್ಕ ಹವ್ಯಾಸ ಇಲ್ಲದೇ ಇರತಕ್ಕ ರಾಜ್ಯಪಾಲರ ಭಾಷಣ ಇದು ಆಗಿದೆ. ಸ್ವಾಮಿ, ಈ ರಾಜ್ಯಪಾಲರ ಭಾಷಣದ ಮೇಲೆ ಪ್ರಸ್ತಾಪ ಮಾಡಿದಾಗ ಅನೇಕ ಸದಸ್ಯರುಗಳು ಆಹಾರ ಮತ್ತು ಹಾಹಾಕಾರ, ಯೋಜನೆಗಳು, ಮತ್ತು ಸರ್ಕಾರದ ನೀತಿ ಇಲ್ಲದೆ ಇರತಕ್ಕ ಧೋರಣೆಗಳ ಬಗ್ಗೆ ಕಟುವಾಗಿ ಟೀಕೆ ಮಾಡಿದ್ದಾರೆ. ನಾನಾದರೂ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ಈ ರಾಜ್ಯಪಾಲರ ಭಾಷಣದಲ್ಲಿ ಗುಂಪು-ರಾಜಕೀಯ ಏನು ಇದೆ, ಈ ದೇಶದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಅನ್ನತಕ್ಕಂಥ ಅಂಶವನ್ನು ನಾವು ಪುಟಗಳನ್ನು ತಿರುವಿ ಹಾಕಿ ನೋಡಿದರೆ ಗೊತ್ತಾಗುತ್ತದೆ. ಎಲ್ಲಾ ಯೋಜನೆಗಳೂ ಯಶಸ್ವಿಯಾಗದೆ ದೇಶದಲ್ಲಿ ದೊಡ್ಡ ಕ್ಷಾಮವನ್ನು ತಂದಿರತಕ್ಕದ್ದು ನಮಗೆ

(ಶ್ರೀ ಕೆ. ಲಕ್ಕಪ್ಪ)

ಗೊತ್ತಿದೆ, ದೇಶದ ಎಲ್ಲಾ ಜನತೆಗೂ ಕೂಡ ಗೊತ್ತಿದೆ. ಸರ್ಕಾರ ಈಗ ದೊಡ್ಡ ಒಂದು ತುರ್ತು ಪರಿಸ್ಥಿತಿ ಎನ್ನತಕ್ಕ ಭೂತವನ್ನು ಜನತೆಗೆ ತೋರಿಸಿಕೊಂಡು ತುರ್ತು ಪರಿಸ್ಥಿತಿಯ ನೆಪದಲ್ಲಿ ತಮ್ಮ ರಾಜಕೀಯ ಚಟುವಟಿಕೆಗಳನ್ನು ದೇಶಾದ್ಯಂತ ವಿಸ್ತರಿಸಿ, ಎಲ್ಲಿ ಸ್ವಾಭಿಮಾನ ಎಲ್ಲಿ ದೇಶದ ರಕ್ಷಣೆ ಎಲ್ಲಿ ಪ್ರಜಾಪ್ರಭುತ್ವದ ನೀತಿ, ತತ್ವ ಇದೆಯೋ ಅದನ್ನು ಅಡಗಿಸತಕ್ಕಂತಹ ಒಂದು ಭ್ರಷ್ಟಾಚಾರದ ನೀತಿ ಪ್ರದರ್ಶನ ಮಾಡುತ್ತಾ ಇರುವುದನ್ನು ನೋಡಿದರೆ ಬಹುಶಃ ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರಭುತ್ವ ಅಳಿಸಿ ಹೋಗತಕ್ಕ ದಿಶೆಯಲ್ಲಿ ನಾವು ಇದ್ದೇವೆ ಎಂದು ಭಾಸವಾಗುತ್ತಾ ಇದೆ. ಪ್ರಜಾಪ್ರಭುತ್ವವನ್ನು ಯಾರು ರಕ್ಷಣೆ ಮಾಡಬೇಕೆನ್ನುವುದೂ ಕೂಡ ಗೊತ್ತಾಗುತ್ತಿಲ್ಲ. ಒಂದು ಉದಾಹರಣೆಯನ್ನು ಹೇಳಬೇಕಾದರೆ, ಸ್ವಾಮಿ, ತುರ್ತು ಪರಿಸ್ಥಿತಿಯ ನೆಪದಲ್ಲಿ ಡಿ.ಐ.ಆರ್. ಪ್ರಯೋಗ ಮಾಡುವುದನ್ನು ನೋಡಿದರೆ ಎಲ್ಲಿ ಜನತೆ ಹಸಿವನ್ನು ತಾಳಲಾರದೆ, ಅನ್ನ ಇಲ್ಲದೆ, ನೀರು ಇಲ್ಲದೆ ಮಳೆ ಇಲ್ಲದೆ, ಬೆಳೆ ಇಲ್ಲದೆ ಸತ್ಯಾಗ್ರಹವನ್ನು ಮಾಡಿ ತಮ್ಮ ನ್ಯಾಯವಾದ ಬೇಡಿಕೆಗಳಿಗೆ ಹೋರಾಟವನ್ನು ಮಾಡುತ್ತಾ ಇರಬೇಕು, ಪ್ರಜಾಪ್ರಭುತ್ವದ ರೀತಿಯಲ್ಲಿ ನಮ್ಮ ಹಕ್ಕು ಭಾಧ್ಯತೆಗಳನ್ನು ರಕ್ಷಣೆ ಮಾಡಬೇಕೆಂದು ಏನು ಪ್ರಯತ್ನವನ್ನು ಈ ದೇಶದಲ್ಲಿ ಮಾಡುತ್ತಾ ಇದ್ದಾರೆ ಆ ಪ್ರಜಾಪ್ರಭುತ್ವವಾದಿಗಳ ಮೇಲೆ ಡಿ. ಐ. ಆರ್. ಪ್ರಯೋಗ ಮಾಡಿ ಅವರನ್ನು ಜೈಲಿನಲ್ಲಿ ಹಾಕತಕ್ಕ ಲಕ್ಷಣಗಳಿಂದ ಪ್ರಜಾಪ್ರಭುತ್ವದ ತಳಹದಿಯನ್ನೇ ಕಿತ್ತು ಹಾಕತಕ್ಕ ಪ್ರವೃತ್ತಿಯಿಂದ ರಾಜಕೀಯವನ್ನು ಮಾಡುತ್ತಾ ಇದ್ದಾರೆ. ನಮ್ಮ ಮುಖ್ಯಮಂತ್ರಿಗಳ ಮಂತ್ರಿಮಂಡಲ, ಇವತ್ತಿನ ದಿವಸ ಮೈಸೂರು ದೇಶದಲ್ಲಿ ಈ ಬಗ್ಗೆ ಉದಾಹರಣೆಗೆ ಹೇಳಬಯಸುತ್ತೇನೆ. ಸ್ವಾಮಿ, ನಾರ್ತ್ ಕೆನರಾ ಜಿಲ್ಲೆಯಲ್ಲಿ ಯಾರು ಪ್ರಜಾಸತ್ತಾತ್ಮಕ ರೀತಿಯಲ್ಲಿ ದೇಶದ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸತಕ್ಕ ನೀತಿಯನ್ನು ರೂಪಿಸಿ, ಜನಗಳ ಕಷ್ಟನಿಷ್ಠೂರಗಳನ್ನು ಸರ್ಕಾರದ ಮುಂದೆ ಇಡತಕ್ಕ ಒಬ್ಬ ಸಮಾಜವಾದಿ ಕಾರ್ಯಕರ್ತರನ್ನು ತುರ್ತು ಪರಿಸ್ಥಿತಿಯ ಅಮಲಿನಲ್ಲಿ ಅರೆಸ್ಟ್ ಮಾಡಿದ್ದಾರೆ. ತುರ್ತು ಪರಿಸ್ಥಿತಿಯಲ್ಲಿ ಅವರನ್ನು ಅರೆಸ್ಟ್ ಮಾಡಲಿಕ್ಕೆ ಬಹುಶಃ ಪ್ರಬಲವಾದ ಕಾರಣ ಈಗಿನ ಹಣಕಾಸಿನ ಮಂತ್ರಿಗಳಿಗೂ ಅವರಿಗೂ ಇರತಕ್ಕ ರಾಗ ದ್ವೇಷಗಳೇ ಕಾರಣ ಎಂದು ನಮಗೆ ಕಾಗದ ಪತ್ರಗಳ ಮೂಲಕ ಅಲ್ಲಿಯ ಜನತೆಯ ಮೂಲಕ ತಿಳಿದು ಬಂದಿದೆ, ಕಾಗದ ಬರೆದಿದ್ದಾರೆ. ಅವರು ಪತ್ರಿಕೆಯ ಕಾರ್ಯಕರ್ತರು. ಅವರ ಜವಾಬ್ದಾರಿಯನ್ನು ಅವರು ಅರಿತುಕೊಂಡಿರತಕ್ಕವರು ಅಂಥವರ ಮೇಲೆ ಡಿ. ಐ. ಆರ್. ಪ್ರಯೋಗ ಮಾಡಿರತಕ್ಕ ಸರ್ಕಾರ ತುರ್ತುಪರಿಸ್ಥಿತಿಯ ನೆಪದಲ್ಲಿ ಬ್ಲಾಕ್ ಮಾರ್ಕೆಟ್ ಮಾಡತಕ್ಕ ಜನಗಳು ಎಷ್ಟು ಜನರನ್ನು ಹಿಡಿದಿದ್ದಾರೆ, ಮತ್ತು ದೇಶ ದ್ರೋಹ ಚಟುವಟಿಕೆಗಳಲ್ಲಿ ನಿರತರಾಗಿರುವ ಜನ ಎಷ್ಟು ಜನರನ್ನು ಹಿಡಿದಿದ್ದಾರೆ, ಮಂತ್ರಿಮಂಡಲದಲ್ಲಿ ಇದ್ದುಕೊಂಡು ಆಸ್ತಿಪಾಸ್ತಿಗಳನ್ನು ಮಾಡಿ ದೇಶದ್ರೋಹ ಕೆಲಸಗಳನ್ನು ಮಾಡತಕ್ಕ ಜನಗಳು ಎಷ್ಟು ಜನರನ್ನು ಹಿಡಿದಿದ್ದಾರೆ ಎಂಬ ಅಂಕಿ ಅಂಶ ಕೊಡುತ್ತಾ ಇಲ್ಲ. ಈ ಅಂಕಿ ಅಂಶಗಳನ್ನು ದೇಶದ ಮುಂದೆ ಇಡುವುದಕ್ಕೆ ಅವರು ತಯಾರಾಗಿಲ್ಲ. 1967ನೇ ಇಸವಿಯಲ್ಲಿ ನೀವು ಗೆಲ್ಲುವುದು ಬಹಳ ಕಷ್ಟ, ರೈತರ ಸ್ಥಿತಿ ಸುಧಾರಿಸಿಲ್ಲ, ರೈತರ ಆರ್ಥಿಕ ಸ್ಥಿತಿ ಯಾವ ರೀತಿಯಲ್ಲೂ ಸುಧಾರಿಸಿಲ್ಲ, ಆಹಾರದ ಕೊರತೆ ಹಾಹಾಕಾರ ದೇಶದಲ್ಲಿ ಇದೆ, ಅನ್ನಕ್ಕೆ ಅಭಾವ ಇದೆ, ನೀರಿನ ಅಭಾವ ಇದೆ, ಗಾಳಿಗೂ ಅಭಾವ ಬರುತ್ತದೆಯೋ ಏನೋ; ಗೊತ್ತಿಲ್ಲ. ಈ ರೀತಿಯಾಗಿ ಒಂದು ಸಂಚನ್ನು ನಡೆಸತಕ್ಕ ಮಂತ್ರಿಮಂಡಲವನ್ನು ಶ್ರೀಮಾನ್ ನಿಜಲಿಂಗಪ್ಪನವರು ನಿರ್ಮಾಣ ಮಾಡಿಕೊಂಡಿದ್ದಾರೆ. ಮೈಸೂರು ದೇಶದ ಮಂತ್ರಿಮಂಡಲದಲ್ಲಿರತಕ್ಕವರು ಯಾರು ಎಂದರೆ—ನಾನು ಈಗ ಹೇಳುವುದು ಪಾರ್ಲಿಮೆಂಟರಿ ಪದ ಎಂದು ತಿಳಿದಿದ್ದೇನೆ—ಅವರು ಗಾಂಪೊಡೆಯರ ಶಿಷ್ಯರು. ಕುದುರೆ ಮೊಟ್ಟೆ ಹಾಕಿದೆ ತೆಗೆದುಕೊಂಡು ಬಾ ಎಂದರೆ ತೆಗೆದುಕೊಂಡು ಬರುವುದಕ್ಕೆ ಹೋಗುತ್ತಾರೆ, ಕುದರೆ ಮೊಟ್ಟೆ ಇಡುತ್ತದೆ ಎಂದು ಹೇಳಿದರೆ ''ಹೌದು'' ಎಂದು ಹೇಳತಕ್ಕ ಮಂತ್ರಿಮಂಡಲ ಇದೆ. ದೇಶದಲ್ಲಿ ಇಂತಹ ದೇಶದ್ರೋಹ ಮಾಡತಕ್ಕ, ದೇಶದ್ರೋಹ ಕೆಲಸದಲ್ಲಿ ನಿರತರಾಗಿರತಕ್ಕ ಜನರು ಯಾರಿದ್ದಾರೆ ಅವರನ್ನು ಇದುವರೆಗೂ ಅರೆಸ್ಟ್ ಮಾಡಿಲ್ಲ. ಇದನ್ನು ಏಕೆ ಹೇಳುತ್ತೇನೆ ಎಂದರೆ, ಎಲ್ಲಿ ಡಿ. ಐ. ಆರ್. ಉಪಯೋಗಿಸಬೇಕು, ಡಿ. ಐ. ಆರ್. ಉಪಯೋಗಿಸುವುದಕ್ಕೆ ಇರಬೇಕಾದ ಪ್ರಬಲವಾದ ಕಾರಣಗಳೇನು ಎಂಬುದನ್ನು ಸ್ಪಷ್ಟವಾಗಿ ಈ ದಿವಸವೂ ಕೂಡ ಅವರು ತಿಳಿಸುತ್ತಾ ಇಲ್ಲ. ತಮ್ಮ ಪ್ರಭಾವವನ್ನು ಬೆಳೆಸುವುದಕ್ಕೆ ಮತ್ತು ವಿರೋಧ ಪಕ್ಷಗಳನ್ನು ದಮನ ಮಾಡತಕ್ಕ ಅವಹೇಳನ ಕಾರ್ಯಗಳಲ್ಲಿ ಈ ದಿವಸ ಮಂತ್ರಿಮಂಡಲ ತೊಡಗಿದೆ. ಇದನ್ನು ನಾವು ಪ್ರತಿಭಟಿಸಿದರೆ—ಗುಂಪನ್ನು ಮಾಡಿ, ಸತ್ಯಾಗ್ರಹ ಮಾಡಿ, ಅವರ ನೀತಿಯನ್ನು ಪ್ರತಿಭಟಿಸಿದ್ದೇ ಆದರೆ ಪ್ರತಿಭಟನೆ ಮಾಡತಕ್ಕ ಜನಗಳ ಮೇಲೆ ಡಿ. ಐ. ಆರ್. ಪ್ರಯೋಗ ಮಾಡಿ, ಅವರ ಹಕ್ಕನ್ನು ಮೊಟಕು ಮಾಡತಕ್ಕ ಇವರ ನೀತಿ ನಿಜವಾಗಿಯೂ ಪ್ರಜಾಪ್ರಭುತ್ವ ತತ್ವಕ್ಕೆ ಅನ್ವಯವಾಗಿದೆಯೇ ಎಂದು ಪ್ರಶ್ನೆ ಮಾಡುತ್ತೇನೆ.

ಹದಿನೆಂಟು ತಿಂಗಳು ನಮ್ಮ ದೇಶವನ್ನು ಆಳಿ ದಿವಂಗತರಾದಂಥ ಲಾಲ್ ಬಹಾದ್ದೂರ ಶಾಸ್ತ್ರಿಯವರ ನೀತಿ ನಮ್ಮ ಸರಕಾರ ಅನುಸರಿಸುತ್ತಿದೆಯೇ ಎಂದು ಕೇಳ ಬಯಸುತ್ತೇನೆ. ಸರಕಾರದಲ್ಲಿ ಇರತಕ್ಕಂಥವರು ಎಷ್ಟರ ಮಟ್ಟಿಗೆ ನೀತಿ ಪರಿಪಾಲನೆ ಮಾಡುತ್ತಿದ್ದಾರೆ? ಮಂತ್ರಿಮಂಡಲದಲ್ಲಿ ಭಿನ್ನಾಭಿಪ್ರಾಯವಿದೆ. ಮಂತ್ರಿ ಮಂಡಲದಲ್ಲಿ ತೆಗೆದುಕೊಂಡ ತೀರ್ಮಾನವನ್ನು ಕೆಲವು ಮಂತ್ರಿಗಳು ಬಹಿರಂಗವಾಗಿ ವಿರೋಧಿಸುತ್ತಾರೆ, ಈ ಸಭೆಯ ಸದಸ್ಯರೂ ಮಂತ್ರಿ ಮಂಡಲದಲ್ಲಿ ಸಚಿವೆಯರೂ ಆಗಿದ್ದ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಮಂತ್ರಿಮಂಡಲದ ಪಾನ ನಿರೋಧ ನೀತಿ ಸಡಲಿಕೆಯನ್ನು ವಿರೋಧಿಸಿ ಪ್ರತಿಭಟನೆ ಮಾಡಿ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಅವರು ಸಚಿವ ಪದವಿ ತ್ಯಾಗ ಮಾಡಿದ್ದರಿಂದ ಅವರ ಹೆಸರು ದೇಶದಲ್ಲಿ ಪ್ರಸಿದ್ಧವಾಗಿದೆ. ಮಂತ್ರಿಮಂಡಲದಲ್ಲಿ ಹರಿಜನ ಸಚಿವರಾದ ಶ್ರೀಮಾನ್ ರಾಚಯ್ಯನವರು ಬಹಿರಂಗವಾಗಿ ಒಂದು ದೊಡ್ಡ ಹೇಳಿಕೆ ಕೊಟ್ಟರು. ಮದ್ಯಪಾನ ನಿರೋಧ ನೀತಿ ಬದಲಾವಣೆಯಾದರೆ ನಾನು ರಾಜೀನಾಮೆ ಕೊಡುತ್ತೇನೆಂದು ಅವರು ಹೇಳಿದರು. ಹರಿಜನ ಉದ್ಧಾರಕ್ಕೋಸ್ಕರ ಹರಿಜನ ಹಿತ ಸಂರಕ್ಷಣೆಗೋಸ್ಕರ ರಾಜೀನಾಮೆ ಕೊಡುತ್ತೇನೆಂದು ಅವರು ಬಹಿರಂಗವಾಗಿ ಹೇಳಿದರು. ಬಹಿರಂಗವಾಗಿ ಹೇಳಿಕೆ ಕೊಟ್ಟದ್ದನ್ನು ಅವರು ತಿರಸ್ಕರಿಸಿ ಪ್ರಜಾಪ್ರಭುತ್ವ ಪದ್ಧತಿಗೆ ಮನ್ನಣೆ ಕೊಡದೆ ಮಂತ್ರಿಮಂಡಳದ ಅಧಿಕಾರ ಸ್ಥಾನಕ್ಕೆ ಇನ್ನೂ ಅಂಟಿಕೊಂಡು ಕೂತಿದ್ದಾರೆ. ಸರಕಾರದ ನೀತಿಯಲ್ಲಿ ಏಕರೂಪತೆ ಇದೆಯೇ? ಮಾನ್ಯ ರಾಚಯ್ಯನವರ ಆತ್ಮಗೌರವಕ್ಕೆ ಧಕ್ಕೆ ಬಂದಿಲ್ಲವೇ? ಮದ್ಯಪಾನ ನಿರೋಧ ಸಡಲಿಕೆಯ ಬಗ್ಗೆ ಕಾನೂನು ಮಾಡಿದಾಗ್ಗೆ ಅವರು ಏನು ಮಾಡುತ್ತಾರೆ? ಆತ್ಮ ಗೌರವ ಇರತಕ್ಕಂಥವರು ಮಂತ್ರಿಮಂಡಲದಲ್ಲಿ ಉಳಿಯುವುದಿಲ್ಲ. ಪ್ರಧಾನ ಮಂತ್ರಿಗಳಾಗಿದ್ದ ಲಾಲ್ ಬಹಾದ್ದೂರ ಶಾಸ್ತ್ರಿಯವರ ಗುಣಗಾನ ಮಾಡಿದ್ದಾರೆ. ಶಾಸ್ತ್ರಿಯವರು ಕಳೆದ 30 ವರ್ಷಗಳಲ್ಲಿ ಅನೇಕ ತ್ಯಾಗ ಬಲಿದಾನ ಮಾಡಿದ್ದಾರೆ. ಅವರು ಕೇಂದ್ರದಲ್ಲಿ ಮಂತ್ರಿಯಾಗಿದ್ದಾಗ್ಗೆ ಅರಿಯಲೂರು ರೈಲು ಅಪಘಾತವಾದಾಗ್ಗೆ ಅದರ ಹೊಣೆ ಅವರ ಮೇಲೆ ಇಲ್ಲದಿದ್ದರೂ ಕೂಡ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟರು. ಅವರ ನೀತಿಯನ್ನು ಈ ಸಂದರ್ಭದಲ್ಲಿ ಈಗ ಇರತಕ್ಕಂಥ ಮಂತ್ರಿಗಳಾದ ಶ್ರೀಮಾನ್ ರಾಚಯ್ಯನವರು ರಾಜೀನಾಮೆ ಕೊಟ್ಟು ಏಕೆ ಅನುಸರಿಸಲಿಲ್ಲ ಎಂದು ಪ್ರಶ್ನೆ ಮಾಡಬೇಕಾಗುತ್ತದೆ. ಇನ್ನೊಂದು ವಿಷಯ. ವಿಧಾನ ಸೌಧದ ಸುತ್ತುಮುತ್ತು ಸತ್ಯಾಗ್ರಹಿಗಳ ತಂಡ ಕುಳಿತುಕೊಂಡಿರುವುದನ್ನು ಎಲ್ಲರೂ ನೋಡಿದ್ದಾರೆ. ಮಂತ್ರಿಗಳು ಸಹ ಅವರನ್ನು ನೋಡಿದ್ದಾರೆ. ಈ ಸತ್ಯಾಗ್ರಹಿಗಳು ನೀರು ತೆರಿಗೆ ವಿಧಿಸಿರುವುದನ್ನು ವಿರೋಧ ಮಾಡುತ್ತಿದ್ದಾರೆ. ಇನ್ನೊಂದು ಕಡೆ ವೆಟ್ನರಿ ಕಾಲೇಜು ವಿದ್ಯಾರ್ಥಿಗಳು ಸತತವಾಗಿ ಮುಷ್ಕರ ಹೂಡಿ ಕೂತಿದ್ದಾರೆ. ಅವರು ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ರೀತಿ ಸಂದರ್ಭ ಇದ್ದರೂ ಕೂಡ ಮಂತ್ರಿ ಮಂಡಲದವರು ಇನ್ನೂ ತೆರಿಗೆ ಹಾಕಬೇಕು ಸರಚಾರ್ಜ ಹೆಚ್ಚು ಮಾಡಬೇಕು ಎಂದು ಯೋಚನೆ ಮಾಡುತ್ತಿದ್ದಾರೆ. ದೇಶವು ಕಷ್ಟ ಕಾಲದಲ್ಲಿರುವಾಗ್ಗೆ ಅನ್ಯಾಯ ಭ್ರಷ್ಟಾಚಾರದ ಜೊತೆಗೆ ತೆರಿಗೆ ಭಾರ ಹಾಕಿದರೆ ಜನತೆ ಏನು ಮಾಡಬೇಕು. ಇಂಥ ಪ್ರಜಾಪ್ರಭುತ್ವದಲ್ಲಿ ಜನತೆ ಬದುಕುವುದಿಲ್ಲ. ರಾಜ್ಯದ ಆಡಳಿತ ಶಿಥಿಲವಾಗಿದೆ. ಮೊದಲು ಭ್ರಷ್ಟಾಚಾರ ತೊಡೆದು ಹಾಕುವ ನೀತಿಯನ್ನು ಇಟ್ಟುಕೊಳ್ಳಬೇಕು. ಈ ಸಂತಾನಂ ಸಮಿತಿಯವರು ಕೊಟ್ಟರತಕ್ಕ ವರದಿ ಏನಾಯಿತು? ಮೈಸೂರು ದೇಶಕ್ಕೆ ಅದು ಬೇಕಾಗಿಲ್ಲವೇ? ಎಲ್ಲ ಸಹಕಾರ ಸಂಘಗಳಲ್ಲಿಯೂ ವಿದ್ಯಾ ಸಂಸ್ಥೆಗಳಲ್ಲಿಯೂ ಭ್ರಷ್ಟಾಚಾರ ವಿಪರೀತವಾಗಿದೆ. ನಾನು ಒಂದು ಪ್ರಶ್ನೆ ಹಾಕಿದಾಗ್ಗೆ ಶ್ರೀಮಾನ್ ಕಂಠಿಯವರು ಉತ್ತರ ಕೊಟ್ಟಿಲ್ಲ. ಅನೇಕ ಅಕ್ರಮಗಳನ್ನು ನಡೆಯುತ್ತಿವೆ. ಉದಾಹರಣೆಗಾಗಿ ಹೆಬ್ಬೂರು ಹೈಸ್ಕೂಲು ವಿಚಾರ ನಾನು ಅವರಿಗೆ ಹೇಳಿದೆ. ಆದರೆ ಅವರು ಯಾವ ವಿಚಾರ ಮಾಡಲಿಲ್ಲ. ಆದುದರಿಂದ ಈ ಬಗ್ಗೆ ಸಭೆಯಲ್ಲಿ ಜವಾಬು ಕೊಡಬೇಕೆಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನೀರಾವರಿ ಯೋಜನೆಗಳ ವಿಚಾರದಲ್ಲಿ ಸರಕಾರ ಆದೇಶ ಕೊಡದೇ ಇರುವುದರಿಂದ ಯೋಜನೆಯ ಫಲ ಇದುವರೆಗೆ ಜನತೆಗೆ ತಲುಪಿಲ್ಲ. ಯೋಜನೆಗಳು ಕಾರ್ಯಗತವಾಗಿಲ್ಲ. ಕ್ಷಾಮದಿಂದ ಜನ ದೇಶದಲ್ಲಿ ಸಾಯುತ್ತಿದ್ದಾರೆ. ಅನ್ನವಿಲ್ಲದೆ ಜನ ಸಾಯುತ್ತಿದ್ದಾರೆ. ಇದು ಸರಿಯಲ್ಲ. ನನ್ನ ಕ್ಷೇತ್ರದಲ್ಲಿ ಮೂರು ಸಂಸಾರಗಳು ಅನ್ನವಿಲ್ಲದೆ ಸತ್ತಿದ್ದಾರೆ. ಪತ್ರಿಕೆಗಳಲ್ಲಿ ಇಂಥ ವರದಿಗಳು ಅನೇಕ ಸಾರಿ ಬಂದಿವೆ. ಇದು ಆತ್ಮ ಗೌರವವೇ ಎಂದು ಕೇಳುತ್ತೇನೆ. ಯಾವ ಕೆಲಸ ಹೇಳಿದರೂ ಸರಕಾರದಲ್ಲಿ ಹಣ ಇಲ್ಲ ಎಂದು ಹೇಳುತ್ತಾರೆ. ನೀರಾವರಿ ಯೋಜನೆ ತೆಗೆದುಕೊಳ್ಳುವುದಕ್ಕೆ ಸರಕಾರದಲ್ಲಿ ಹಣ ಇಲ್ಲ. ಹಳೇ ಮೈಸೂರಿನಲ್ಲಿ ಆಗಿರತಕ್ಕಂಥ ಕೆಲಸಗಳ ಪಟ್ಟಿ ಹೊಸ ಮೈಸೂರು ಭಾಗದಲ್ಲಿ ಆಗಿರತಕ್ಕಂಥ ಕೆಲಸಗಳ ಪಟ್ಟಿ ಜಿಲ್ಲಾವಾರು ವಿವರ ಕೊಡಬೇಕೆಂದು ಕೇಳಿದ ಪ್ರಶ್ನೆಗೆ ಇದುವರೆಗೆ ಉತ್ತರ ಬಂದಿಲ್ಲ. ಈ ವಿವರ ಏಕೆ ಕೊಡುತ್ತಿಲ್ಲ? ನನ್ನ ಕ್ಷೇತ್ರದಲ್ಲಿ ಹಣವಿಲ್ಲದೆ ಕೆಲಸ ನಿಂತು ಹೋಗಿದೆ. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಬಹಳ ವಿಷಾದದಿಂದ ಸರಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ. ತುಮಕೂರು ಜಿಲ್ಲೆಯಲ್ಲಿ ಯಾವ ಯಾವ ಯೋಜನೆ ತೆಗೆದುಕೊಂಡಿದ್ದೀರೋ

(ಶ್ರೀ ಕೆ. ಲಕ್ಕಪ್ಪ)

ಅವುಗಳನ್ನು ತಕ್ಷಣ ಕಾರ್ಯಗತ ಮಾಡಬೇಕು ಎಂದು ಹೇಳುತ್ತೇನೆ. ಯಾರು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಕೊಡುತ್ತಾರೊ ಅಂಥವರಿಗೆ ಹಣ ಹಂಚುವುದು ನಡೆಯಿದೆ. ಹಣ ಹಂಚುವಾಗ್ಗೆ ಲಂಚ ತೆಗೆದುಕೊಳ್ಳುತ್ತಾರೆ. ಇಂಥ ನೀತಿ ತಕ್ಷಣ ಹೋಗಬೇಕು. ಕ್ರ್ಯಾಶ್ ಪ್ರೋಗ್ರಾಂನಲ್ಲಿ ತುಮಕೂರು ಜಿಲ್ಲೆಗೆ ಕೊಟ್ಟಿರತಕ್ಕ ಐವತ್ತು ಸಹಸ್ರ ರೂಪಾಯಿ ವಿಚಾರದಲ್ಲಿ ಭ್ರಷ್ಟಾಚಾರ ನಡೆದಿದೆ. ಇದನ್ನು ತನಿಖೆ ಮಾಡುವುದು ಅಗತ್ಯ.

ಇನ್ನು ಸಹಕಾರ ಸಂಘಗಳ ಬಗ್ಗೆ ಅನೇಕ ಸಲ ಈ ಮಾನ್ಯ ಸಭೆಯಲ್ಲಿ ಹೇಳಿದ್ದೇನೆ ಸಹಕಾರ. ಸಂಘಗಳ ಬಗ್ಗೆ ಯಾವ ನೀತಿ ಇಲ್ಲ.

ತಮಗೆ ಯಾರು ಓಟು ಮಾಡುತ್ತಾರೆಯೋ ಅಂಥವರಿಗೆ ಮಾತ್ರ ಅವರು ಸಹಾಯ ಮಾಡುತ್ತಿದ್ದಾರೆ. ಹೀಗೆ ಯಾರು ದೇಶದಲ್ಲಿ ಅನ್ಯಾಯ, ಅನಾಚಾರ, ಅಕ್ರಮ ನಡವಳಿಕೆ ಮತ್ತು ಭ್ರಷ್ಟಾಚಾರಗಳನ್ನು ಮಾಡುತ್ತಿದ್ದಾರೋ ಅವರೆಲ್ಲರೂ ಇವರ ಚೇಲಾಗಳೇ ಆಗಿದ್ದಾರೆ. ಈ ದಿವಸ ಇಂಥವರ ಕೈಲೇ ಆ ಸಂಸ್ಥೆಗಳು ಉಳಿದಿವೆ. ಈ ವಿಚಾರದಲ್ಲಿ ನಾನು ಮಾನ್ಯ ಸಚಿವರಾದ ಶ್ರೀಮಾನ್ ಪುಟ್ಟಸ್ವಾಮಿಯವರಿಗೆ ದೂರು ಸಹಿತವಾಗಿ ಒಂದು ದೊಡ್ಡ ಪಟ್ಟಿಯನ್ನು ಕಳುಹಿಸಿದ್ದೆನು. ಆದರೆ ಅವರು ಇಲ್ಲಿಯವರೆಗಾದರೂ ಅವರೇನು ಕ್ರಮಕೈಗೊಂಡರೆಂಬುದೇ ಗೊತ್ತಾಗಲಿಲ್ಲ. ಇಷ್ಟೇ ಅಲ್ಲದೆ ನಾನು ಕುಣಿಗಲ್ ತಾಲ್ಲೂಕಿನ ಸ್ಥಾಪಿತವಾಗಿರತಕ್ಕ, ಅಂದರೆ ಕೇವಲ 15 ದಿನಗಳಲ್ಲೇ 15 ಸಾಮೂಹಿಕ ವ್ಯವಸಾಯಗಾರರ ಸಹಕಾರ ಸಂಘಗಳು ಸ್ಥಾಪಿತವಾದುದರ ಬಗ್ಗೆ ಹಾಗೂ ಅವು ರಿಜಿಷ್ಟ್ರಾದ ಬಗ್ಗೆ 40-50 ಸಾವಿರ ರೂಪಾಯಿಗಳು ಪೋಲಾಗಿರತಕ್ಕ ವಿಚಾರದಲ್ಲೂ ದೂರನ್ನು ಕೊಟ್ಟೆನು. ಅದನ್ನು ಕೇಳತಕ್ಕವರೇ ಇಲ್ಲ. ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಒಂದೊಂದು ಸಂಘಕ್ಕೂ ಒಂದೆರಡೂ ಸಾವಿರ ರೂಪಾಯಿನ ಪ್ರಕಾರ ಲಂಚವನ್ನು ತೆಗೆದುಕೊಂಡು ಕೇವಲ 15 ದಿನಗಳಲ್ಲಿ 15 ಸಹಕಾರ ಸಂಘಗಳನ್ನು ರಿಜಿಸ್ಟರ್ ಮಾಡಿಕೊಟ್ಟಿದ್ದಾರೆ. ಅದನ್ನು ಕೂಡಲೆ ತನಿಖೆಮಾಡಬೇಕೆಂದು ದೂರನ್ನಿತ್ತುದಾಯಿತು. ಆದರೆ ಅದನ್ನು ಇಲ್ಲಿಯತನಕ ಯಾರೂ ವಿಚಾರಣೆ ಮಾಡಿಲ್ಲ, ಮಾಡುವುದು ಇಲ್ಲವೆಂದು ಕಾಣುತ್ತದೆ. ಇದಕ್ಕೆಲ್ಲಾ ಮುಖ್ಯ ಕಾರಣ ಈ ದಿವಸ ಆತ್ಮಗೌರವವಿಲ್ಲದ, ನೀತಿನೇಮಗಳನ್ನು ಪಾಲಿಸದಂಥ ಒಂದು ಸರ್ಕಾರ ಆಡಳಿತವನ್ನು ನಡೆಸುತ್ತಿರುವುದರಿಂದ ದೇಶದಲ್ಲಿ ಇಷ್ಟೆಲ್ಲಾ ತೊಂದರೆಗಳಾಗುತ್ತಿದೆ. ಇಂಥ ಸರ್ಕಾರ ಪ್ರಜಾಪ್ರಭುತ್ವಕ್ಕನುಗುಣವಾಗಿ ಜನತಾ ಸೇವೆಯನ್ನು ಮಾಡುವುದಕ್ಕೆ ಲಾಯಖ್ಖಿಲ್ಲವಾದುದರಿಂದ ಇವರು ಕೂಡಲೇ ರಾಜೀನಾಮೆ ಕೊಡಬೇಕೆಂದು ನಾನು ಸರ್ಕಾರದವರನ್ನು ಒತ್ತಾಯಮಾಡುತ್ತೇನೆ.

ಸ್ವಾಮಿ ಅಧ್ಯಕ್ಷರೇ, ದೇಶದಲ್ಲಿ ನಡೆಯುತ್ತಿರುವ ಅನೀತಿ ಅನ್ಯಾಯ ಭ್ರಷ್ಟಾಚಾರಗಳ ಬಗ್ಗೆ ನಮ್ಮ ಸ್ನೇಹಿತರು ಪದೇ ಪದೇ ಹೇಳುತ್ತಲೇ ಇದ್ದಾರೆ. ಈ ದಿನ ಜವಾಬ್ದಾರಿ ಸ್ಥಾನದಲ್ಲಿರತಕ್ಕವರು ಅಂದರೆ ಅಧಿಕಾರಸ್ಥಾನವನ್ನಲಂಕರಿಸಿರತಕ್ಕ ಜನರು ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳ ಮೇಲೆ ಅನೇಕ ದೂರುಗಳಿವೆ. ಆದರೇನು ? ಆ ಕೇಂದ್ರ ಸರ್ಕಾರದಲ್ಲಿಯಾದರೋ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳವರು ಶ್ರೀ ಟಿ. ಟಿ. ಕೆ. ಅವರನ್ನು ಸಂತಾನಂ ಸೂತ್ರಕನುಸಾರವಾಗಿ ಅವರು ರಾಜೀನಾಮೆಯನ್ನು ಅಂಗೀಕಾರ ಮಾಡುವ ಮುನ್ನ ಅವರನ್ನು ಜುಡಿಷಿಯಲ್ ವಿಚಾರಣೆಗೆ ಒಳಪಡುವುದಾದರೆ ಅವರ ರಾಜಿನಾಮೆಯನ್ನು ಹಿಂದಕ್ಕಿಡುವುದಾಗಿ ಹೇಳಲು, ಅವರು ಒಪ್ಪದಿದ್ದ ಕಾರಣ ಅವರ ರಾಜೀನಾಮೆಯನ್ನು ಕೂಡಲೇ ಅಂಗೀಕಾರ ಮಾಡಿ ಅವರನ್ನು ಕೆಲಸದಿಂದ ನಿವೃತ್ತಿಯಾಗುವಂತೆ ಮಾಡಿದರು. ನಮ್ಮ ರಾಜ್ಯದಲ್ಲಾದರೋ ಇಲ್ಲಿರತಕ್ಕ ಮಂತ್ರಿಮಂಡಲದ ಮೇಲೆ ಜವಾಬ್ದಾರಿಯುತರಾದ 30-40 ಜನ ಶಾಸನ ಸಭಾ ಸದಸ್ಯರು ದೂರನ್ನು ಕೊಟ್ಟರೆ ಆ ಕೇಂದ್ರದವರು ಅನುಸರಿಸುತ್ತಿರುವ ನೀತಿಯ ಪ್ರಕಾರ ಇಲ್ಲಿ ಸಹಾ ಏಕೆ ಸಂತಾನಂ ಸಮಿತಿಯ ತೀರ್ಮಾನದಂತೆ ಮಂತ್ರಿಮಂಡಲವನ್ನು ಜುಡಿಷಿಯಲ್ ವಿಚಾರಣೆಗೆ ಗುರಿಪಡಿಸಲಿಲ್ಲ ಎಂದು ಪ್ರಶ್ನೆ ಮಾಡಲಚ್ಛಿಸುತ್ತೇನೆ ! ಇಲ್ಲಿಯ ಮಂತ್ರಿಗಳು ಇಲ್ಲಿಯತನಕ ಅವರು ಗಳಿಸಿರತಕ್ಕ ಆಸ್ತಿಪಾಸ್ತಿಗಳನ್ನು ಈಗ ಅವರ ಅಣ್ಣ ತಮ್ಮ ಮತ್ತು ಹೆಂಡತಿಯರ ಹೆಸರುಗಳಲ್ಲಿ ವರ್ಗಾವಣೆ ಮಾಡುತ್ತಿದ್ದಾರೆಂದು ವದಂತಿ ಬಂದಿದೆ. ನಮ್ಮ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳವರಿಗೆ ವಾಸಮಾಡಲು ಒಂದು ಸ್ವಂತ ಮನೆ ಕೂಡ ಇಲ್ಲ, ಆಲ್ಲಿ ಹಾಗಿದ್ದರೆ ಇಲ್ಲಿ ಮೈಸೂರಿನ ಮಂತ್ರಿಮಂಡಲ ಅನೀತಿ, ಅನ್ಯಾಯ, ಭ್ರಷ್ಟಾಚಾರಗಳ ತೌರೂರಾಗಿದೆ, ಇವರು ಬಾಯಲ್ಲಿ ಹೇಳುವುದೇ ಒಂದು, ಕೈಲಿ ಮಾಡುವುದೇ ಒಂದು. ಇವರಿಗೆ ಯಾವ ನೈತಿಕ ಬೆಂಬಲವೂ ಇಲ್ಲ. ಸಾಲದ್ದಕ್ಕೆ ಪ್ರಜಾಪ್ರಭುತ್ವದ ಹೆಸರಿನಲ್ಲಿ ಪ್ರಜೆಗಳ ಅಧಿಕಾರವನ್ನು ಕೊಲೆ ಮಾಡುತ್ತಿದ್ದಾರೆ. ಇವರ ಸಾರ್ವಭೌಮತ್ವದ ಪರಿಣಾಮವಾಗಿ ಪ್ರಜೆಗಳು ಹಕ್ಕುಬಾಧ್ಯತೆಗಳೆಲ್ಲಾ ಮೊಟಕಾಗುತ್ತಿವೆ. ಇವರಿಂದಾಗಿ

ಮೈಸೂರು ರಾಜ್ಯದಲ್ಲಿ ಇಲ್ಲಿಯವರೆಗೂ ನಡೆಸಿದ ಯೋಜನೆಗಳಿಂದ ಯಾವ ಪ್ರಯೋಜನವೂ ಆಗಿಲ್ಲ ಜನರಿಗೆ ಅನ್ನ ಬಟ್ಟೆಗೆ ಅತಂತ್ರ, ದನಕರುಗಳಿಗೆ ಮೇವಿಲ್ಲ, ಕುಡಿಯುವುದಕ್ಕೆ ನೀರಿಲ್ಲ, ಅಂಥ ರಾಜವನ್ನು ಇವರು ನಿರ್ಮಾಣ ಮಾಡಿದ್ದಾರೆ ಇಲ್ಲಿ. ನಮ್ಮ ತುಮಕೂರು ಜಿಲ್ಲೆಯು ಬಗ್ಗೆ ಅದು ಯಾವಾಗಲೂ ಕ್ಷಾಮಕ್ಕೆ ತುತ್ತಾಗುತ್ತಿರುವುದರಿಂದ ಅಲ್ಲಿ ಆ ಕ್ಷಾಮ ನಿವಾರಣೆಗಾಗಿ ಯಾವುದಾದರೆಂದು ಶಾಶ್ವತವಾದ ಪರಿಹಾರ ಮಾರ್ಗವನ್ನು ಕಂಡುಹಿಡಿಯಬೇಕೆಂದು ನಮ್ಮ ಜಿಲ್ಲೆಯು ಜನರು ಮುಖ್ಯ ಮಂತ್ರಿಗಳಲ್ಲಿ ಪದೇ ಪದೇ ಮನವಿಗಳನ್ನು ಮಾಡಿಕೊಂಡಿದ್ದರೂ ಅದಕ್ಕೆ ತಕ್ಕ ಮಾರ್ಗವನ್ನು ಕಂಡುಹಿಡಿಯದೆ ಅಲ್ಲಿಗೆ ಒದಗಿಸುತ್ತಿರುವ ಹಣವೂ ಸಹ ಏತಕ್ಕೂ ಸಾಲದೆ ಅಲ್ಲಿಯ ಜನರು ಊರುಗಳನ್ನು ಬಿಟ್ಟು ವಲಸೆ ಹೋಗುತ್ತಿದ್ದಾರೆ. ಅಲ್ಲಿ ಜನರಿಗೆ ತಿನ್ನುವುದಕ್ಕೆ ಅನ್ನವಿಲ್ಲ, ಕುಡಿಯುವುದಕ್ಕೆ ನೀರಿಲ್ಲ—ದನಕರುಗಳಿಗೆ ಮೇವಿಲ್ಲ. ತುಮಕೂರು ಜಿಲ್ಲೆಯಲ್ಲಿ ಕೆಲವು ಭಾಗದಲ್ಲಾದರೂ ನೀರಾವರಿ ಸೌಲಭ್ಯಗಳನ್ನು ಒದಗಿಸಿದರೆ ವರ್ಷದಲ್ಲಿ ಎರಡು ಬೆಳೆಗಳನ್ನು ತೆಗೆಯುವುದಕ್ಕೆ ಸಹಾಯವಾಗುತ್ತದೆಂದು ಎಷ್ಟೋ ಹೇಳಿಕೊಂಡಿದ್ದಾಯಿತು. ಆದಾಗ್ಯೂ ಅಲ್ಲಿಯ ರೈತರಿಗೆ ಸರ್ಕಾರದಿಂದ ಇದುವರೆಗೂ ಯಾವ ಸಹಾಯವೂ ಆಗಿಲ್ಲ. ಆ ಜಿಲ್ಲೆಗೆ ಸರ್ಕಾರದವರು ಒಂದು ಕಾಸನ್ನೂ ಕ್ಷಾಮ ನಿವಾರಣೆಯ ಬಗ್ಗೆ ಖರ್ಚುಮಾಡಿಲ್ಲ. ನಮ್ಮ ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮಿಗೆ ಬೇಕಾದಷ್ಟು ಅವಕಾಶವಿದ್ದಾಗ್ಯೂ ಅಲ್ಲಿಗೆ ಸಹಾಯಮಾಡದೆ ದಕ್ಷಿಣ ಕನ್ನಡ ಜಿಲ್ಲೆಗೆ ಈ ಬಗ್ಗೆ ಹೆಚ್ಚಿನ ಸಹಾಯವನ್ನು ಮಾಡಿದ್ದಾರೆ. ಹೀಗೆ ಮಾಡಿರತಕ್ಕದ್ದು ಔಚಿತ್ಯವೇ ಎಂದು ಹೇಳುತ್ತೇನೆ? ಇಂಥ ಅನ್ಯಾಯ ಮಾಡತಕ್ಕ ಸರ್ಕಾರ ಕೂಡಲೇ ರಾಜೀನಾಮೆ ಕೊಡಬೇಕಾದ್ದು ಅತ್ಯವಶ್ಯಕ.

ಸರ್ಕಾರದವರು, ನಾಳೆ ಇದೇ ಸಭೆಯ ಮುಂದೆ ರೈತರ ಮೇಲೆ ಒಂದು ಘೋರ ಪರಿಣಾಮವನ್ನು ಬೀರತಕ್ಕ ಸರ್‌ಚಾರ್ಜ್ ಎಂಬ ಮಸೂದೆಯನ್ನು ತರುವುದರಲ್ಲಿದ್ದಾರೆ. ಆಗ ನಾವು ಅದನ್ನು ಇಲ್ಲಿ ಮೂವ್ ಮಾಡುವುದಕ್ಕೆ ಅವಕಾಶಕೊಡದಂತೆ ಪ್ರತಿಭಟನೆಯನ್ನು ಮಾಡುತ್ತೇವೆ. ಈ ವಿಚಾರದಲ್ಲಿ ಸರ್ಕಾರದವರು ಈಗಲೇ ಒಂದು ಎಚ್ಚರಿಕೆಯನ್ನು ತಂದುಕೊಂಡು ಅದನ್ನು ರದ್ದುಮಾಡಿದರೆ ಸರಿ. ಈಗ ಡಿ. ಐ. ಆರ್. ಪ್ರಕಾರ ಕೆಲವರನ್ನು ದೇಶದಲ್ಲಿ ಬಂಧಿಸಿದ್ದಾರೆ. ಇಲ್ಲಿ ಪ್ರಜಾ ಪ್ರಭುತ್ವಕ್ಕೆ ಕೊಡಲಿಯು ಪೆಟ್ಟು ಬಿದ್ದಿದೆ. ಆದ್ದರಿಂದ ಇಲ್ಲಿ ಈ ಸರ್ಕಾರ ಕೂಡಲೇ ರದ್ದಾಗಬೇಕು, ಇಲ್ಲಿ ಗೌರ್ನರವರ ಆಡಳಿತ ಬರಬೇಕು ಎಂಬುದಾಗಿ ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುವ ಮುನ್ನ ನನಗಿಷ್ಟು ಮಾತನಾಡಲು ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಸುಬ್ಬಯ್ಯ ನಾಯಕ್ (ಸೂಳ್ಯ).—ಮಾನ್ಯ ಸಭಾಪತಿಗಳೇ, ಮೈಸೂರು ರಾಜ್ಯಪಾಲರು ವಿಧಾನ ಮಂಡಲದ ಸಭೆಗಳನ್ನುದ್ದೇಶಿಸಿ ಮಾಡಿದ ಭಾಷಣದ ಬಗ್ಗೆ ಮಂಡಿಸಿರತಕ್ಕ ಅಭಿನಂದನಾ ನಿರ್ಣಯವನ್ನು ನಾನು ಸಮರ್ಥಿಸುತ್ತಾ, ಇಲ್ಲಿ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಇತ್ತೀಚೆಗೆ ಇತಿಹಾಸಪ್ರಸಿದ್ಧವಾದಂಥ ಒಂದು ಯುದ್ಧ ನಡೆಯಿತು. ಅಂಥ ಯುದ್ಧವನ್ನು ಎದುರಿಸಿ ಜಯಗಳಿಸಿದಂಥ ನಮ್ಮ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳವರು, ಅಲ್ಲಿಂದ ತಾಷ್ಕೆಂಟ್ ಶಾಂತಿ ಸಮ್ಮೇಳನಕ್ಕೆ ಹೋಗಿ ಅಲ್ಲಿ ತಮ್ಮ ಕಾರ್ಯವನ್ನು ಸಾಧಿಸಿ ನಾವೆಲ್ಲರೂ ಸಂತೋಷಪಡತಕ್ಕ ಕಾಲಕ್ಕೆ ಅವರು ನಮ್ಮನ್ನು ಅಗಲಿ ಹೋದರು. ಆದರೂ ಅವರು ದೇಶಕ್ಕೆ ಒಂದು ಒಳ್ಳೆಯ ನಿರೂಪಣೆಯನ್ನು ನೀಡಿದ್ದಾರೆ.

ಈ ಹಿಂದೆ ಭಾರತದ ಸ್ವಾತಂತ್ರ್ಯ ಸಾಧನೆಯಲ್ಲಿ ಮಹಾತ್ಮಗಾಂಧಿಯವರು ಕೆಲವು ತತ್ವಗಳನ್ನು ರೂಪಿಸಿಕೊಂಡು ಭಾರತದ ಸ್ವಾತಂತ್ರ್ಯವನ್ನು ಗಳಿಸಿದರು. ಹಾಗೆ ಅವರು ರೂಪಿಸಿಕೊಂಡ ತತ್ವಗಳಲ್ಲಿ ದೇಶದಲ್ಲಿ ಪಾನನಿರೋಧವನ್ನು ಜಾರಿಗೆ ತರಬೇಕಾದ್ದು ಒಂದು. ಆದರೆ ಇತ್ತೀಚೆಗೆ ಅದನ್ನು ಸಡಿಲ ಮಾಡುವುದಾಗಿ ಸರ್ಕಾರ ಒಂದು ತೀರ್ಮಾನಕ್ಕೆ ಬಂದಕಾರಣ ನಮ್ಮ ರಾಜ್ಯದ ಮಂತ್ರಿ ಮಂಡಲದಲ್ಲಿದ್ದ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಟ್ಟರು. ಅವರ ತ್ಯಾಗ ಪ್ರಶಂಸನೀಯವಾದುದ್ದಾಗಿದೆ. ಇದರ ಬಗ್ಗೆ ಯಾವ ಟೀಕೆಗಳಿಗೂ ಅವಕಾಶವಿಲ್ಲವೆಂದು ಹೇಳುತ್ತೇನೆ.

3-30 P.M.

ಈಗ ನಮ್ಮ ಆಹಾರದ ಪರಿಸ್ಥಿತಿಯನ್ನು ಎಣಿಸುವಾಗ ಪ್ರಕೃತಿಯಾದರೂ ದೇಶಕ್ಕೆ ಮುನಿದ ಹಾಗೆ ಆಗಿದೆ. ಮಳೆಯಿಲ್ಲ, ಬೆಳೆಯಿಲ್ಲ; ನಮ್ಮ ಮೈಸೂರು ರಾಜ್ಯ ಬಹುಶಃ ಹಿಂದೂಸ್ಥಾನದ ಎಲ್ಲಾ ರಾಜ್ಯಗಳಿಗಿಂತಲೂ ಅತಿ ಕಡಿಮೆ ನೀರಾವರಿ ಸೌಕರ್ಯಗಳಿರುವಂಥ ರಾಜ್ಯವಾಗಿದೆ. ಅದು ಶೇಖಡ 7 ಅಂಶ. ಮನುಷ್ಯ ನಿರ್ಮಿತ ನೀರಾವರಿ ಸೌಲಭ್ಯ ಎಷ್ಟೇ ಇದ್ದರೂ ದೇಶದಲ್ಲಿ ಮಳೆ

(ಶ್ರೀ ಎಸ್. ಮಲ್ಲಯ್ಯ ನಾಯಕ್)

ದಾರದಿದ್ದರೆ ಆಹಾರ ಪರಿಸ್ಥಿತಿ ಇಷ್ಟಾದರೂ ಇರುವುದು ಒಂದು ವಿಶೇಷ. ಇನ್ನೂ ಇದಕ್ಕಿಂತ ಹೆಚ್ಚು ಆಹಾರ ಪರಿಸ್ಥಿತಿಯನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ. ಏನಾದರೂ ಅಗ್ಗದ ಕಾಲದಲ್ಲಿ ನೀರಾವರಿ ಸೌಕರ್ಯ ಮಾಡದರೆ ಚೆನ್ನಾಗಿ ವ್ಯವಸಾಯ ಮಾಡುವುದು ಅನಿವಾರ್ಯವಾಗಿದೆ. ಅದಕ್ಕಾಗಿ ಹೆಚ್ಚಿನ ಹಣ ಬೇಕೆಂದು ಹೇಳಿ ನಮ್ಮ ರಾಜ್ಯ ಪಾಲರ ಭಾಷಣದಲ್ಲಿ ಕೆಲವು ವಿಧೇಯಕಗಳನ್ನು ಈ ಅಧಿವೇಶನದಲ್ಲಿ ಮಂಡಿಸಬೇಕೆಂದಿದ್ದೇವೆಂದು ಸರ್ಕಾರದವರು ಹೇಳಿರುವುದು ಅಗತ್ಯವೆಂದು ಕಾಣಿಸುತ್ತದೆ. ಈ ತರಹದ ಕ್ಷಾಮವು ಹಿಂದೆ ಇತ್ತೆಂದು ನಮಗೆ ಭಾಸವಾಗುತ್ತದೆ. ನಮ್ಮ ಮನೆಯಲ್ಲಿ ಹಿರಿಯರು ಹೇಳಿದ್ದನ್ನು ನಾನು ಕೇಳಿದ್ದೇನೆ. ಹಿಂದೆ ಕ್ಷಾಮ ಪರಿಸ್ಥಿತಿ ಬಂದಾಗ ಜನಗಳು ಅಕ್ಕಿಯನ್ನು ನೆನಸಿ ವಸ್ತ್ರದಲ್ಲಿ ಕಟ್ಟಿ ನಂತರ ಹಿಂಡಿ ಅದರ ನೀರನ್ನು ಕುಡಿದು ಪುನಃ ಅದನ್ನು ಒಣಗಿಸುವುದು. ಅಂತಹ ದುರ್ಗತಿಯ ಕ್ಷಾಮ ಇದ್ದ ಪರಿಸ್ಥಿತಿ ಇತ್ತು. ಮಳೆ ಬಾರದಿದ್ದರೆ ಕಾಲದ ಪರಿಸ್ಥಿತಿ ಈ ರೀತಿ ಕೆಡುವುದು ಅನಿವಾರ್ಯ. ಆದರೆ ಅಂಥ ಒಂದು ಘೋರವಾದ ಬರಗಾಲ ಬಾರದಿರಲೆಂದು ದೇವರನ್ನು ಪ್ರಾರ್ಥಿಸುತ್ತೇನೆ. ಈಗ ಪರಿಸ್ಥಿತಿ ಸ್ವಲ್ಪ ಕೆಟ್ಟರೆ ಅದನ್ನು ಘೋರವಾಗಿ ಹೇಳುವಂತಹ ಕಾಲ ಬಂದಿದೆ. ಹಿಂದಿನ ಕಾಲದಲ್ಲಿ ಈ ಸುದ್ದಿಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಾ ಇರಲಿಲ್ಲ. ಆದರೆ ಈಗಿನ ಕಾಲದಲ್ಲಿ ಒಂದೊಂದು ಸುದ್ದಿಗಳು ಪತ್ರಿಕೆಗಳಲ್ಲಿ ಪ್ರಸಾರವಾದಾಗ ಎಲ್ಲಾ ಭೂತಾಕಾರವಾಗಿ ತೋರಿಸುವಂಥ ಪರಿಸ್ಥಿತಿ ಇದೆ. ಇದನ್ನು ಎಲ್ಲಾ ಜನಗಳು ಓದಿ ಗಾಬರಿಯಾಗುತ್ತಾರೆ.

ಇನ್ನು ನೀರಾವರಿ ಮತ್ತು ವ್ಯವಸಾಯದ ವಿಚಾರಗಳಲ್ಲಿ ಹೇಳುವುದಾದರೆ, ಅದು ನಾವು ಹಾಕಿರುವ ಯೋಜನೆಯು ವಾಸ್ತವಾಂಶಕ್ಕೆ ದೂರವಿರುವುದರಿಂದ ಸ್ವಲ್ಪ ಕಷ್ಟ ಬರಲಿಕ್ಕೆ ಕಾರಣವಾಯಿತು. ಉದಾಹರಣೆಗೆ ಹೇಳುವುದಾದರೆ, ಮೊದಲು ಉತ್ತಮ ಬೆಳೆಗಳು ಬರುತ್ತದೆಂದು ನಿರೀಕ್ಷಿಸಿದ್ದೆವೆಂದು ರಾಜ್ಯಪಾಲರ ಭಾಷಣದಲ್ಲಿ 5ನೇ ಪುಟದಲ್ಲಿ ಇದೆ. ಸುಮಾರು 2 ಲಕ್ಷದ 96 ಸಾವಿರ ಟನ್ ಅಥವಾ 3 ಲಕ್ಷ ಟನ್ ಆಹಾರ ನಮಗೆ ಲೆವಿ ಮಾಡಲಿಕ್ಕೆ ಸಿಗಬಹುದೆಂದು ಅಂದಾಜು ಮಾಡಲಾಗಿತ್ತು. ಆದರೆ ಕೊನೆಗೆ ಸಿಕ್ಕಿದ್ದು ಒಂದು ಲಕ್ಷ ಟನ್ ಮಾತ್ರವೆಂದು ಹೇಳುತ್ತಾರೆ. ಈಗ ತಿಳಿದುಬಂದಿರುವಂತೆ ಸಂಗ್ರಹಣಾದೇಶಗಳ ಮೇರೆಗೆ ವಸೂಲಾದ ಎಲ್ಲಾ ಆಹಾರಧಾನ್ಯಗಳು ಒಟ್ಟಿಗೆ ಸೇರಿದರೆ ಕೇವಲ ಒಂದ ಲಕ್ಷ ಟನ್ನಿನಷ್ಟಾಗುವುದೆಂದು ಊಹಿಸಲಾಗಿದೆ. ಅಂದರೆ ನಿರೀಕ್ಷಿಸಿದ್ದು 3 ಲಕ್ಷ ಟನ್ ಆದರೆ ಸಿಕ್ಕಿದ್ದು ಒಂದು ಲಕ್ಷ ಟನ್, ಅಂದರೆ ನಮ್ಮ ಯೋಜನೆಗಳು ತಿರುವುಮುರುವು ಆಗಿವೆ ಎಂದು ಹೇಳಬೇಕಾಗುತ್ತದೆ.

ಇನ್ನು ನೀರಾವರಿ ವಿಚಾರದಲ್ಲಿ ನಾನು ವಿಶೇಷವಾಗಿ ಹೇಳುವುದಾದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಯಿಲ್ಲದೆ ಬಹಳ ಕಷ್ಟವಾಗಿದೆಯೆಂದು ಹೇಳಿದ್ದಾರೆ. ಸಣ್ಣ ಸಣ್ಣ ಹಿಡುವಳಿದಾರರು ತಾವು ಕೊಡಬೇಕಾದ ಲೆವಿಯನ್ನು ಕೊಡುವುದಕ್ಕಾಗುವುದಿಲ್ಲವೆಂದು ಕೆಲವು ಸಾರಿ ಹೇಳುತ್ತಾರೆ ನಿಜ. ಇಲ್ಲಿ ಒಂದೊಂದೇ ಸಮಸ್ಯೆಗಳು ಏಳುತ್ತವೆ. ಈಗ ಮಣ್ಣಿನ ಕಟ್ಟಡಗಳಿವೆ. ಹೊಳೆಗಳಿಗೆ "ವೆಟೆಡ್ ಡ್ಯಾಮ್ಸ್" ಮಾಡಿದರೆ ಒಳ್ಳೆಯದೆಂದು ಈ ಸಮಸ್ಯಾ ನಿವಾರಣೆಗೆ ಒಂದು ಸೂಚನೆ ಹೇಳುತ್ತೇನೆ. ಪಂಚಾಯಿತಿ ರಾಜ್ಯಗಳಿಂದ ತುಂಬ ಪ್ರತಿಫಲವನ್ನು ನಿರೀಕ್ಷಿಸುತ್ತಾ ಇದ್ದಾರೆ. ಅವುಗಳ ಕೆಲಸ ಬಹಳ ಮಹತ್ವದ್ದು ಆಗಿವೆ. ಅವಕ್ಕೆ ಇರುವ ಕೆಲಸಗಳೆಂದರೆ ವ್ಯವಸಾಯೋತ್ಪಾದನೆಯಲ್ಲಿ ಮಹತ್ವದ ಪಾತ್ರ ವಹಿಸುವುದು, ಗ್ರಾಮ ರಕ್ಷಣೆ ಮಾಡುವುದು, ಕಂದಾಯ ವಸೂಲಿಯ ಕಾರ್ಯಕ್ರಮ, ಸ್ವಯಂಸೇವಕದಳದ ರಚನೆ. ಇವೆಲ್ಲಾ ಪಂಚಾಯಿತಿಯ ಮಹತ್ವದ ಕೆಲಸಗಳಾಗಿವೆ. ಆದರೆ ಈಗ ಇರುವ ಕಾನೂನಿನ ತೊಂದರೆಯಿಂದಲೂ ಮತ್ತು ಜಿಲ್ಲಾ ಮಟ್ಟದಲ್ಲಿ ಹೇಳುವುದಾದರೆ, ಕಾನೂನುಗಳಿಂದ ಸ್ವಲ್ಪ ಆತಂಕಗಳಿರುವುದರಿಂದಲೂ ಪಂಚಾಯಿತಿ ಕೆಲಸಕಾರ್ಯಗಳು ತಡವಾಗುವುದಕ್ಕೆ ಕಾರಣವಾಗುತ್ತದೆಂದು ಹೇಳುತ್ತೇನೆ. ಬೆಳೆ ಬೆಳೆಯಬೇಕು, ಆಹಾರೋತ್ಪನ್ನು ಹೆಚ್ಚಾಗಬೇಕು ಎಂದು ಎಲ್ಲರೂ ಹೇಳುತ್ತಾರೆ. ಆದರೆ ಕೃಷಿ ಮಾಡುವ ರೈತನ ಕಡೆಗೆ ಗಮನಕೊಟ್ಟಿಲ್ಲ. ಅವನು ಬೆಳೆದ ಬೆಳೆಗೆ ಸರಿಯಾದ ಬೆಲೆ ಕೊಟ್ಟಿಲ್ಲ. ಸರ್ಕಾರದವರು ರೈತನ ಬೆಳೆಗೆ ಮಾರ್ಕೆಟ್ ಧಾರಣೆ ಕೊಟ್ಟಿಲ್ಲ. ಈಗ ಕೊಡುತ್ತಿರುವ ಬೆಲೆ ಮಾರ್ಕೆಟ್ ಬೆಲೆಯ ಅರ್ಧದಷ್ಟಿದೆ. ಈ ಅರ್ಧ ಬೆಲೆಯನ್ನು ಕೊಟ್ಟರೆ ರೈತರುಗಳು ತಮ್ಮ ಬೆಳೆಯನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಅವರಿಗೆ ಮಾರ್ಕೆಟ್ ಧಾರಣೆ ಕೊಟ್ಟರೆ ಅವರಿಗೂ ಲಾಭವಾಗುತ್ತದೆ ಮತ್ತು ಹೆಚ್ಚು ಹೆಚ್ಚು ಧಾನ್ಯಗಳನ್ನು ಉತ್ಸಾಹದಿಂದ ಬೆಳೆದು ಸರ್ಕಾರಕ್ಕೆ ತಂದು ಕೊಡುತ್ತಾರೆ.

ಇನ್ನು ಕಾರ್ಮಿಕರಿಗೆ ಮತ್ತು ಸರ್ಕಾರಿ ನೌಕರರುಗಳಿಗೆ ಒಂದು ವೇಳೆ ಕಡಿಮೆ ಬೆಲೆಯಲ್ಲಿ ಅಕ್ಕಿ ಕೊಡಬೇಕಾದರೆ, ಸ್ವಲ್ಪ ಅಂಶ ಅದರಲ್ಲಿ ನಷ್ಟ ಬಂದರೆ, ಅದನ್ನು ಸರ್ಕಾರ ತನ್ನ ಕೈಯಿಂದ ಹಾಕಿಕೊಂಡು, ಸ್ವಲ್ಪ ಕಡಿಮೆ ಬೆಲೆಗೆ ಅವರಿಗೆ ಮಾರಲಿ. ಈಗ ಇರುವಂಥ ಕಾನೂನುಗಳ

ತೊಂದರೆಗಳು ಏನೇನು ಇವೆಯೋ ಅವು ಮುಂತಾದ್ದು, ಅದನ್ನು ತಪ್ಪಿಸಿದರೆ ಸರ್ಕಾರದ ಬೊಕ್ಕಸಕ್ಕೆ ಖಣಜಕ್ಕೆ ಬೇಕಾದಷ್ಟು ಧಾನ್ಯವನ್ನು ರೈತರು ಹಾಕಲಿಕ್ಕೆ ಅನುಕೂಲವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ವಾಣಿಜ್ಯ ಬೆಳೆಗಳ ಧಾರಣೆಗಳನ್ನು ತೆಗೆದುಕೊಳ್ಳಿ. ಹತ್ತಿ, ತೆಂಗಿನಕಾಯಿ, ಅಡಕೆ ಇತ್ಯಾದಿ ಬೆಳೆಗಳಿಗೆ ಬೇಕಾದಷ್ಟು ಬೆಲೆ ಇದೆ. ಕಾರಣ ಅದಕ್ಕೆ ಪ್ರಚಾರ ಅಗತ್ಯವಿಲ್ಲ. ಹೆಚ್ಚಿನ ಬೆಲೆ ಬರತಕ್ಕಂಥ ಬೆಳೆಗಳಿಗೆ ಯಾರೂ ಪ್ರೋತ್ಸಾಹ ಕೊಟ್ಟು ಹೇಳಬೇಕಾಗಿಲ್ಲ. ರೈತರುಗಳು ಯಾರ ಪ್ರೋತ್ಸಾಹವಿಲ್ಲದೆ ಸಾವಿರಾರು ಎಕರೆಗಳಲ್ಲಿ ಉತ್ತರೋತ್ತರವಾಗಿ ಹೆಚ್ಚು ಹೆಚ್ಚು ಬೆಳೆಯನ್ನು ತಾವಾಗಿಯೇ ಬೆಳೆಸುತ್ತಾರೆ. ಆದಕಾರಣ ಈ ಒಂದು ಸಮಸ್ಯೆಗೆ ಪರಿಹಾರ ಇರುವಂಥಾದ್ದು, ಮಾರ್ಕೆಟ್ ಧಾರಣೆ ರೈತನ ಬೆಳೆಗೆ ಸಿಗಬೇಕಾದುದು. ಪೇಜ್ 15ರಲ್ಲಿ ಹೇಳಿದ್ದಾರೆ. ವಸ್ತುತಃ 10·66 ಲಕ್ಷ ಸಸಿಗಳನ್ನು ಬೆಳೆಸಲಾಗಿತ್ತು. ತೀವ್ರಾಭಿವೃದ್ಧಿ ಯೋಜನೆಯ ಮೇರೆಗೆ, ತರಕಾರಿಗಳ ಮತ್ತು ಬೇಗನೆ ಬೆಳೆಯುವ ಹಣ್ಣು ಹಂಪಲುಗಳ ಸಾಗುವಳಿ ಕಾರ್ಯಕ್ರಮದಲ್ಲಿ 10,650 ಎಕರೆ ಭೂಮಿಯಲ್ಲಿ ಇಂಥ ಸಾಗುವಳಿ ನಡೆಯತಕ್ಕದ್ದೆಂದು ಗೊತ್ತುಪಡಿಸಲಾಗಿದ್ದರೂ ವಾಸ್ತವವಾಗಿ 14,674 ಎಕರೆ ಭೂಮಿಯು ಸಾಗುವಳಿಯಾಗಿತ್ತು ಎಂದು. ಆದರೂ ಕೂಡ ಒಂದು ಯೋಜನೆ ಯಶಸ್ವಿಯಾಗಬೇಕಾದರೆ ಸಸ್ಯಗಳಿಗೆ ತಗಲತಕ್ಕಂಥ ರೋಗ ನಿವಾರಣೆಕೊಡಬೇಕಾದರೆ, ಸಂರಕ್ಷಣೆ ಕೊಡಬೇಕಾದರೆ, ಒಂದು ರೀಸರ್ಚ್ ಸ್ಟೇಷನ್ ಸಂಶೋಧನೆಯ ಕೇಂದ್ರ ಅತ್ಯಗತ್ಯವಾಗಿದೆ. ಕಾಸರಗೋಡಿನಲ್ಲಿ ಒಂದು ತೆಂಗಿನಕಾಯಿಯ ಸಂಶೋಧನ ಕೇಂದ್ರವಿದೆ. ಅದು ಈಗ ಕೇರಳಕ್ಕೆ ಸೇರಿ ಹೋಗಿದೆ. ಅದು ಒಂದು ಮಹತ್ತರವಾದ ಸಂಶೋಧನ ಕೇಂದ್ರ. ನಮಗೆ ಈಗ ಅದರ ಅಭಾವ ವಿದೆ. ಅಂಥಹ ಒಂದು ಕೇಂದ್ರವನ್ನು ನಮ್ಮ ರಾಜ್ಯದಲ್ಲಿ ತೆಗೆಯಬೇಕು. ದಕ್ಷಿಣ ಕನ್ನಡ ಜಿಲ್ಲೆಯ ಕೋಸ್ಟ್ ಲೈನ್‌ನಲ್ಲಿ ಹೆಚ್ಚು ತೆಂಗಿನ ಗಿಡಗಳನ್ನು ಬೆಳೆಯುವ ವಿಶೇಷ ಕ್ರಮವಿದೆ. ಇದರಿಂದ ಈ ರೀಸರ್ಚ್ ಸ್ಟೇಷನ್‌ನ್ನು ಅಲ್ಲಿಗೆ ಕೊಡಬೇಕು. ನಮ್ಮ ರಾಜ್ಯದಲ್ಲಿ ಒಂದು ತೆಂಗಿನ ಸಂಶೋಧನ ಕೇಂದ್ರ ಇಲ್ಲದೆ ಇರುವುದರಿಂದ ಒಂದು ರೂಪಾಯಿಗೆ ಒಂದು ತೆಂಗಿನಕಾಯಿ ಆಗಿದೆ.

ನಿಮ್ಮ ವರ್ಗದ ಕಲ್ಯಾಣ ಸಾಧನೆ ಬಗ್ಗೆ ಪೇಜ್ 8ರಲ್ಲಿ ಹೇಳಿದ್ದಾರೆ. ಹರಿಜನರಿಗಾಗಿಯೇ ವಸತಿ ಗೃಹಗಳನ್ನು ಮೀಸಲಾಗಿಡುವ ಪದ್ಧತಿಯನ್ನು ತೆಗೆದುಹಾಕಿ, ಸರ್ವರಿಗೂ ಪ್ರವೇಶವುಳ್ಳ ಮತ್ತು ಜಾತಿಪಂಥ ಭೇದವಿಲ್ಲದ ವಸತಿಗೃಹಗಳನ್ನು ನಿರ್ಮಿಸಲಾಗಿದೆ. ಭಾರತ ಸರ್ಕಾರದಿಂದ ಹಣ ಸಹಾಯ ಪಡೆದು ರಾಜ್ಯ ಸರ್ಕಾರದವರು ಹಿಂದುಳಿದ ವರ್ಗದವರ ಸಲುವಾಗಿ ತರಬೇತಿ, ಸಂಶೋಧನೆ ಮತ್ತು ಪರಿಶೀಲನಾ ಸಂಸ್ಥೆಯನ್ನೂ ಹಾಗೂ ಹಿಂದುಳಿದ ವರ್ಗಗಳ ವಿತ್ತ ನಿಗಮ ವನ್ನೂ ಸ್ಥಾಪಿಸಲು ಸಾಧ್ಯವಾದೀತೆಂದು ನಂಬಿದ್ದಾರೆ. ಅಲ್ಲದೆ ಮೂರು ಗಿರಿಜನಾಭಿವೃದ್ಧಿ ಕ್ಷೇತ್ರ ಗಳಿಗೆ ಮಂಜೂರಾತಿ ಕೊಡಬೇಕೆಂದು ಭಾರತ ಸರ್ಕಾರವನ್ನು ಕೋರಲಾಗಿದೆ. ಇದು ಒಳ್ಳೆಯ ಸೂಚನೆ. ಅಲ್ಲದೆ ಹರಿಜನ ಗಿರಿಜನರಿಗೆ ಸಂಬಂಧಪಟ್ಟಂತೆ 3 ಬ್ಲಾಕ್‌ಗಳನ್ನು ನಮ್ಮ ರಾಜ್ಯದಲ್ಲಿ 4ನೇ ಪಂಚ ವಾರ್ಷಿಕಯೋಜನೆಯಲ್ಲಿ ತೆರೆಯಲಾಗುತ್ತದೆಂದು ಹೇಳಿರುವುದು ಬಹಳ ಸಂತೋಷದ ಸಂಗತಿ. ಈಗ ವಿವಿಧ ಯೋಜನೆಗಳನ್ನು ತೆಗೆದುಕೊಳ್ಳಬೇಕಾದರೆ ಹಣಬೇಕಾಗುತ್ತದೆ. ಏಕೆಂದರೆ ಬೇಕಾದಷ್ಟು ಹೊಸ ಕೆಲಸಗಳನ್ನು ಮಾಡಬೇಕಾಗಿದೆ. ಈಗಿರುವಷ್ಟೇ ದುಡ್ಡಿನಲ್ಲಿ ಕೆಲಸಗಳನ್ನು ಮಾಡಿದರೆ ಕೆಲಸಕಾರ್ಯಗಳನ್ನು ಮುಗಿಸುವುದಕ್ಕೆ ಬಹಳ ನಿಧಾನವಾಗುತ್ತದೆ. ಈ ಎಮ್. ಆರ್. ಪಿ. ಎಂದು ಇದೆ. ಇದನ್ನು ಮಾಡುವುದಕ್ಕೆ ಸುಮಾರು 14,21,000 ರೂಪಾಯಿಗಳು ವೆಚ್ಚವಾಗುತ್ತದೆಂದು ಕಾಣುತ್ತದೆ. ಅದನ್ನು ಕೇವಲ 2-3 ಲಕ್ಷ ರೂಪಾಯಿಗಳಲ್ಲಿ ಮಾಡುತ್ತೇವೆಂದು ಹೇಳಿದರೆ ಅದೇ ಆಗದ ಮಾತು. ಇದರ ಉದ್ದೇಶವನ್ನು ತಿಳಿಯಬೇಕು. ಹರಿಜನರಿಗಾಗಲೀ, ಗಿರಿಜನರಿಗಾಗಲಿ ಪ್ರತಿಯೊಬ್ಬರಿಗೂ ಒಂದೊಂದರಂತೆ ಅನೇಕ ಸಂಸ್ಥೆಗಳನ್ನು ಸ್ಥಾಪಿಸಲು ಸರ್ಕಾರಕ್ಕಾಗಲೀ, ಯಾರಿಗೇ ಆಗಲೀ ಸಾಧ್ಯವಿಲ್ಲ. ಇದಕ್ಕೆ ಅಲ್ಲಲ್ಲಿ ಒಂದೊಂದು ಮಾದರೀ ಸಂಸ್ಥೆಗಳನ್ನು ತೆರೆದು ಅದರ ಮೂಲಕ ಮಾರ್ಗದರ್ಶನ ಮಾಡಿಕೊಡಬೇಕು. ಈ ಸಂಸ್ಥೆಯನ್ನು ಅನುಕರಣಕ್ಕೆ ಯೋಗ್ಯವನ್ನಾಗಿ ಮಾಡ ಬೇಕು. ಸಮಾಜಕಲ್ಯಾಣ ಇಲಾಖೆಯವರು ಅಲ್ಲೊಂದು ಇಲ್ಲೊಂದು ಸಂಸ್ಥೆಯನ್ನು ತೆರೆಯು ತ್ತಿರುವುದರಿಂದ ಸಂಪೂರ್ಣವಾಗಿ ಎಮ್.ಆರ್.ಪಿ. ಯನ್ನು ಉಪಯೋಗಿಸುತ್ತಿಲ್ಲ. ಬ್ಲಾಕ್‌ಗಳನ್ನು ತೆರೆಯುವಾಗ ಹೆಚ್ಚು ಗಿರಿಜನರು ಇರುವ ಕಡೆಗೆ ಕೊಡುತ್ತಾರೆಂದು ನಂಬಿದ್ದೇನೆ. ಈ ಭಾಷಣ ಮಾಡುತ್ತಿರುವಾಗ ರಾಜ್ಯಪಾಲರಾದ ಶ್ರೀಮಾನ್ ವಿ.ವಿ. ಗಿರಿಯವರಿಗೆ ಒಂದು ವಿಶೇಷವಾದ ಧನ್ಯ ವಾದಗಳನ್ನು ಅರ್ಪಿಸಬೇಕಾಗಿದೆ. ಏಕೆಂದರೆ 1938ರಲ್ಲಿ ಲೇಬರ್ ಸಚಿವರಾಗಿದ್ದಂತಹವರು ಒಮ್ಮೆ ಬದರ್‌ಗೆ ಬಂದಿದ್ದರು. ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ಸಾರಿ ಬಂದಿದ್ದಾಗ ನಮ್ಮ ಜಿಲ್ಲೆಗೆ ಸೇರಿದ ನಿಮ್ಮ ವರ್ಗದವರು ಒಂದು ಅರ್ಜಿಯನ್ನು ಕೊಟ್ಟಮೇಲೆ ಬೇರೆ ಬೇರೆ ವರ್ಗದವರೂ ಸಹ ತಂತಮ್ಮ ಮನವಿಗಳನ್ನು ಅರ್ಪಿಸಿದರು. ಅವರು ಹಿಂದೆ ಡಿಪ್ರೆಸ್ಡ್ ಕ್ಲಾಸಿಗೆ ಸೇರಿದ್ದರು. ಈಗ ಅವೆಲ್ಲವನ್ನೂ ಡಿಪ್ರೆಸ್ಡ್ ಕ್ಲಾಸ್ ಅಥವಾ ಹಿಲ್‌ಟ್ರೈಬ್ಸ್ ಎಂದು ಮಾಡಿದ್ದಾರೆ. ಅದರಿಂದ 1950ನೇ ಇಸವಿಯಲ್ಲಿ ಷೆಡ್ಯೂಲ್ಡ್ ಟ್ರೈಬ್ ಲಿಸ್ಟ್‌ನಲ್ಲಿ ಸೇರುವುದಕ್ಕೆ ಅನುಕೂಲವಾಯಿತು. ಅದೂ ಅಲ್ಲದೆ ನಿಮ್ಮ ವರ್ಗ

(ಶ್ರೀ ಎಸ್. ಸುಬ್ಬಯ್ಯನಾಯಕ್)

ದವರ ಕೇಳಿಕೆಯನ್ನು ಮನ್ನಿಸಿ ಸರ್ಕಾರದವರು ಷೆಡ್ಯೂಲ್ಡ್ ಟ್ರೈಬ್ಸ್‌ನ್ನು ಲಿಸ್ಟಿನಲ್ಲಿ ಸೇರಿಸಿರುವುದರಿಂದ ನಿಮ್ಮವರ್ಗಕ್ಕೆ ಹೆಚ್ಚು ಅನುಕೂಲವಾಗಿದೆ.

ಇನ್ನು ನ್ಯೂ ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಇತ್ತೀಚೆಗೆ ಬಹಳ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆಂದು ಕಾಣುತ್ತದೆ. ಇಡೀ ರಾಜ್ಯದಲ್ಲಿ ಎಲೆಕ್ಟ್ರಿಸಿಟಿ ಇನ್‌ಸ್ಟಲೇಷನ್ ವರ್ಕ್ಸ್‌ನ್ನು ಮಾಡಬೇಕೆಂದು ಒಂದು ಪ್ರೋಗ್ರಾಂ ಹಾಕಿಕೊಂಡಿರುವುದನ್ನು ನಾನು ಒಪ್ಪುತ್ತೇನೆ. ಆದರೆ ಕೆಲವು ಕಡೆಗಳಲ್ಲಿ ಎಲೆಕ್ಟ್ರಿಕ್ ಇನ್‌ಸ್ಯುಲೇಟರ್ಸ್, ವೈರ್ಸ್, ಟ್ರಾನ್ಸ್‌ಫಾರ್ಮರ್ಸ್ ಇಲ್ಲವೆಂದು ಹೇಳುತ್ತಿದ್ದಾರೆ. ಅಂತಹ ಕಡೆಗಳಲ್ಲಿ ಮಾನ್ಯ ಮಂತ್ರಿಗಳು ಕೂಡಲೇ ಗಮನಕೊಡಬೇಕು. ಸ್ವಿಚ್ ಬೋರ್ಡ್‌ಗಳನ್ನು ಹಾಕಲು ಕೂಡಲೇ ಲೈಸೆನ್ಸ್ ಕೊಡಬೇಕೆಂದು ಹೇಳುತ್ತೇನೆ. ಟ್ರಾನ್ಸ್‌ಫಾರ್ಮರ್‌ಗಳ ಮತ್ತು ಸ್ವಿಚ್ ಬೋರ್ಡ್‌ಗಳ ಉತ್ಪಾದನೆ ಪ್ರಾರಂಭವಾಗಿದೆ ಎಂದು ಹೇಳಿದ್ದಾರೆ. ಇದರಿಂದ ರೈತರಿಗೆ ಹಾಗೂ ವಿದ್ಯುತ್ ಬಳಕೆದಾರರಿಗೆ ಈಗ ಇರತಕ್ಕ ತೊಂದರೆಗಳು ತಪ್ಪಿ ಹೆಚ್ಚು ಅನುಕೂಲವಾದೀತೆಂದು ನಾನು ಹೇಳುತ್ತೇನೆ. ಅದಲ್ಲದೆ ವಿದ್ಯುತ್ ಸಬ್-ಸ್ಟೇಷನ್ನುಗಳನ್ನು ಪ್ರಾರಂಭಮಾಡುತ್ತೇವೆಂದು ಹೇಳಿದ್ದಾರೆ. ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯವರು ಶಾಖೋಪಶಾಖೆಗಳಾಗಿ ವಾಹಕ ತಂತಿಗಳನ್ನು ಹಾಕಿಸುವ ಒಂದು ಕಾರ್ಯವನ್ನು ಹಾಕಿಕೊಂಡಿದ್ದಾರೆಂದು ಹೇಳಿದ್ದಾರೆ. ಏನೇ ಆಗಲಿ ರೈತರ ಆವಶ್ಯಕತೆಗಳನ್ನು ಗಮನಿಸಿ ಅವರಿಗೆ ಈ ಬಗ್ಗೆ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಅರಣ್ಯ ಸಂಪತ್ತನ್ನು ಹೆಚ್ಚುಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ನಾವು ಒಪ್ಪುವಂಥಾದ್ದು ಮತ್ತು ನ್ಯಾಯವಾದುದು ಎಂದು ಹೇಳಬಹುದು. ಆದರೆ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಿ ದಟ್ಟವಾದ ಕಾಡು ಇದೆಯೋ ಅಲ್ಲಿ ಅದನ್ನು ಬೆಳೆಸುವುದಕ್ಕೆ ತುಂಬಾ ತೊಂದರೆಯಾಗಿದೆ. ವಿಪರೀತವಾಗಿ ಬೆಳೆದಿರತಕ್ಕ ಕಾಡನ್ನು ಕಡಿದು ನಾಶಮಾಡುತ್ತಾರೆ. ಇದರಲ್ಲಿ ಮಳೆ ಬಾರದೇ ಇರುವ ಕಾರಣಗಳೂ ಸಹ ಇರಬಹುದು. ಆದರೆ ಕಾಡಿನಲ್ಲಿ ಬೆಳೆದಿರತಕ್ಕ ನ್ಯಾಚುರಲ್ ಟ್ರೀಸನ್ನು ನಾಶಮಾಡಬಾರದು. ಅದಕ್ಕೆ ಬದಲಾಗಿ ಅಡಿಕೆ, ಹಲಸು, ಇತ್ಯಾದಿ ಮರಗಳನ್ನು ಅರಣ್ಯ ಪ್ರದೇಶದಲ್ಲಿ ಬೆಳೆಸಿದರೆ ಕಾಡು ಅಷ್ಟಾಗಿ ನಾಶವಾಗುವುದಿಲ್ಲ. ಯೋಗ್ಯವಾದ ಬೆಳೆ ಬಂದಂತಾಗುತ್ತದೆ.

ಇನ್ನು ಪಠ್ಯ ಪುಸ್ತಕಗಳ ವಿಚಾರ. ಇವತ್ತು ಬೆಳಗ್ಗೆ ಪ್ರಶ್ನೋತ್ತರ ಕಾಲದಲ್ಲಿ ಕೆಲವು ವಿಚಾರಗಳನ್ನು ಕಂಡೆವು. ಅವು ವೇಳೆಗೆ ಸರಿಯಾಗಿ ಸಿಗುವುದಿಲ್ಲ. ಒಂದುವೇಳೆ ಸಿಕ್ಕಿದರೂ ಆ ಪುಸ್ತಕಗಳಲ್ಲಿ ಪ್ರಿಂಟ್ ಸರಿಯಾಗಿ ಇರುವುದಿಲ್ಲ. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಮುಂದೆ ಆ ರೀತಿ ಆಗಲಾರದೆಂದು ನಾನು ನಿರೀಕ್ಷಿಸುತ್ತೇನೆ.

ಇಷ್ಟು ಹೇಳಿ, ನನಗೆ ಇಲ್ಲಿ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಬಿ. ಭಾಸ್ಕರಶೆಟ್ಟಿ (ಕೌಪು).—ಅಧ್ಯಕ್ಷರೇ, ಈ ಮಾನ್ಯ ಸಭೆಯ ಮುಂದಿರುವ ರಾಜ್ಯಪಾಲರ ಭಾಷಣವನ್ನು ನೋಡಿದರೆ ಮಂತ್ರಿಗಳು ವೇದಿಕೆಗಳ ಮೇಲೆ ಮಾಡತಕ್ಕ ಭಾಷಣವನ್ನು ರಾಜ್ಯಪಾಲರ ಬಾಯಿಯಿಂದ ಹೇಳಿಸಿದ್ದಾರೆಂದು ನನಗನ್ನಿಸುತ್ತದೆ. ಏತಕ್ಕೆಂದರೆ ನಾನು ಸಾಧಾರಣವಾಗಿ 1962ನೇ ಇಸವಿಯಿಂದಲೂ ರಾಜ್ಯಪಾಲರ ಭಾಷಣಗಳನ್ನು ತೆಗೆದುನೋಡಿದರೆ ರಾಜ್ಯಪಾಲರ ಭಾಷಣದಲ್ಲಿ ಏನುಹೇಳಿದೆ ಅದು ಒಂದೂ ಕಾರ್ಯಗತವಾದ ಪರಿಸ್ಥಿತಿಯಲ್ಲಿಲ್ಲ. ಪ್ರಥಮವಾಗಿ ಉದ್ಯಮಗಳ ಬಗ್ಗೆ ಹೇಳಿರುವುದನ್ನು ತೆಗೆದುನೋಡಿದರೆ, 1962ನೇ ಇಸವಿಯಲ್ಲಿ ರಾಜ್ಯಪಾಲರು ಅಲ್ಯೂಮಿನಿಯಂ ಮತ್ತು ಗೊಬ್ಬರದ ಕಾರ್ಖಾನೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಬರುವ ವರ್ಷದಲ್ಲಿ ತೆಗೆಯುತ್ತೇವೆಂದು ಅವರ ಭಾಷಣದಲ್ಲಿ ಹೇಳಿದ್ದಾರೆ. 1963ನೇ ಇಸವಿಯಲ್ಲಿ ಮಂಗಳೂರಿನಲ್ಲಿ ತೈಲ ಶುದ್ಧೀಕರಣ ಕಾರ್ಖಾನೆ ಪ್ರಾರಂಭವಾಗುತ್ತದೆ ಎಂಬುದಾಗಿ ಹೇಳಿದ್ದಾರೆ. 1965ನೇ ಇಸವಿಯಲ್ಲಿ ಕಬ್ಬಿಣ ಮತ್ತು ಉಕ್ಕು ಸಂಘಟಿತ ಕಾರ್ಖಾನೆ, ಅಲ್ಯೂಮಿನಿಯಂ ಕಾರ್ಖಾನೆ, ಮತ್ತು ರಾಸಾಯನಿಕ ಗೊಬ್ಬರದ ಕಾರ್ಖಾನೆ—ಹೀಗೆ ಮೂರುಕಾರ್ಖಾನೆಗಳನ್ನು ರಾಜ್ಯದಲ್ಲಿ ಸ್ಥಾಪಿಸಲಾಗುತ್ತದೆಂದು ರಾಜ್ಯಪಾಲರು ಅಪ್ಪಣೆ ಕೊಡಿಸಿದ್ದಾರೆ. ಈಗ 1966ನೇ ವರ್ಷದಲ್ಲಿ ರಾಜ್ಯಪಾಲರು ಅವರ ಭಾಷಣದಲ್ಲಿ ಈ ಬಗ್ಗೆ ಏನು ಹೇಳಿದ್ದಾರೋ ನೋಡೋಣವೆಂದರೆ ಕಲ್ಕತ್ತೆಯ ಇಂಡಿಯನ್ ಅಲ್ಯೂಮಿನಿಯಂ ಕಂಪೆನಿಯು ಬೆಳಗಾಂವಿ ನಗರದ ಸಮೀಪದಲ್ಲಿ ಅಲ್ಯೂಮಿನಿಯಂ ಅದಿರು ಕರಗಿಸಿ ಲೋಹ ತೆಗೆಯುವ (ಸ್ಮೆಲ್ಟರ್) ಕಾರ್ಖಾನೆಯನ್ನು ಸ್ಥಾಪಿಸಲಿದೆ ಎಂಬುದಾಗಿ ಅಪ್ಪಣೆ ಕೊಟ್ಟಿದ್ದಾರೆ. ಅದೂ ಸಹ ಒಂದು ಥರ್—ಫ್ಲೈಡ್ ಅಲ್ಯುಮಿನಿಯಂ ಕಾರ್ಖಾನೆಯಲ್ಲಿ ಅದಿರು ಕರಗಿಸಿ ಲೋಹ ತೆಗೆಯುವ ಕಾರ್ಖಾನೆಯನ್ನು ಸ್ಥಾಪಿಸಲಿದ್ದೇವೆಂದು ಕೊಟ್ಟಿದ್ದಾರೆ. ಆದ

ರಿಂದ ಇದು ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತದೆಂದು ನನಗೆ ಹೇಳುವುದಕ್ಕೆ ಬರುವುದಿಲ್ಲ. ಅಂತೂ ಕೈಗಾರಿಕೆ ಮಟ್ಟಿಗೆ ನಮ್ಮ ರಾಜ್ಯ ಇತರರಾಜ್ಯಗಳಿಗಿಂತ ಬಹಳವಾಗಿ ಹಿಂದುಳಿದಿದೆ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಬಹಳ ವ್ಯಸನದಿಂದ ಹೇಳುತ್ತೇನೆ. ಆದರೆ ಸರ್ಕಾರದವರು ವರ್ಷಂಪ್ರತಿ ಈ ಐದುವರ್ಷಗಳ ಕಾಲದಲ್ಲಿ ಏನೇನು ಕಾರ್ಯಗಳನ್ನು ಮಾಡುತ್ತೇವೆಂದು ಇಲ್ಲಿ ಭರವಸೆ ಕೊಟ್ಟಿದ್ದರೋ ಆ ಭರವಸೆಗಳ ಪೈಕಿ ಅನೇಕ ಕಾರ್ಯಗಳು ನೆರವೇರದೆ ನಿರಾಶಾದಾಯಕವಾಗಿವೆ. ನಮ್ಮ ನೆರೆಹೊರೆ ರಾಜ್ಯಗಳಾದ ಮದ್ರಾಸ್, ಕೇರಳ, ಆಂಧ್ರ ಪ್ರಾಂತಗಳನ್ನು ನೋಡಿದರೆ ಈಗಾಗಲೇ ಭಾರಿಪ್ರಮಾಣದಲ್ಲಿ, ಅಂದರೆ, ವರ್ಷಕ್ಕೆ ಒಂದು ಲಕ್ಷದಿಂದ ಎರಡು ಲಕ್ಷ ಟನ್ನುಗಳಷ್ಟು ಉತ್ಪಾದನಾಶಕ್ತಿಯನ್ನು ಅವೆಲ್ಲಾ ಹೊಂದಿವೆ. ರಾಸಾಯನಿಕ ಗೊಬ್ಬರ ಕಾರ್ಖಾನೆಯನ್ನು ಮದ್ರಾಸಿನ ನೈವೇಲಿಯಲ್ಲಿಯೂ ಆಂಧ್ರದ ವಿಶಾಖಪಟ್ಟಣದಲ್ಲಿಯೂ ಕೇರಳದ ಕೊಚ್ಚಿನ್‌ನಲ್ಲಿಯೂ ಸ್ಥಾಪನೆ ಮಾಡುತ್ತಿದ್ದಾರೆ. ತೈಲ ಶುದ್ಧೀಕರಣ ಕಾರ್ಖಾನೆ ಮದ್ರಾಸಿಗೆ ಹೋಗಿ ಅಲ್ಲಿ ಸ್ಥಾಪನೆಯಾಗುವುದಾಗಿದೆ. ಇನ್ನು ಅಲ್ಯೂಮಿನಿಯಂ ಕಾರ್ಖಾನೆ ಇನ್ನೆಲ್ಲೋ ಬೇರೆ ರಾಜ್ಯಕ್ಕೆ ಹೋಗಿರಬಹುದು. ಅದು ಎಲ್ಲಿ ಹೋಗಿದೆಯೋ ಅಂತು ನಮ್ಮ ರಾಜ್ಯವನ್ನು ಕೈಬಿಟ್ಟು ಆ ಉದ್ಯಮ ಇನ್ನೆಲ್ಲೋ ಸ್ಥಾಪನೆಯಾಗಿದೆ ಎಂದು ನನ್ನ ಆಲೋಚನೆ ಮತ್ತು ನನ್ನ ತಿಳುವಳಿಕೆಗೆ ಬಂದಿದೆ. ಒಟ್ಟಿನಲ್ಲಿ ನಮ್ಮ ರಾಜ್ಯ ಕೈಗಾರಿಕೆಯಲ್ಲಿ ಬಹಳ ಮಟ್ಟಿಗೆ ಬಡವಾಗಿದೆ. ಈಗಿನ ಮಂತ್ರಿಮಂಡಲ ಕೇಂದ್ರ ಸರ್ಕಾರಕ್ಕೆ ಈ ವಿಷಯದಲ್ಲಿ ಹೆಚ್ಚಿನ ಒತ್ತಾಯವನ್ನು ಹೇರುವುದರಲ್ಲಿ ನಿಷ್ಫಲವಾಗಿದೆ ಹಾಗೂ ನಿರ್ವೀರ್ಯವಾಗಿದೆ ಎಂಬುದಾಗಿದೆ ನಾನು ಈ ಮಾನ್ಯ ಸಭೆಯಲ್ಲಿ ಬಹಳ ಪಶ್ಚಾತ್ತಾಪದಿಂದ ಹೇಳಬೇಕಾಗಿದೆ.

ಇನ್ನು ರಾಜ್ಯಪಾಲರು ಅವರ ಭಾಷಣದಲ್ಲಿ ಯೋಜನೆಗಳ ವಿಷಯವನ್ನು ಹೇಳಿದ್ದಾರೆ. ನಾವು ಈಗ ಮೂರನೇ ಪಂಚವಾರ್ಷಿಕ ಯೋಜನೆಯನ್ನು ಮುಗಿಸಿಕೊಂಡು ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಮೊದಲನೆ ಹಂತಕ್ಕೆ ಬರುತ್ತಿದ್ದೇವೆ. ಮೊದಲನೆಯ ವರ್ಷದಲ್ಲಿ 50.72 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೇವೆ ಎಂಬುದಾಗಿ ರಾಜ್ಯಪಾಲರು ಅವರ ಭಾಷಣದಲ್ಲಿ ತಿಳಿಸಿದ್ದಾರೆ. ಆದರೆ ಈ ಮೂರು ಪಂಚವಾರ್ಷಿಕ ಯೋಜನೆಗಳನ್ನು ಆಳವಾಗಿ ನೋಡಿದರೆ, ಇದರಲ್ಲಿ ಏನು ಪ್ರತಿಫಲಸಿಕ್ಕಿದೆ ಎಂಬುದನ್ನು ಸರ್ಕಾರದವರು ಕಣ್ಣು ತೆರೆದು ನೋಡಬೇಕು. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಈ ಮೂರು ಯೋಜನೆಗಳಲ್ಲಿಯೂ ಸರ್ಕಾರದವರು ಅವರ ಆಡಳಿತದಲ್ಲಿ ಮೂರು ವರ್ಗಗಳನ್ನು ನಿರ್ಮಿಸಿದ್ದಾರೆ. ಅದು ಹೇಗೆ ಎಂದರೆ, ಅಸಂಖ್ಯಾತ ಸಂಖ್ಯೆಯಲ್ಲಿನ ಮಂತ್ರಿ ಮಂಡಲವೇ ಒಂದು ಕುಂಭಕರ್ಣ ವರ್ಗ, ಸರ್ಕಾರದಿಂದ ಹೆಚ್ಚಿನ ಪ್ರಯೋಜನ ಹೊಂದಿ ಲೈಸೆನ್ಸ್, ಪರ್ಮಿಟ್ಟುಗಳನ್ನು ಪಡೆದು ಶ್ರೀಮಂತರಾಗಿರತಕ್ಕ ಸಾವಿರಾರು ಮಂದಿ ಇರತಕ್ಕದ್ದು ಇನ್ನೊಂದು ಕುಬೇರ ವರ್ಗ, ಹೊಟ್ಟೆಗೆ ಹಿಟ್ಟಿಲ್ಲದೆ ಕಡು ಬಡತನದಿಂದ ನರಳುತ್ತಿರುವ ಕೋಟ್ಯಾಂತರ ಮಂದಿ ಇರತಕ್ಕದ್ದು ಮತ್ತೊಂದು ಕುಚೇಲ ವರ್ಗ ಹೀಗೆ ಮೂರು ವರ್ಗಗಳನ್ನು ಈ ದೇಶದಲ್ಲಿ ಇವರ ಒಂದು ಆಡಳಿತದಲ್ಲಿ ನಿರ್ಮಿಸಿದ್ದಾರೆಯೇ ಹೊರತು ರಾಷ್ಟ್ರದ ಹಿತದೃಷ್ಟಿಯಿಂದ ಇವರು ಏನನ್ನು ಮಾಡಲಿಲ್ಲವೆಂದು ನಾನು ಈ ಸಭೆಯಲ್ಲಿ ಧೈರ್ಯವಾಗಿ ಹೇಳುತ್ತೇನೆ. ಅಂತೂ ಕೆಲವು ವಿಷಯಗಳನ್ನು ಒಂದೊಂದಾಗಿ ಉದಾಹರಣೆಗಳ ಸಮೇತ ಇಲ್ಲಿ ಕೊಡ ಬಯಸುತ್ತೇನೆ. ಮೊಟ್ಟ ಮೊದಲನೆಯದಾಗಿ ವ್ಯವಸಾಯ ಇಲಾಖೆಯನ್ನು ತೆಗೆದುಕೊಂಡರೆ, ಇದು ದೇಶದಲ್ಲಿ ಸಾಧಾರಣವಾಗಿ 2½ ಕೋಟಿ ಜನತೆಗೆ ಅನ್ನ ನೀಡುವ ಇಲಾಖೆ. ಈ ಇಲಾಖೆಯಲ್ಲಿ ಎಷ್ಟು ತ್ವರಿತವಾಗಿ, ಎಷ್ಟು ಉತ್ತೇಜನದಿಂದ ಅಲ್ಲಿನ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆಂಬುದನ್ನು ಇವರೇ ಹೇಳಬೇಕು ಏಕೆಂದರೆ, ಈ ಇಲಾಖೆ ಬರು ಬರುತ್ತಾ ರಾಯರ ಕುದುರೆ ಕತ್ತೆಯಾಯಿತು ಎಂದು ಹೇಳುವ ಹಾಗೆ ಆಗುತ್ತಾ ಇದೆ. ದಿನ ದಿನಕ್ಕೂ ಈ ಇಲಾಖೆಯ ಅಧಿಕಾರಿಗಳ ಅದಕ್ಷತೆ ಆಡಳಿತದಿಂದ ನಾವೇನು ನಮ್ಮ ದೇಶದಲ್ಲಿ ಬೆಳೆಯಬೇಕಾಗಿತ್ತೋ ಆ ಆಹಾರ ಸಾಮಗ್ರಿಗಳೆಲ್ಲವೂ ಕಡಿಮೆಯಾಗುತ್ತಿದೆ. ಈ ವಿಚಾರದಲ್ಲಿ ನಾವು ಎಷ್ಟೋ ಸಾರಿ ಬೇಕಾದಷ್ಟು ಸಲ ಹೇಳಿಕೆಗಳನ್ನು ಕೊಟ್ಟಿದ್ದರೂ ಈ ಇಲಾಖೆ ಏನೋ ಒಂದು ಅಂಧಾ ದರ್ಬಾರ್‌ನಲ್ಲಿ ನಡೆಯುತ್ತಿದೆಯೆಂದು ನನಗೆ ತೋರುತ್ತದೆ. ಆದರೆ ರಾಜ್ಯಪಾಲರು ಅವರ ಭಾಷಣದಲ್ಲಿ ರೈತರಿಗೆ ಈ ಇಲಾಖೆ ಮುಖಾಂತರ ಬೇಕಾದಷ್ಟು ಸವಲತ್ತುಗಳನ್ನು ರಾಜ್ಯ ಸರ್ಕಾರ ಒದಗಿಸುತ್ತದೆ ಎಂದು ಹೇಳಿದ್ದಾರೆ.

ಹೋದ ಸಾಲಿನಲ್ಲಿ ದೇಶದಲ್ಲಿ ಮಳೆ ಬಾರದೆ ಬೆಳೆ ಚೆನ್ನಾಗಿ ಆಗದೆ ಇರುವಾಗ ಮಂತ್ರಿ ಮಂಡಲದವರೆಲ್ಲರೂ ದೇಶಾದ್ಯಂತ ತಿರುಗಿ ಅಲ್ಲಲ್ಲಿ ಹಳ್ಳಿಗಳಲ್ಲಿ ಜನಗಳ ಸಭೆಯನ್ನು ಕರೆದು ಅವರ ಕಷ್ಟ ಸುಖಗಳೇನು ಎಂಬುದನ್ನು ತಿಳಿದುಕೊಂಡು, ಅವರ ಸಲಹೆಗಳನ್ನು ಪಡೆದುಕೊಂಡರು, ಮಳೆ ಬಾರದೆ ಇರುವ ಕಡೆ ಹಾಲ ಇರತಕ್ಕ ಬೆಳೆಯನ್ನು ರಕ್ಷಿಸಿಕೊಳ್ಳುವುದಕ್ಕೆ ಕೂಡಲೇ ಪಂಪುಸೆಟ್ಟುಗಳನ್ನು ಕೊಡಬೇಕು ಎಂದು ಅಲ್ಲಲ್ಲೇ ಸರ್ಕಾರಿ ನೌಕರರಿಗೆ ಮಂತ್ರಿಗಳು ಅಪ್ಪಣೆ ಕೊಡಿಸಿದರು. ಈ ವಿಷಯದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಸರ್ಕಾರದ ಮೂಲಕ ರೈತರಿಗೆ ಕೊಟ್ಟಿರ

(ಶ್ರೀ ಬಿ. ಭಾಸ್ಕರ ಶೆಟ್ಟಿ)

ತಕ್ಕಂಥ ಪಂಪುಸೆಟ್ಟುಗಳನ್ನು ಹಳ್ಳಿಗಳಿಗೆ ಹೋಗಿ ನಾನು ನೋಡಿದ್ದೇನೆ. ಈಗ್ಗೆ ಎರಡು ತಿಂಗಳ ಹಿಂದೆ ಕೊಟ್ಟಂತಹ ಪಂಪುಸೆಟ್ಟುಗಳು ಕೆಲಸ ಮಾಡದೇ ಇರುವಂತಹ ಪರಿಸ್ಥಿತಿ ಬಂದಿದೆ. 9 ಜನ ಹೊರುವಷ್ಟು ಭಾರವಾದ ರಷ್ಯನ್ ಪಂಪುಸೆಟ್ಟನ್ನು ರೈತರಿಗೆ ಕೊಟ್ಟಿದ್ದಾರೆ. ಅದನ್ನು ಲಾರಿಯಲ್ಲಿ ಹೊತ್ತುಕೊಂಡು ಹೋಗಿ ಹೊಲದ ಬದಿಯಲ್ಲಿ ಇಡಬೇಕು. ಬಾವಿಯ ಪಕ್ಕದಲ್ಲಿ ಪಂಪುಸೆಟ್ಟನ್ನು ಇಡಬೇಕಾದರೆ ಒಂದು ದೊಡ್ಡ ಗಟ್ಟಿಯಾದ ಕಾಂಕ್ರೀಟ್ ಫೌಂಡೇಷನ್ ಹಾಕಿ ಅದು ಭದ್ರವಾಗಿ ಕುಳಿತುಕೊಳ್ಳುವ ಹಾಗೆ ಅದನ್ನು ಇಡಬೇಕು. ಆ ಫೌಂಡೇಷನ್ ನಿರ್ಮಿಸಬೇಕಾದರೆ 400-500 ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ತಾಲ್ಲೂಕು ಬೋರ್ಡುಗಳ ಮುಖಾಂತರ ರೈತರಿಗೆ ಕೊಟ್ಟಿರತಕ್ಕ ಪಂಪುಸೆಟ್ಟುಗಳನ್ನು ನೋಡುವುದಾದರೆ ಬೋಲ್ಟ್ ಇದ್ದರೆ, ನಟ್ ಇಲ್ಲ, ನಟ್ ಇದ್ದರೆ ಬೋಲ್ಟ್ ಇಲ್ಲ. ಈ ಪಂಪುಸೆಟ್ಟಿನ ಬಗ್ಗೆ ರೈತ ತಾಲ್ಲೂಕು ಬೋರ್ಡು ಡೆವಲಪ್‌ಮೆಂಟ್ ಅಧಿಕಾರಿಗಳ ಆಫೀಸಿಗೆ ಸುತ್ತಾಡುತ್ತಾ ಇದ್ದಾನೆ. ನಮ್ಮ ತಾಲ್ಲೂಕಿನಲ್ಲಂತೂ ಸರ್ಕಾರದವರು ರೈತರಿಗೆ ಒದಗಿಸಿರತಕ್ಕ ಪಂಪುಸೆಟ್ಟುಗಳ ಪೈಕಿ ಒಂದು ಪಂಪುಸೆಟ್ಟೂ ಕೂಡ ಉಪಯುಕ್ತವಾಗಿ ಕೆಲಸ ಮಾಡಿದೆ ಎಂದು ನನ್ನ ತಿಳುವಳಿಕೆಗೆ ಬಂದಿಲ್ಲ.

ಇನ್ನು ಎರಡನೆಯದಾಗಿ ಸಣ್ಣ ನೀರಾವರಿ ಯೋಜನೆಗೆ ಸಂಬಂಧಪಟ್ಟ ಹಾಗೆ ಯೋಜನೆಯಲ್ಲಿ ನಿರ್ದಿಷ್ಟವಾಗಿ ಮಾಡತಕ್ಕ ಕೆಲಸ ಕಾರ್ಯಗಳನ್ನು ಕೊಟ್ಟಿದ್ದರೂ ಕೂಡ ನಮ್ಮ ಸಣ್ಣ ನೀರಾವರಿ ಉಪಮಂತ್ರಿಗಳು ದೊಡ್ಡ ಮಾಸ್ಟರ್ ಪ್ಲಾನಿನ ವಿಷಯವನ್ನು ಮಾತನಾಡುತ್ತಾರೆಯೇ ವಿನಾ, ಈ ತನಕ ಯೋಜನೆಗಳನ್ನು ಸಂಪೂರ್ಣವಾಗಿ ಕಾರ್ಯಗತ ಮಾಡುವ ಒಂದೇ ಒಂದು ಕುರುಹೂ ನನ್ನ ಕ್ಷೇತ್ರದಲ್ಲಿ ಕಾಣುವುದಿಲ್ಲ, ಆಶ್ವಾಸನೆಯ ಮೂಲಕ ಸರ್ಕಾರದವರು ಒಪ್ಪಿಕೊಂಡಿರುವ ಉದ್ದಿಷ್ಟವಾದ ಕೆಲಸಗಳ ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಆ ಪಟ್ಟಿಯನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆಂದು ಸರ್ಕಾರದಿಂದ ಉತ್ತರ ಬರುತ್ತದೆಯೇ ಹೊರತು ಇಲಾಖೆಗೆ ಹೋದ ಪಟ್ಟಿಗಳು ಎಲ್ಲಿಗೆ ಹೋಗುತ್ತವೆ ಎಂಬುದು ಗೊತ್ತಾಗುವುದಿಲ್ಲ. ಒಂದೊಂದು ಕ್ಷೇತ್ರದಲ್ಲಿ ಕಾರ್ಯಗತವಾಗಬೇಕಾಗಿರತಕ್ಕ ಬೇಕಾದಷ್ಟು ನೀರಾವರಿ ಯೋಜನೆಗಳು ಬಿದ್ದಿವೆ. ಸರಿಯಾಗಿ ಕೆರೆ, ಕಟ್ಟೆ ಮತ್ತು ಬಾವಿಗಳನ್ನು ಕಟ್ಟಿಸಿಕೊಡದೆ ರೈತರಿಗೆ ದವಸವನ್ನು ಬೆಳೆಯಿರಿ ಎಂದು ಹೇಳಿದರೆ ಅವರು ಹೇಗೆ ಬೆಳೆಯುತ್ತಾರೆ? ರೈತರಿಗೆ ಕೆರೆ ಕಟ್ಟುವುದಕ್ಕೆ ಜಾಗ ಕೊಡಿ ಎಂದರೆ ಅದಕ್ಕೂ ಕೂಡ ಸರ್ಕಾರದಿಂದ ಉತ್ತರ ಬರುವುದಿಲ್ಲ. ಇಂಥಾ ಪರಿಸ್ಥಿತಿಯಲ್ಲಿ ಸಣ್ಣ ನೀರಾವರಿಗೆ ಸಂಬಂಧಪಟ್ಟ ಕೆಲಸ ಕಾರ್ಯಗಳು ನಡೆಯುತ್ತಿವೆ. ಕೆಲವು ಅಣೆಕಟ್ಟುಗಳು, ವೆಂಟೆಡ್ ಡ್ಯಾಮ್ಸ್‌ಗಳು ನನ್ನ ಕ್ಷೇತ್ರದಲ್ಲಿ ಆಗಿವೆ. ಆ ಅಣೆಕಟ್ಟುಗಳಲ್ಲಿ ನೀರು ನಿಲ್ಲುವ ಪರಿಸ್ಥಿತಿಯಲ್ಲಿ ಇಲ್ಲ. ಈ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೂ ಹಿಂದೆ ತಂದಿದ್ದೇನೆ, ಎಲ್ಲಿ ಭದ್ರವಾದ ಕಲ್ಲು ಸಿಕ್ಕುತ್ತದೆಯೋ ಅಂಥಾ ಸ್ಥಳಗಳಲ್ಲಿ ಅಣೆಕಟ್ಟನ್ನು ಕಟ್ಟುತ್ತಾರೆ. ಎಲ್ಲಿ ವಾಟರ್ ಸೋರ್ಸಸ್ ಇದೆ ಎಲ್ಲಿ ನೀರು ನಿಂತುಕೊಳ್ಳುವುದಕ್ಕೆ ಜಾಗ ಇದೆ ಅಂಥಾ ಕಡೆ ಅಣೆಕಟ್ಟುಗಳನ್ನು ಕಟ್ಟದೆ ಯಾರೋ ಹೇಳಿದರೆಂದು ಎಲ್ಲೆಲ್ಲೋ ಅಣೆಕಟ್ಟುಗಳನ್ನು ಕಟ್ಟಿದರೆ ಅದರಿಂದ ಪ್ರಯೋಜನವಿಲ್ಲ. ಆದ್ದರಿಂದ ನಾನು ಸರ್ಕಾರದವರಿಗೆ ಹೇಳುವುದೇನೆಂದರೆ, ಇನ್ನು ಮುಂದೆ ಅಣೆಕಟ್ಟುಗಳನ್ನು ಕಟ್ಟುವಾಗ ಎಲ್ಲಿ ಮಣ್ಣು ಸರಿಯಾಗಿರುತ್ತದೆಯೋ, ಮತ್ತು ಎಲ್ಲಿ ವಾಟರ್ ಸೋರ್ಸಸ್ ಇದೆಯೋ, ಎಲ್ಲಿ ನೀರು ನಿಂತು ಕೊಳ್ಳುವುದಕ್ಕೆ ಜಾಗ ಇದೆಯೋ ಅಂಥಾ ಕಡೆ ಅಣೆಕಟ್ಟುಗಳನ್ನು ಕಟ್ಟಬೇಕು ಎಂದು ಮಾನ್ಯ ಮಂತ್ರಿಗಳು ತಮ್ಮ ಇಂಜನಿಯರುಗಳಿಗೆ ತಿಳಿಸಬೇಕು ಎಂದು ನಾನು ಈ ಸಂಧರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ರೈತರಿಗೆ ಎಲೆಕ್ಟ್ರಿಸಿಟಿ ಪಂಪುಸೆಟ್ಟುಗಳನ್ನು ಕೊಡುವ ವಿಷಯದಲ್ಲಿ ಹೇಳುವುದಾದರೆ, ಈ ತನಕ ಮೈಸೂರು ರಾಜ್ಯದಲ್ಲಿ 36,402 ಪಂಪು ಸೆಟ್ಟುಗಳನ್ನು ಕೊಟ್ಟಿದ್ದೇವೆ. ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಇದು ಒಂದು ನಾಚಿಕೆಯ ವಿಷಯ. ನಮ್ಮ ನೆರೆಯ ರಾಜ್ಯವಾದ ಮದ್ರಾಸ್ ರಾಜ್ಯದಲ್ಲಿ 3 ಲಕ್ಷಕ್ಕಿಂತ ಹೆಚ್ಚು ಪಂಪುಸೆಟ್ಟುಗಳನ್ನು ರೈತರಿಗೆ ಕೊಟ್ಟು ಅವು ಕೆಲಸ ಮಾಡುತ್ತಿರುವಾಗ ಆಂಧ್ರದಲ್ಲಿ ಎರಡು ಲಕ್ಷ 75 ಸಾವಿರ ಪಂಪು ಸೆಟ್ಟುಗಳು ಕೆಲಸ ಮಾಡುತ್ತಿರುವಾಗ ನಮ್ಮ ಇಡೀ ಮೈಸೂರು ಸಂಸ್ಥಾನದಲ್ಲಿ 36,402 ಎಲೆಕ್ಟ್ರಿಸಿಟಿ ಪಂಪು ಸೆಟ್ಟುಗಳು ಮಾತ್ರ ಕೆಲಸ ಮಾಡುತ್ತವೆ ಎಂದು ಹೇಳಿದರೆ ಈ ವಿಷಯವನ್ನು ಬಹಳ ತೀವ್ರವಾಗಿ ಆಲೋಚನೆ ಮಾಡಬೇಕು. ರೈತರು ಷೆಡ್‌ಗಳನ್ನು ಕಟ್ಟಿ, ಎಲೆಕ್ಟ್ರಿಸಿಟಿ ಪಂಪು ಸೆಟ್ಟುಗಳನ್ನು ತಂದು ಇಟ್ಟು ರೆಡಿ ಮಾಡಿಕೊಂಡು ವಿದ್ಯುಚ್ಛಕ್ತಿಯನ್ನು ಕೇಳಿದರೆ ವಿದ್ಯುಚ್ಛಕ್ತಿ ಸಿಕ್ಕುವುದಿಲ್ಲ. ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ರೈತ ಅರ್ಜಿಯನ್ನು ಕೊಟ್ಟು ಎರಡು ವರ್ಷಗಳಾದರೂ ಅವನಿಗೆ ವಿದ್ಯುಚ್ಛಕ್ತಿಯು ದೊರಕುವ ಪರಿಸ್ಥಿತಿ ಇಲ್ಲ. ಈ ವಿಷಯವನ್ನು ಈ ಇಲಾಖೆಯಲ್ಲಿ ಸಂಬಂಧಪಟ್ಟವರನ್ನು

ವಿಚಾರ ಮಾಡಿದರೆ ಕಂಬ ಇಲ್ಲ, ವೈರ್ ಇಲ್ಲ, ಇನ್ನು ಯಾವುದೋ ಸಾಮಾನುಗಳಿಲ್ಲ ಎಂದು ತಮ್ಮ ಕೊರತೆಗಳನ್ನು ತೋರಿಸುತ್ತಾರೆ. ಹೀಗಾದರೆ ದೇಶದಲ್ಲಿ ರೈತರ ಹೆಚ್ಚು ಆಹಾರವನ್ನು ಬೆಳೆಯಬೇಕೆಂದರೆ ಅದು ಹೇಗೆ ಸಾಧ್ಯ? ಆದ್ದರಿಂದ ರೈತರಿಗೆ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಲು ಏನೇನು ಸಲಕರಣೆಗಳು ಬೇಕೋ ಅವುಗಳನ್ನೆಲ್ಲಾ ವಿದ್ಯುಚ್ಛಕ್ತಿ ಇಲಾಖೆಗೆ ಕೂಡಲೇ ಒದಗಿಸಿಕೊಟ್ಟು ಬೇಗ ರೈತರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಇನ್ನು ರೈತರಿಗೆ ಒಳ್ಳೆಯ ಬಿತ್ತನೆ ಬೀಜಗಳನ್ನು ಒದಗಿಸತಕ್ಕ ವಿಷಯದಲ್ಲಿ ಹೇಳುವುದಾದರೆ, ಈಗ ನಮ್ಮ ದೇಶದಲ್ಲಿ ಒಟ್ಟು 74 ಸೀಡ್ ಫಾರಮ್‌ಗಳು ಇವೆ. ಈ ಸರ್ಕಾರಿ ಸೀಡ್ ಫಾರಮ್‌ಗಳು ಏನಿವೆ ಅವುಗಳಲ್ಲಿ ಒಳ್ಳೆಯ ಬೀಜಗಳನ್ನು ಬೆಳೆಸುವುದಿಲ್ಲ. ರಿಜಿಸ್ಟರ್ಡ್ ಸೀಡ್ ಗ್ರೋಯರ್ಸ್ ಯಾರು ಇದ್ದಾರೆ ಅವರು ರೈತರಿಗೆ ಸಕಾಲದಲ್ಲಿ ಬೀಜಗಳನ್ನು ಕೊಡುವುದಿಲ್ಲ. ಸಹಕಾರ ಸಂಘಗಳವರು ಅವರಿಂದ ಬೀಜವನ್ನು ವಸೂಲು ಮಾಡಿ ರೈತರಿಗೆ ಸಕಾಲದಲ್ಲಿ ಕೊಡುವ ಪರಿಸ್ಥಿತಿಯಲ್ಲಿ ಇಲ್ಲ

ಇನ್ನು ರೈತರಿಗೆ ರಾಸಾಯನಿಕ ಗೊಬ್ಬರವನ್ನು ರೈತರಿಗೆ ಒದಗಿಸತಕ್ಕ ವಿಷಯದಲ್ಲಿ ಹೇಳುವುದಾದರೆ ನಮ್ಮ ದೇಶದಲ್ಲಿ ಇದರ ಕೊರತೆ ತುಂಬಾ ಇದೆ. ಈ ವಿಷಯವನ್ನು ನಾನು ಡೆಪ್ಯುಟಿ ಕಮೀಷನರ ಗಮನಕ್ಕೂ ತಂದಿದ್ದೇನೆ. ರೈತರಿಗೆ ಬೇಕಾದ ಗೊಬ್ಬರ ಸಿಕ್ಕುವುದಿಲ್ಲ. ದೇಶದಲ್ಲಿ ಈಗಾಗಲೇ ಸಾಧಾರಣವಾಗಿ 100ಕ್ಕೆ 50ರಷ್ಟು ರಾಸಾಯನಿಕ ಗೊಬ್ಬರದ ಕೊರತೆ ಇದೆ. ಆದಷ್ಟು ಜಾಗ್ರತೆ ಗೊಬ್ಬರದ ಕೊರತೆಯನ್ನು ನೀಗುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಆಹಾರದ ವಿಷಯದಲ್ಲಿ ಹೇಳುವುದಾದರೆ, ಈ ಸರ್ಕಾರದ 18 ವರ್ಷಗಳ ಆಡಳಿತದಲ್ಲಿ ಯಾರು ವೋಟು ಕೊಟ್ಟು ತಮ್ಮನ್ನು ಅಧಿಕಾರಕ್ಕೆ ಏರಿಸಿದ್ದಾರೆಯೋ ಅಂಥಾ ಕೋಟ್ಯಾಂತರ ವೋಟುದಾರರ ಕೈಯಲ್ಲಿ ಸರ್ಕಾರದವರು ಭಿಕ್ಷಾಪಾತ್ರೆಯನ್ನು ಕೊಟ್ಟಿದ್ದಾರೆ. ನನ್ನ ಮಿತ್ರರಾದ ಆರ್. ಎಸ್. ಹೆಗಡೆ ಅವರು ಹೇಳಿದರು ಈ ದೇಶದಲ್ಲಿ ಹಸಿವಿನಿಂದ ಯಾರೂ ಸಾವನ್ನು ನೀಗಿಲ್ಲ ಎಂದು. 19[illegible]3ನೇ ಇಸವಿಯಲ್ಲಿ ಶ್ರೀಮಾನ್ ಮೋಹನ್‌ಲಾಲ್ ಸಕ್ಸೇನ ಎಂಬುವವರು ಪಾರ್ಲಿಮೆಂಟಿನಲ್ಲಿ ಭಾಷಣ ಮಾಡುತ್ತಾ ಒಟ್ಟು ನಮ್ಮ ದೇಶದಲ್ಲಿ ಹಸಿವಿನಿಂದ 100ಕ್ಕೆ 10 ಜನ ಪ್ರಾಣತ್ಯಾಗವನ್ನು ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆ ಭಾಷಣದ ಪ್ರತಿ ನನ್ನ ಹತ್ತಿರ ಇದೆ. ಈಗ 18 ವರ್ಷಗಳಿಂದ ಮೈಸೂರು ರಾಜ್ಯದಲ್ಲಿ 100ಕ್ಕೆ 65 ಜನ ಹಸಿವಿನಿಂದ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆಂದು ನಾನು ಖಂಡಿತವಾಗಿ ಹೇಳುತ್ತೇನೆ.

ದಿನಂಪ್ರತಿ ಬೆಳಗಾದರೆ ಪೇಪರಿನಲ್ಲಿ ಬರುತ್ತದೆ ಹಸಿವನ್ನು ತಾಳಲಾರದೆ ಎಷ್ಟೋ ಕುಟುಂಬಗಳು ಪ್ರಾಣ ಹತ್ಯೆ ಮಾಡಿಕೊಂಡಿವೆ ಎನ್ನುವುದು. ಅಲ್ಲದೆ ಇಂತಹ ಪ್ರಸಂಗಗಳು ಹೆಚ್ಚಾಗಿ ನಡೆಯುತ್ತಿದ್ದರೂ ಅದನ್ನು ಪೇಪರಿನವರು ಹಸಿವೆಯಿಂದ ಪ್ರಾಣ ಬಿಟ್ಟರು ಎನ್ನುವ ವಿವರಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಬೇರೆ ಕಾರಣಗಳನ್ನು ಹೇಳುತ್ತಾರೆ. ಇದರಿಂದಾಗಿ ತಮಗೆ ಸರಿಯಾದ ಲೆಕ್ಕ ಸಿಗುವುದಿಲ್ಲ. ಆದುದರಿಂದ ತಾವು ಇದರ ನಿಜಾಂಶವನ್ನು ತಿಳಿಯಬೇಕಾದರೆ ಪ್ರವಾಸ ಹೋದಾಗ ಅಲ್ಲಿರುವ ಪ್ರತಿ ಗುಡಿಸಲುಗಳವರೆಗೆ ಹೋಗಿ ನೋಡಿದರೆ ಅಲ್ಲಿರುವ ಪರಿಸ್ಥಿತಿ ತಮಗೆ ಅರಿವಾಗುತ್ತದೆ. ಇಂತಹ ಒಂದು ದುರಂತ ಚಿತ್ರ ಇದೆ ಎನ್ನುವುದು ತಮಗೇ ಚೆನ್ನಾಗಿ ಗೊತ್ತಾಗುತ್ತದೆ. ಇದನ್ನು ತಾವು ಬೇಕಾದರೆ ಈಗ ನೋಡಬಹುದು. ಅದನ್ನು ಬಿಟ್ಟು ಇಲ್ಲಿ ತಾವು ಉತ್ಸವದ ಮೂರ್ತಿಗಳಂತೆ ಆಯಾ ಜಿಲ್ಲೆಯ ಮುಖ್ಯ ಪ್ರದೇಶಗಳಿಗೆ ಹೋಗಿ ಅಲ್ಲಿ ಹೂಮಾಲೆಗಳನ್ನು ಹಾಕಿಸಿಕೊಂಡು ದೊಡ್ಡ ದೊಡ್ಡ ಊರುಗಳಲ್ಲಿರುವ ಎರಡು ಮೂರು ಜನರೊಡನೆ ಮಾತನಾಡಿಕೊಂಡು ಬಂದರೆ ಅದರಿಂದ ಖಂಡಿತವಾಗಿ ಬಡ ಗುಡಿಸಲುಗಳ ಪೂರ್ಣ ಚಿತ್ರ ದೊರೆಯುವುದಿಲ್ಲ. ಈಗ ದೇಶದಲ್ಲಿ ಆಹಾರದ ಪರಿಸ್ಥಿತಿ ಒಂದು ಗಂಡಾಂತರದ ಪರಿಸ್ಥಿತಿಯಲ್ಲಿದೆ. ಇದನ್ನು ಚೆನ್ನಾಗಿ ಆಲೋಚನೆ ಮಾಡಬೇಕಾದ ಪ್ರಸಂಗ ಇದೆ ಎನ್ನುವುದರ ಅರಿವು ಪಡೆಯಬೇಕು ಎಂದು ಇಲ್ಲಿ ಒತ್ತಿ ಹೇಳುತ್ತೇನೆ.

4-00 P.M.

ಆಮೇಲೆ ನಮ್ಮ ಆಹಾರ ಮಂತ್ರಿಗಳು ಈಗಾಗಲೇ ಒಂದು ಕಾನೂನನ್ನು ನಮ್ಮ ಮೈಸೂರು ರಾಜ್ಯದಲ್ಲಿ ತಂದಿದ್ದಾರೆ. ಇದು ಹೇಗಿದೆ ಎಂದರೆ, ಒಂದು ಗಾದೆ ಇದೆ ಅದು 'ಎಲ್ಲಾ ಬಿಟ್ಟು ಭಂಗಿ ನೆಟ್ಟ' ಎನ್ನುವಂತೆ ನಮ್ಮ ಆಹಾರ ಮಂತ್ರಿಗಳಾಗಿರುವ ನಮ್ಮ ಜತ್ತಿ ಸಾಹೇಬರು ಹೋಟೆಲುಗಳಲ್ಲಿ ಇಡ್ಲಿ ಹಾಗೂ ದೋಸೆಯನ್ನು ಮಾಡಿ ಕೊಡಬಾರದು ಎಂದು ಮಾಡಿದ್ದೇವೆ, ಇದರಿಂದ ಸುಮಾರು

(ಶ್ರೀ ಟಿ. ಭಾಸ್ಕರ ಶೆಟ್ಟಿ)

9,000 ಮೂಟೆಯಷ್ಟು ಅಕ್ಕಿ ಉಳಿತಾಯವಾಗುತ್ತದೆ ಎಂದು ದೊಡ್ಡದಾಗಿ ಹೇಳುತ್ತಾರೆ. ಇಂತಹ ಒಂದು ಕಾನೂನನ್ನು ಹೋಟೆಲುಗಳವರ ಮೇಲೆ ಹಾಕಿರುವುದರಿಂದ ಈಗ ಹೊರಗಡೆಯಿಂದ ನಮ್ಮ ಬೆಂಗಳೂರಿಗೆ ಬರುತ್ತಿರುವ ಲಕ್ಷಾಂತರ ಜನತೆ ಹಳ್ಳಿಗಾಡಿನಿಂದ ಬಂದು ಹೊಟ್ಟೆಗಿಲ್ಲದೆ ಹಿಂದಿರುಗಿ ಊಟವಿಲ್ಲದೆ ಹೋಗುತ್ತಿದ್ದಾರೆ. ಅಲ್ಲದೆ ಇಲ್ಲಗಿಂತ ಹೆಚ್ಚು ಅಭಾವವಿರುವ ನಮ್ಮ ನೆರೆಯ ರಾಜ್ಯಗಳಾದ ಕೇರಳದಲ್ಲಾಗಲೀ, ಮದ್ರಾಸಿನಲ್ಲಾಗಲೀ ಅಥವಾ ಮಹಾರಾಷ್ಟ್ರದಲ್ಲಾಗಲೀ ಅಲ್ಲಿನ ಸರಕಾರ ಇಡ್ಲಿ ಹಾಗೂ ದೋಸೆಗಳನ್ನು ಜನಕ್ಕೆ ಹೋಟಲುಗಳಲ್ಲಿ ಕೊಡಕೂಡದು ಎಂದು ಹೇಳಿ ಅನ್ಲೇನೂ ಕಾನೂನನ್ನು ಮಾಡಿಲ್ಲ. ಹಾಗಿರುವಾಗ ನಮ್ಮ ದೇಶದಲ್ಲಿ ಏತಕ್ಕಾಗಿ ಇದನ್ನು ತರಬೇಕು ಎನ್ನುವುದು ತಿಳಿಯುತ್ತಿಲ್ಲ. ಬೆಂಗಳೂರಲ್ಲಿ ಮನೆ ಇಲ್ಲದೆ ಬೇರೆ ಊರುಗಳಿಂದ ಇಲ್ಲಿಗೆ ಕೆಲಸಕ್ಕಾಗಿ ಬರುವ ಜನಗಳ ಹಿತದೃಷ್ಟಿಯಿಂದ ಈಗಲಾದರೂ ಸರಕಾರದವರು ನಮ್ಮ ದೇಶದಲ್ಲಿ ಹೋಟೆಲುಗಳಲ್ಲಿ ಇಡ್ಲಿ ಹಾಗೂ ದೋಸೆಗಳನ್ನು ಮಾಡಕೂಡದು ಎಂದಿರುವ ನಿರ್ಬಂಧವನ್ನು ರದ್ದು ಮಾಡಬೇಕೆಂದು ಈ ಸಂದರ್ಭದಲ್ಲಿ ಆಹಾರ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

[MR. DEPUTY SPEAKER in the Chair.]

ಆಹಾರದ ವಿಷಯದಲ್ಲಿ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಏಕರೀತಿಯಾದ ಒಂದು ನಿರ್ಣಯವನ್ನು ಕೈಗೊಳ್ಳುವುದು ಉತ್ತಮ. ನಮ್ಮ ಮಾನ್ಯ ಜತ್ತಿ ಸಾಹೇಬರು ಈಚೆಗೆ ವಿಧಾನ ಪರಿಷತ್ತಿನಲ್ಲಿ ಮನಾಪಲಿ ಪ್ರೊಕ್ಯೂರ್‌ಮೆಂಟಿನ ಬಗ್ಗೆ ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಅದು ಮುಂದಿನ ಸೆಪ್ಟಂಬರು ತಿಂಗಳಿಂದ ಮನಾಪಲಿ ಪ್ರೊಕ್ಯೂರ್‌ಮೆಂಟನ್ನು ಜಾರಿಗೆ ತರಬೇಕೆನ್ನುವ ನಿರ್ಧಾರ ಮಾಡಿದ್ದೇವೆಂದು ಹೇಳಿದ್ದಾರೆ. ಇದು ಒಂದು ಹಾಸ್ಯಾಸ್ಪದವಾದ ವಿಚಿತ್ರವಾಗಿದೆ. ಆಹಾರದ ಮಂತ್ರಿಗಳು ನಿಜವಾಗಿಯೂ ಪ್ರೊಕ್ಯೂರುಮೆಂಟು ಮಾಡಬೇಕೆಂದು ಆಸೆಯುಳ್ಳವರಾಗಿದ್ದಾರೆ ಅದನ್ನು ಕೂಡಲೇ ಮಾಡಬೇಕು. ಇದನ್ನು ಬಿಟ್ಟು ಮುನ್ಸೂಚನೆಯಾಗಿ ಇಂತಹ ದಿನದಿಂದ ಪ್ರೊಕ್ಯೂರ್‌ಮೆಂಟು ಮಾಡುತ್ತೇವೆಂದು ಹೇಳಿದರೆ ಬ್ಲ್ಯಾಕ್ ಮಾರ್ಕೆಟ್ಟು ಮಾಡುತ್ತಿರುವವರಿಗೆ ಬಹಳ ಅನುಕೂಲವಾಗಿ ಅವರು ಬೇಕಾದಷ್ಟು ಸಂಪಾದನೆ ಈಗಲೇ ಮಾಡಿಕೊಳ್ಳುತ್ತಾರೆ ಮತ್ತು ಮುಂದೆ ಅವರಿಗೆ ಇವರ ವ್ಯಾಪಾರ ಬಿಟ್ಟು ಹೋಗುತ್ತದೆ ಎಂದು ಅವರಿಗೆ ಅನುಕೂಲ ಮಾಡಲು ಈ ನಿರ್ಧಾರ ಮಾಡಿದಂತೆ ತೋರುತ್ತದೆ. ಅಲ್ಲದೆ ಇಂತಹ ವರ್ತಕರುಗಳಿಂದ ಮುಂದೆ ಚುನಾವಣೆ ಬರುತ್ತದೆ ಆಗ ಅವರಿಂದ ಹಣ ಪಡೆಯಬೇಕಾಗುತ್ತದೆ ಎಂದು ಅವರಿಗೆ ಒಂದು ಸೂಚನೆ ಕೊಡುವುದಕ್ಕಾಗಿ ಈ ರೀತಿ ಮಾಡುತ್ತಾರೆಯೋ ಏನೋ ಎಂದು ನನಗನ್ನಿಸುತ್ತದೆ. ಇಂತಹ ಸೂಚನೆಗಳನ್ನು ಈಗಲೇ ಕೊಡುವುದಕ್ಕೆ ಹೋಗಬೇಡಿ, ಮನಾಪಲಿ ಪ್ರೊಕ್ಯೂರ್‌ಮೆಂಟು ಮಾಡಬೇಕಾದರೆ ಈಗಿನಿಂದಲೇ ಸರಕಾರದ ವಶ ಮಾಡಿ ಸರಕಾರದ ಕೈಯಲ್ಲೇ ಏಕಸ್ವಾಮ್ಯದ ಅಧಿಕಾರವನ್ನು ಹೊಂದಿರಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ನಮ್ಮ ರಾಜ್ಯಪಾಲರು ಈ ಸಾರಿ ಮಾಡಿರುವ ಭಾಷಣ ತೀರಾ ಸಪ್ಪೆಯಾದ ಭಾಷಣ, ಇದನ್ನು ವಿರೋಧಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri R. M. DESAI (Bilgi).--Sir, By going through the Governor's Address this time we can know that we have done some achievements in the last year as well as we have a programme for the coming year also. In order not to waste the time at my disposal, I want to make a few observations on some of the items only. At the outset I wish to request the Government about one matter. On page 6 of the Address it is said that a Study Team set up by the Government of India is expected to visit the drought affected areas of the State sometime in February and report to the Government on further steps to be taken to afford relief to the people in distress. In this respect I would request the Government to see that this Study Team visits some of the districts where the famine conditions are practically common and specially to the districts where food production drive is very carefully taken up and where it is successful. I wish to suggest this because new strains of crops now propagated require fertilisers. Without fertilisers we cannot

grow them. We know that fertiliser is in great short supply and we are making demands to get supplies from the centre. When we intend to do some successful programme in some of the districts it would be very effective if this Study Team visits those place and we can effectively ask them to supply more fertilisers. I hope the Government will take a special note of it and I would like to emphatically request them to send the Study Team to all the districts. Instead of going through various items in the Address, let me reserve my comments to agriculture only. Let us not repeat that we are having scarcity. This time on account of the vagaries of nature we have to face critical times. The Government has taken all the necessary steps to see that the problems were effectively tackled. In a record time we have shown some good results on all the banks of rivers wherever water was available. Thanks to the efforts of the Government and co-operation of the people.

With regard to agriculture, the observation made are rather very short and particularly about food crops, a very small para has been attached whereas it should have been stated more emphatically in the Governor's Address. That is my view. A small para of six or seven lines indicate that we are making our effort to grow hgbrid strains which are yielding very good result. The only variety mentioned is Taichung 65 paddy. We have now hybrid jawar, two strains, maize, nearly four strains and Bajra also we have got one strain. I am proud to say that Ghataprabha Left Bank Canal area is the first and foremost to try these high-yielding specie and there, it has been very very successful. The hybrid seed growing programmes are also taken up in a very systematic manner with the advice of the Directorate of Agriculture and National Seed Corporation and Ford Foundation of Delhi. We get technical advice and at the same time, I should not restrain myself in extending our hearty thanks to the Syndicate Bank who have come into the field and helped us in all respects in the matter of monetary aid. As regards hybrid strains, I would emphatically request the Government one thing. If we really develop these strains of crops, and if we grow in all seriousness on 10 per cent of the total cultivated area, we will get the required food for our State. The remaining 90 per cent of the land we may devote for any other cash crops which we can market. Because our statistics have shown that one acre of hybrid growing gives you not less than 30 to 35 bags in about 6 months time ; first crop gives you 20 quintals and the second crop gives you not less than 15 quintals in the same area. This food is supposed to suffice for atleast 50 persons for one year. Calculating on this basis, for a population of 2 crores, if we very seriously apply our mind, material and money on only 4 lakhs of good cultivable area, we will get the food required for our State. I am not telling you as a matter of some miracle. We have achieved that in our area. Our neral exp rience show that we get not less than 20 quintals on irrigated areas and even under dry crop conditions also we get not less that 15 quintals of grains like jowar and maise. So, to grow these hybrid strains, the first necessity is fertilisers. The Government must divert everything to get fertilisers and supply them first to growers of hybrid strains who

(SRI R. M. DESAI)

are going to supply foodgrains required by our State. As a matter of fact, we were importing from foreign countries foodgrains. For a ship of foodgrains leaving from America and to arrive in India. i. e., from the loading point to unloading point, it takes 3 months. At the same time, if we look to the figures of the Transport charges, we are paying for a shipload from America to India, and if we invest that amount only in getting fertilisers to India, we can grow atleast double the ship-load quantity with that sort of fertilisers within the time the ship arrives from America to India. These are correct statistics which have been arrived at by the latest figures from Delhi and it is a fact also. So, let us divert all our attention and energy and get hold of some more fertilisers instead of foodgrains. Let us grow some more series of hybrid strains and it is going to be a successful programme in our State. Then, Sir, in this respect, of course, in Tungabhadra area also, they are having very huge programme of growing seeds and I hope and wish them all success. In our State, we have got one more programme which is worth mentioning. I wish to mention on the floor of this House that in Bellary District in Sandur Taluk, they have taken up a programme wherein this hybrid series have been taken up as a package programme by the Taluk Co-operative Society. This example is worth mentioning and I am mentioning it. They are going to supply seeds and fertilisers as a package programme to the people on one condition that some portion of their grown quantity has to be given back to the Taluk Co-operative Society at a particular price which quantity is to be again distributed back in the Taluk on a reasonable price basis. It is a good example no doubt. We have gotto adopt that and we must try that and we will try that.

Then, Sir, regarding irrigation matters, whether minor irrigation or major irrigation, the story of these irrigation schemes is the same; in Tungabhadra we first constructed the dam and we went on constructing the canals; in Ghataprabha we constructed the canals first and now we are thinking of constructing the dam. There is no happy co-ordination and the development is not proper. Anyway, Ghataprabha Left Bank Canal is coming up very well. Hidkal programme is also taken up by the Government seriously. I request the Government to see that Hidkal is completed in record time so that the entire area is developed very beautifully where hybrid strains growing has really caught the imagination of the people and it has really proved very successful. Some Members made some observations about distributing seeds through the co-operatives and the Government growing them. I for one do not think that Government can grow them on their farms and only Government farms cannot supply the seeds also So, the present movement of growing seeds under the care and guidance of National Food Corporation should be expanded on a more scientific basis districtwise. The Seed Corporation people are supplying all the machinery to process seed and also to store seeds.

[MR. SPEAKER in the Chair].

With the help and guidance of National Seed Corporation, we must see that proper and good seeds are distributed in all the areas. Then only this scheme will be successful.

SRI K. P. GADAG (Gadag).—The growing of hybrid jawar or wheat is an important matter. The Hon'ble Member has in his speech said that the Seed Corporation has undertaken this work. That is all-right. But I would like to know in how many districts this Seed Corporation has undertaken this work because there is much demand for this hybrid jawar, wheat and maise. So far, there is no agency to meet the demand.

I am glad that I have been allowed two more minutes to speak about this thing. I do not know whether the Seed Corporation had any cultivators in this activity. But our Directorate Office was good enough to direct some of the people in the matter in the Ghataprabha area. First it was developed in Belgaum District and it was taken up in Dharwar. In Ghataprabha area it has come up. Now it has been extended to length and breadth of it. There is no question of Seed Corporation coming to us. We know the ways and means and how to expand and we will do that. The Agriculture Offices will taken up this programme of expanding the seed growing in all most all the Districts in the near future and they have very good programme of expanding this scheme. As a matter of fact some more seed growing Associations have been formed in our District. It is a matter of responsibility in seed growing, seed distribution and improvements required by the cultivators. Such Associations will help in efficient handling of seed growing. I am sure these seed growing Associations will attend to the needs of the growing people. Seed growing programme is highly technical and it needs real good cultivators. We have instances in view wherein the spurious seeds have been distributed at exorbitant prices. There should be a control on this. The Government is going to move Seed Control Act also. It must come to control, effective distribution of quality seeds.

†SRI ANNARAO GANAMUKHI (Afzalpur).—Mr. Speaker Sir, I hope the mover of the motion on the Address delivered by the Governor of Mysore, is very much visualised in praising the Government for relaxation of the Prohibition Policy. He has given the reason that although the law is very good, the implementation side is lacking and the machinery is not working well and while therefore the health of the people is deteriorating day by day, the relaxation has come as a boon on those who are in the habit of drinking. Sir, if this argument is correct, it will be a fillip to various other laws for instance the Penal Code. If we extend the same argument where there is trouble in the implementation of any Act, those Acts have to be relaxed or they have to be scrapped. Hence Sir, I think, if the machinery of the Government has failed in this respect, that is to say in the implementation of

(SRI ANNA RAO GANAMUKHI)

the Prohibition Act of the Government, then the Prohibition Law cannot be blamed but the implementation is to be blamed. On this score, I think, the Government is entirely wrong in relaxing the provisions of the prohibition law in order to get some finances for the implementation of the Plan. Sir, when this Prohibition Policy was introduced in the first instance in Madras State, Sri C. Rajagopalachari, the then Chief Minister, said that to recoup the loss by the implementation of the prohibition policy, the Sales Tax is going to be introduced and the loss may be reimbursed by the Sales Tax Act. Again we are taking the maximum benefit out of the Sales Tax and we are imposing such taxes on essential commodities. We want to go again to the Excise Revenue and get as much as possible and whatever progress we have made in this direction we want to set it at nought. Even if we see our Constitution, it says under Article 47, "the State shall endeavour to bring about prohibition of the consumption except for medicinal purposes of intoxicating drinks and of drugs which are injurious to health". So, whatever laws are made it is incumbent and duty of the State to carry out as per the Directive Principles of the Constitution.

4-30 P.M.

Article 37 says that although the Directive Principles are not enforceable in any court, nevertheless in the governance of the country it shall be the duty of the State to apply this principle in making laws. Wherever there was no prohibition, I have no grudge in the State obtaining revenue there, but in areas where there is prohibition already it is very unfortunate that they are now putting the clock back and going against the directive principles laid down in the Constitution. Article 37 says it shall be the duty of the State to apply this principle in making laws. If the State does not make any law, it is a different thing, but if you have already a law and if you go against that law I think you are contravening the provisions of the very Articles of our Constitution. Not only the Ministers of the Government but also the Assembly and Council Members have taken their oath of allegiance to the Constitution and we have said: "I will bear true faith and allegiance to the Constitution of India as by law established." When once we have taken this oath we cannot contribute to any policy for relaxation of any law in order to allow people to drink. So I submit that this prohibition policy has to be strictly adhered to and the move for relaxation of the prohibition policy, to enable people to drink should be given up. Since prohibition is laid down under the Constitution itself it must be the policy of the Government to adhere to it and not to make any deviation from that policy. In the case of foodgrains it is said that every third chapati that we eat comes out of wheat imported from America. But some people say that we have got sufficient foodgrains in our country and only the distribution agency is defective, but to my

mind it appears that production also is not sufficient. The Food and Agriculture Ministry has undertaken a survey of a decade and in its report it is stated that the rate of increase in growth of foodgrains is 2.66 per cent increase in growth of population is 2.25 per cent. This is a very small margin that we have got. This shows that we are very much deficient in the productivity of our land. In America it is said that one farmer feeds at least 25 persons, but here the farmer can feed himself and not one person more. Therefore, the productivity of our land has to be increased and more production has to be brought about. With regard to Mysore State, if we compare ourselves with Madras or Kerala, we will come to know what is our position. The figures for increase in the percentage of progress for a decade show for Mysore 3·6%, for Punjab 5·6%, for Madras 4·9%. As far as foodgrains are concerned, Madras stands first whereas Mysore stands 8th in the list. So we are much behind Madras. Whenever we want to impose taxes on the people we always quote Madras and copy Madras even though our taxable capacity has not increased whereas Madras has made tremendous progress in this respect.

If we take the figures for 1960-61 as far as consumption of fertilizer is concerned, it is stated that Madras consumed 24,000 tons of nitrogenous fertilizers for a gross area of 13 million acres whereas Mysore got only about 12,000 tons for a gross area of 26 million acres which works out to 1 lb. per acre for Mysore as against 3 lbs. per acre for Madras. So we are much behind Madras. As regards Kerala, it is said that their figure is 2 lbs of nitrogenous fertilizer per acre. Even Andhra is much advanced in this respect. These are the figures collected by the Ministry of Food and Agriculture and so unless our State makes progress in scientific agriculture and unless we change the traditional type of agriculture, we cannot make any progress at all. The figures given in the Address as are very revealing. I do not know how we are short of food. It is said that as far as minor irrigation is concerned that we have achieved the target of 1,69,755 acres and after that we have covered 1 more lakh acres and so the total area under minor irrigation is 2,69,755 acres. Then we have taken up 42,000 wells. Though we have not completed all of them, at least by this time we would have completed all of them. If all of them are completed and if we take these figures into consideration, I think we should have covered the gap of 2 lakh tons in our food requirement. If we take into account the investment in the minor irrigation schemes and the major irrigation schemes it will be seen that it is not giving any return because we are deficit. It is not this year only that we find this deficit. If all the investments that we have made in these minor irrigation and major irrigation schemes were to give full dividend we could have covered the gap. But the fact remains that we are still a deficit State. Even though it is said that we have covered so many acres, actually I think the money has been wasted and there has been no coverage whatsoever. If there had been coverage we should have had enough food to eat. I think this spending spree on irrigation has not given any return.

(SRI ANNA RAO GANAMUKHI)

Another thing is that there is a controversy between the Irrigation Ministry and the Food Ministry in this regard. The Irrigation Ministry says that in minor irrigation schemes the investment utilization cannot be there for many years whereas the depreciation will be much and the amount spent will be more and so major and medium irrigation schemes should be taken up in preference to minor irrigation schemes. We are not in a position to know whether they have resolved this dispute amongst themselves, but our experts should be able to say what exactly is the position because we have not made any economic evaluation of our projects. We speak much about lift irrigation schemes. If we spend some money, we have to pay interest and we have to pay depreciation charges. If our farmers are to meet the maintenance charges, then all these charges put together will make a heavy charge on our agriculturists. I do not know whether this would be a correct procedure. Additionally, Sir, it is said that half of the surface water that is impounded gets evaporated. Therefore, in order to stop this evaporation, should we not first exploit the underground water by digging more wells than exploiting surface water. If the water table goes down, in that case, we can conserve water on the surface so that they may percolate into the wells. Therefore, the Government has not even made a geological survey of the wells which appears in a valley. If you sanction wells in a valley, then the same quantity of water gets distributed among so many wells and farmers will not be benefitted much. If you make a geological survey, then you can say that so many wells are enough for such a valley and no more wells.

Sri M. C. BASAPPA (Chamarajanagar).—If more wells are dug, will it diminish water resource ?

Sri ANNA RAO GANAMUKHI.—If in an acre of land, if new wells are dug, the same water goes into those wells and the water in the old wells get diverted. So, the farmer cannot get more water than what he was getting.

Mr. SPEAKER.—It all depends upon the availability of quantum of water below the surface. If there is plenty of water, if one more well is dug, it will not do any harm.

Sri ANNA RAO GANAMUKHI.—If you know the water table, you can decide how many wells can be dug there and how water can be distributed.

Mr. SPEAKER.—Does the Member want a comprehensive and complete picture ?

Sri ANNA RAO GANAMUKHI.—We must go by a scientific survey. Otherwise it will be uneconomical investment.

Mr. SPEAKER.—It is said in Bijapur, underground water table is very high. Should it not be investigated ?

Sri B. D. JATTI (Minister for Food).—The suggestion is that a geological survey should be carried out for underground water.

ಶ್ರೀ ಎಚ್. ಆರ್. ಕೇಶವಮೂರ್ತಿ.—ಎರಡು ಬಾವಿ ತೋಡಿದರೆ ಪ್ರತಿಯೊಂದು ಬಾವಿಗೂ ಬೇರೆ ಬೇರೆ ಜಲಕಣ್ಣುಗಳು ಇರುತ್ತವೆ. ಆದ್ದರಿಂದ ಒಂದು ಬಾವಿಯಲ್ಲಿ ನೀರು ಇದ್ದರೆ ಇನ್ನೊಂದು ಬಾವಿಗೆ ಆ ನೀರು ಹೇಗೆ ಬರುತ್ತದೆ ?

ಅಧ್ಯಕ್ಷರು.—ಅವರು ಹೇಳುತ್ತಾರೆ ಜಲಕಣ್ಣುಗಳು ಎರಡೇ ಇರುವುದು ಎಂದು. ಆದರೆ ನೀವು ಹೇಳುವುದು ಒಂದು ಸಾವಿರ ಕಣ್ಣುಗಳು ಇರುವುದು ಎಂದು.

Sri ANNA RAO GANAMUKHI.—I recommend my friend to read Irrigation Report of Maharashtra State.

Mr. SPEAKER.—We have got our own researches.

Sri ANNA RAO GANAMUKHI.—There is no Commission or Committee set up by this Government. We must appoint some committees so that whatever investment we make should not go waste. That is my suggestion. So far as major and medium irrigation schemes are concerned, the Irrigation Ministry itself says that depreciation is less there and per acre expenditure or investment is also less and the life of the major irrigation scheme is 100 years whereas in the case of minor irrigation schemes, if the tank gets silted up, then there will be depreciation and the ayacut area will be reduced year by year. There will be this depreciation and whatever we spend there will go waste. That is an argument advanced by the Irrigation Ministry. We must be told what is advantageous and what is not of benefit and what economic returns we get. We are getting some loans from the Reserve Bank and capitalising it ; you are imposing more taxes on the people ; but by this method of spending, there is a controversy in the Food and Agriculture Ministry in this regard. Many articles have appeared in the Pressy also.

Sri H. R. KESHAVA MURTHY.—There is no co-ordination.

Sri ANNA RAO GANAMUKHI.—It is a good thing. It is not a question of co-ordination. It is a scientific investigation about a thing that has to be done. Should we not know whether minor irrigation in a particular tract is beneficial or medium irrigation scheme is beneficial or a major irrigation should be taken up and what will be their life ? For instance, if we invest money on wells, I think the Government will get it back with interest. In the shape of loans they get the whole thing back with interest. Whatever depreciation is there in the wells, the farmer himself gets it done and he himself improves it. There is no waste or anything of the sort and no expenditure is booked by the Government. But in the case of minor irrigation they will have to maintain it and they will have to carry certain modifications also and interest also has to be given by the Government. On the other hand, there is no return on the investment. We should see to the economic aspect of it and we should see whether a particular scheme is advantageous or not. So far as food is concerned, I was saying that food has to be increased. As far as foodgrains are concern d, productivity has increased in our country. But as far as non-foodgrains are concerned, the productivity of commercial crops has not increased at all. We cannot divert more acreage under foodgrains to other crops. Therefore, every means has to be adopted to see that productivity of

(SRI ANNA RAO GANAMUKHI)

land is increased so far as non-foodgrains are concerned. We are talking about improving the strains, hybrid jawar and all those things. Unless we get all these things in a package plan, we will not be successful. We get water, but no fertilisers; we get fertilisers, but no improved seeds; if we do not get them in a package scheme, I think it will be a failure. One more suggestion as far as levy system is concerned. In the land reforms, we have said there are seven grades of land. If it is 7th grade the first is equal to the 8 acres. That means fertility in the last grade is eight times less than the first one. As far as dry lands are concerned there are three or four grades. So, when you impose a levy on a particular land you must make some distinction. Please do not impose a flat rate for every land. That will be inequitable and hard on the farmers because every land has not got equal fertility. When we have already adopted under the Land Reforms Act certain grades according to fertility of the soil, in a similar way here also please have some grades and reduce the quantity of levy according to the grade. It is very scientific and mathematical and reasonable. If only unreason is to guide you, then I have nothing to say. This is reasonable and this will go a long way in easing the situation.

†ಶ್ರೀ ಗೌಂಜಿ ವೀರಪ್ಪ (ಹರಿಹರ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣದ ಮೇಲೆ ತಂದಿರತಕ್ಕ ಈ ನಿರ್ಣಯವನ್ನು ಸಮರ್ಥನೆ ಮಾಡುತ್ತಾ ಕೆಲವು ವಿಚಾರಗಳನ್ನು ನಾನು ಮಾತನಾಡಬೇಕೆಂದು ನಿಂತಿದ್ದೇನೆ. ಈಗತಾನೆ ನನ್ನ ಮಾನ್ಯ ಸ್ನೇಹಿತರಾದ ಅಣ್ಣಾರಾಯರು ಮಾಡಿದ ಭಾಷಣದಲ್ಲಿ ಕೆಲವು ಅಂಶಗಳನ್ನು ನೋಡಿದರೆ ಆ ವಿಚಾರದಲ್ಲಿ ನೀವು ನಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದು ಅಗತ್ಯ ಎಂದು ಕಾಣುತ್ತದೆ. ಮೊದಲನೆಯದಾಗಿ ಮೇಜರ್ ಮತ್ತು ಮೈನರ್ ಇರಿಗೇಷನ್ ಬಗ್ಗೆ ಕೆಲವು ಅಂಶಗಳನ್ನು ಹೇಳಿದರು. ಇರಿಗೇಷನ್ ಪ್ರಾಜೆಕ್ಟುಗಳ ವಿಚಾರದಲ್ಲಿ ಸರ್ಕಾರದವರು ಅದರ ರಿಟರ್ನ್ ಯೋಚನೆ ಮಾಡಿ ಪ್ರಾಜೆಕ್ಟುಗಳನ್ನು ಕೈಕೊಳ್ಳಬೇಕೆಂದು ಖಚಿತವಾಗಿ ಅವರು ಹೇಳುತ್ತಾ ಇದ್ದ ಹಾಗೆ ಕಾಣಿಸಿತು. ಆದರೆ ಈಗ ನಮ್ಮ ಪರಿಸ್ಥಿತಿಯಲ್ಲಿ ದೇಶದಲ್ಲಿರತಕ್ಕ ಆಹಾರದ ಕೊರತೆಯನ್ನು ನಿವಾರಣೆ ಮಾಡಬೇಕಾದರೆ ನಾವು ಅಷ್ಟು ಕಟ್ಟುನಿಟ್ಟಾಗಿ ಲೆಕ್ಕಾ ಹಾಕಿಕೊಂಡು ಇರಿಗೇಷನ್ ಸ್ಕೀಮ್‌ನ್ನು ಮಾಡುವುದಕ್ಕಾಗುವುದಿಲ್ಲ. ನಮ್ಮ ದೇಶದಲ್ಲಿ ಮೈಸೂರಿನಲ್ಲಿ ಅಷ್ಟೇ ಅಲ್ಲ ಹೊರಗಡೆ ದೊಡ್ಡ ದೊಡ್ಡ ಸ್ಕೀಂಗಳನ್ನು ನಾವು ತೆಗೆದುಕೊಂಡರೆ, ಅದಾಗ ಏನು ಹಣ ಖರ್ಚಾಗಿದೆ ಅಷ್ಟಕ್ಕೆ ಯಾರಿಗೂ ಕೂಡ ರಿಟರ್ನ್ ಬರುತ್ತಾ ಇಲ್ಲ, ಬರುವುದಿಲ್ಲ. ಆದರೆ ಲಾಭ ಲೆಕ್ಕಾಚಾರ ಅಂಕಿಅಂಶ ತೆಗೆದುಕೊಂಡರೆ ಅದರಿಂದ ರಿಟರ್ನ್ ಇಲ್ಲ ಎಂದು ಹೇಳಬಹುದು. ಆದ್ದರಿಂದ ರಿಟರ್ನ್ ಇಟ್ಟುಕೊಂಡು ಈ ಸ್ಕೀಂಗಳನ್ನು ತೆಗೆದುಕೊಳ್ಳಬೇಕೆಂದು ಹೋದರೆ ಬಹುಶಃ ಮೈಸೂರು ಸಂಸ್ಥಾನದಲ್ಲಿ ಏನೇನು ಸ್ಕೀಂಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾ ಇದ್ದೇವೆಯೋ ಅವುಗಳೊಂದನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇನ್ನೊಂದು ಅಂಶವನ್ನು ಮರೆಯಬಾರದು. ಈ ಸ್ಕೀಂಗಳಿಗೆ ಹಣ ಖರ್ಚು ಮಾಡಿದ್ದನ್ನು ರಿಟರ್ನ್ ಮೂಲಕ ಪಡೆಯಬೇಕಾದರೆ ಅದು ರೈತರಿಂದ ನೇರವಾಗಿ ವಸೂಲು ಮಾಡತಕ್ಕ ವಾಟರ್ ರೇಟ್ ಮತ್ತು ಲ್ಯಾಂಡ್ ರೆವಿನ್ಯೂ ಇಂದ ಬರದಿದ್ದರೂ ಕೂಡ ಪರೋಕ್ಷವಾಗಿ ನಮ್ಮ ಸರ್ಕಾರಕ್ಕೆ ಅದರಿಂದ ಆದಾಯ ಬರುತ್ತದೆ. ಹೆಚ್ಚು ಆಹಾರವನ್ನು ಬೆಳೆದರೆ, ವ್ಯಾಪಾರ, ಉದ್ಯಮಗಳು ಹೆಚ್ಚಾಗುತ್ತವೆ. ಸೇಲ್ಸ್ ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್ ಮುಖಾಂತರ ಸರ್ಕಾರಕ್ಕೆ ವರಮಾನ ಬರುತ್ತದೆ. ಮೇಲಾಗಿ ಆಹಾರದ ಕೊರತೆ ನಿವಾರಣೆಯಾಗುತ್ತದೆ. ಆದ್ದರಿಂದ ರಿಟರ್ನ್ ಬಂದರೇ ಮಾಡಬೇಕು ಎಂದು ಲೆಕ್ಕಾಚಾರ ಹಾಕುವುದು ಸರಿಯಲ್ಲ. ಆದಾಗ್ಯೂ ಇದರಲ್ಲಿ ಬಹಳ ಅಂತರ ಇದ್ದರೆ, ಅದರ ಪರಿಣಾಮ ಬಹಳ ಸ್ವಲ್ಪ, ಖರ್ಚು ಬಹಳ ಜಾಸ್ತಿಯಾದರೆ ಮಾಡುವುದು ಬೇಡ. ಸರ್ವೇಸಾಧಾರಣವಾಗಿ ರಿಟರ್ನ್ ಏನೂ ಬರದಿದ್ದರೂ ಕೂಡ ಹೆಚ್ಚು ಲುಕ್ಸಾನಾಗದಿದ್ದರೆ ಅಂತಹ ಸ್ಕೀಂನ್ನು ತೆಗೆದುಕೊಳ್ಳಬಹುದು, ಈ ನೀತಿಯನ್ನು ಸರ್ಕಾರದವರು ಅನುಸರಿಸುತ್ತಾ ಇದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ, ನಾವು ತೆಗೆದುಕೊಂಡಿರತಕ್ಕ ಎಲ್ಲಾ ಸ್ಕೀಂಗಳನ್ನು ನೋಡಿದರೆ ರಿಟರ್ನ್ ಇರುವುದೇ ಇಲ್ಲ.

ಆದ್ದರಿಂದ ಈ ಅಂಶವನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದು ಅಗತ್ಯವಾಗಿದೆ. ಜೊತೆಗೆ ಶ್ರೀಮಾನ್ ಅಣ್ಣಾರಾಯರು ಸರ್ಕಾರದವರ ಫುಡ್ ಲೆವಿ ಇಂದ ಜನಗಳಿಗೆ ಬಹಳ ತೊಂದರೆಯಾಗುತ್ತಾ ಇದೆ, ಅಧಿಕಾರಿಗಳಿಂದ ಬಹಳ ಕಿರುಕುಳವಾಗುತ್ತಾ ಇದೆ ಎಂದು ಹೇಳುತ್ತಾ ಇದ್ದರು. ನನಗೆ ತಿಳಿದ ಹಾಗೆ ಸರ್ಕಾರದವರು ಜಿಲ್ಲಾಧಿಕಾರಿಗಳಿಗೆ ಡಿಸ್ಕ್ರಿಷನ್ ಕೊಟ್ಟಿದ್ದಾರೆ. ಎಲ್ಲಿ ಬೆಳೆ ಸಾಕಾದಷ್ಟು ಆಗಿರುವುದಿಲ್ಲವೋ ಅಲ್ಲಿ, ಇಷ್ಟೇ ಲೆವಿ ಅಂತ ಅಲ್ಲ, ಲೆವಿ ಮಾಡದಿದ್ದರೂ ಚಿಂತೆ ಇಲ್ಲ, ಕಡಿಮೆ ಲೆವಿ ಆದರೂ ತೆಗೆದುಕೊಳ್ಳಬಹುದು ಎಂದು ಸರ್ಕಾರದವರು ಅಧಿಕಾರ ಕೊಟ್ಟಿದ್ದಾರೆ, ಅಷ್ಟು ರಿಜಿಡ್ ಆಗಿ ವಸೂಲು ಮಾಡುತ್ತಾ ಇಲ್ಲ. ನನ್ನ ಅನುಭವದಲ್ಲಿರುವಂತೆ ಯಾವ ರೈತರಿಗೂ ಕೂಡ ಇದರಿಂದ ತೊಂದರೆ ಅಥವಾ ಕಿರುಕುಳವಾಗಿದೆ ಎಂಬುದು ಕಾಣಿಸುತ್ತಾ ಇಲ್ಲ. ಬಹುಶಃ ಬೇರೆ ಕಡೆಗಳಲ್ಲಿ ಆ ರೀತಿ ಆಗಿದ್ದರೆ ಅವನ್ನು ಸರ್ಕಾರದವರು ಸರಿಪಡಿಸುತ್ತಾರೆ ಎಂದು ಕಾಣುತ್ತದೆ.

ಶ್ರೀ ಅಣ್ಣಾರಾವ್ ಗಣಮುಖಿ.—ನಾನು ಆ ರೀತಿ ಹೇಳಲಿಲ್ಲ, ಲೆವಿ ಏನು ಹಾಕಿದ್ದಾರೆ ಅದರ ಕ್ವಾಂಟಿಟಿ ಏನಿದೆ ಅದರಿಂದ ತೊಂದರೆಯಾಗಿದೆ ಎಂದು ಹೇಳಿದೆ ಅಷ್ಟೆ.

ಶ್ರೀ ಗಾಂಜಿ ವೀರಪ್ಪ.—ಅದಕ್ಕೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಲೆವಿ ಸಿಸ್ಟಂ ಇರಬಾರದು ಎಂದು ಅವರು ತಿಳಿದುಕೊಂಡಿದ್ದಾರೆ. ಸರ್ಕಾರದವರು ಲೆವಿ ಮಾಡಲೇ ಬೇಕಾಗುತ್ತದೆ. ತುರ್ತು ಪರಿಸ್ಥಿತಿಯಲ್ಲಿ ಹೆಚ್ಚು ಬೆಳೆದವರಿಂದ ವಸೂಲು ಮಾಡಿ ಬೆಳೆ ಇಲ್ಲದ ಕಡೆಗೆ ಕೊಡುವುದಕ್ಕೆ ಸ್ಟಾಕ್ ಬಿಲ್ಡ್ ಅಪ್ ಮಾಡಲಿಕ್ಕೆ ಯಾವುದಾದರೂ ಒಂದು ಮಾರ್ಗ ಬೇಕಾಗುತ್ತದೆ, ಅದಕ್ಕೆ ಇದು ಬಿಟ್ಟು ಬೇರೆ ಯಾವುದೂ ಇಲ್ಲ. ಒಂದು ಎಕರೆಗೆ 25 ಕೆ. ಜಿ. ಅಂತ ಸರ್ವಸಾಧಾರಣವಾಗಿ ಮಾಡಿರುವುದು ಬಹುಶಃ ಕಡಿಮೆ ಆಗಿದೆ ಯಾರಿಗೂ ತೊಂದರೆಯಾಗುವುದಿಲ್ಲ. ಆದ್ದರಿಂದ ಲೆವಿ ಸಿಸ್ಟಂ ಸರಿಯಿಲ್ಲ ಎಂದು ಅವರು ಭಾವಿಸಿದ್ದರೆ ಅದು ಸರಿಯಿಲ್ಲ ಅದನ್ನು ಸರ್ಕಾರದವರು ಒಪ್ಪಬೇಕಾಗಿಲ್ಲ ಎಂದು ಹೇಳುತ್ತಾ ಇದ್ದೇನೆ.

ಶ್ರೀ ಅಣ್ಣಾರಾವ್ ಗಣಮುಖಿ.—ನಾನು ಹಾಗೆ ಅನ್ನಲಿಲ್ಲ, ಗ್ರೇಡೆಡ್ ಸಿಸ್ಟಂ ಮೇಲೆ ಹಾಕಿರಿ ಎಂದು ಹೇಳಿದೆ ಅಷ್ಟೆ.

ಶ್ರೀ ಗಾಂಜಿ ವೀರಪ್ಪ.—ಒಟ್ಟಿನಲ್ಲಿ ನಮ್ಮ ದೇಶದಲ್ಲಿ, ಮೈಸೂರು ದೇಶದಲ್ಲಿ ಅಷ್ಟೇ ಅಲ್ಲ, ಎಲ್ಲಾ ರಾಜ್ಯಗಳಲ್ಲೂ ಕೂಡ ನಮ್ಮ ದುರಾದೃಷ್ಟದಿಂದ ಕಳೆದ ಒಂದು ವರ್ಷದಿಂದ ಈ ಆಹಾರದ ಪ್ರಶ್ನೆ ಬೃಹದಾಕಾರವಾಗಿ ಕಾಣುತ್ತಾ ಇದೆ. ಅದಕ್ಕೆ ನಾನಾ ಕಾರಣಗಳು ಇರಬಹುದು. ಇಲ್ಲೇ ಅಲ್ಲ ಬೇರೆ ಸಂಸ್ಥಾನಗಳಲ್ಲೂ ಕೂಡ ಮುಂಜಾಗರೂಕತೆಯಿಂದ ಇದನ್ನು ಯೋಚನೆ ಮಾಡಿ ಕ್ಷಾಮ ಬರದಂತೆ ಮಾಡಿಕೊಳ್ಳುವುದಕ್ಕೆ ಏನು ಪರಿಹಾರೋಪಾಯಗಳನ್ನು ಮಾಡಬೇಕೆನ್ನುವುದನ್ನು ಬಹುಶಃ ಯೋಚನೆ ಮಾಡಲಿಲ್ಲ ಎಂದು ಕಾಣುತ್ತದೆ. ಮೈಸೂರಿನಲ್ಲೂ ಕೂಡ ಕಳೆದ ಹತ್ತು ವರ್ಷಗಳ ಬಡ್ಜೆಟ್‌ನ್ನು ನೋಡಿದರೆ 1956 ರಿಂದಲೂ ಕೂಡ ಪ್ರತಿವರ್ಷವೂ ಮುಂದಾಲೋಚನೆಯಿಂದ ಇರಿಗೇಷನ್ ಸ್ಕೀಂಗಳಿಗೆ ಹೆಚ್ಚು ಹಣ ಖರ್ಚು ಮಾಡುವಾಗ ಒಂದೆರಡು ವರ್ಷಗಳಲ್ಲಿ ಮಾಡಿ ಮುಗಿಸಬಹುದಾದ ಒಂದೆರಡು ಸ್ಕೀಂಗಳನ್ನು ತೆಗೆದುಕೊಳ್ಳದೆ, 10-15 ವರ್ಷಗಳಲ್ಲಿ ಮುಗಿಯುವಂತಹ ಸ್ಕೀಂಗಳನ್ನು ತೆಗೆದುಕೊಂಡು ತಕ್ಷಣ ಅದರಿಂದ ಪ್ರಯೋಜನ ದೊರಕದಂತೆ ಆಗಿರುವುದನ್ನು ಕಾಣುತ್ತಾ ಇದ್ದೇವೆ. ಆದ್ದರಿಂದ ಪೂರ್ತಿ ಫಲ ಬರುವಂತಹ ಒಂದೆರಡು ಸ್ಕೀಂಗಳನ್ನು ತೆಗೆದುಕೊಂಡು ಅವನ್ನು ಪೂರ್ತಿ ಮಾಡಿ ಅನಂತರ ಇನ್ನೆರಡು ಸ್ಕೀಂಗಳನ್ನು ತೆಗೆದುಕೊಳ್ಳುವಂತಹ ಏರ್ಪಾಡನ್ನು ಮಾಡಬೇಕು, ಇಲ್ಲದೇ ಹೋದರೆ ನಮ್ಮ ಬಡ್ಜೆಟ್‌ನಲ್ಲಿ ಹೆಚ್ಚು ಹಣವನ್ನು ಈ ನೀರಾವರಿಗೆ ಖರ್ಚು ಮಾಡಲೇ ಬೇಕಾಗುತ್ತದೆ. ನಾನು ಮದರಾಸು ಮತ್ತು ಆಂಧ್ರ ದೇಶಗಳ ಬಡ್ಜೆಟನ್ನು ನೋಡಿದ್ದೇನೆ. ಅಲ್ಲಿ ಆಹಾರಕ್ಕೆ ಕೊರತೆ ಇಲ್ಲದೇ ಇರುವುದಕ್ಕೆ ಕಾರಣ ಈ ಯೋಜನೆಗಳಿಗೆ ಹೆಚ್ಚು ಹಣ ಖರ್ಚು ಮಾಡುತ್ತಾ ಇದ್ದಾರೆ. ಅವರು ಇದಕ್ಕೆ ಹೆಚ್ಚು ಗಮನ ಕೊಟ್ಟಿರುವುದರಿಂದ ಮದರಾಸಿನಲ್ಲಿ ಶೇಕಡ 40 ಎಕರೆಯಷ್ಟು ಪ್ರದೇಶ ನೀರಾವರಿಯಲ್ಲಿ ಬರುತ್ತದೆ, ಆಂಧ್ರದಲ್ಲಿ ಸುಮಾರು ಶೇಕಡ 28 ರಷ್ಟು ಭೂಮಿ ನೀರಾವರಿಯಲ್ಲಿ ಇದೆ. ನಮ್ಮ ರಾಜ್ಯದಲ್ಲಿ ಶೇಕಡ 6 ಅಥವಾ 7 ಅಷ್ಟು ಮಾತ್ರ ನೀರಾವರಿಯಾಗಿದೆ. ಆದ್ದರಿಂದ ನನ್ನ ಸಲಹೆಯಾವುದೂ ಇಷ್ಟೆ. ನಮ್ಮ ರಾಜ್ಯಪಾಲರ ಭಾಷಣದಲ್ಲಿ 1966–67 ನೇ ಪ್ಲಾನ್‌ನಲ್ಲಿ 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾದರೆ, ಅದರಲ್ಲಿ ಅರ್ಧ ಭಾಗದಷ್ಟು ದೇಶದ ಅಭಿವೃದ್ಧಿಗೆ ಹೆಚ್ಚು ಆಹಾರ ಬೆಳೆಯುವುದಕ್ಕೆ ಖರ್ಚು ಮಾಡುವ ಯೋಜನೆಗಳನ್ನು ಮಾಡಬೇಕು ಎಂದು ಹೇಳಿದ್ದಾರೆ. ಅದೂ ಕೂಡ ಸಾಲದು ಎಂದು ನನ್ನ ಅಭಿಪ್ರಾಯ, ಏಕೆಂದರೆ ಆಹಾರದ ಕೊರತೆ ದೇಶದಲ್ಲಿ ಇಲ್ಲದೇ ಇದ್ದರೆ ಬೇರೆ ಕೆಲಸಗಳನ್ನು ಯೋಜನೆಗಳನ್ನು ಬಹಳ ಯಶಸ್ವಿಯಾಗಿ ಮಾಡಬಹುದು. ಆಹಾರದ ಕೊರತೆಯಾದರೆ ದೇಶದಲ್ಲಿ ಯಾವ ಶಾಂತಿಯೂ ಇರುವುದಿಲ್ಲ, ಯಾವ ಪ್ರಗತಿಯನ್ನೂ ಸಾಧಿಸುವುದಕ್ಕಾಗುವುದಿಲ್ಲ

(ಶ್ರೀ ಗಾಂಡಿ ವೀರಪ್ಪ):

ದಿನವಾಯಿತೆಲ್ಲಾ ಬರೀ ಆಹಾರದ ವಿಷಯದಲ್ಲೇ ಕಳೆದು ಹೋದರೆ ಇನ್ನು ಬೇರೆ ಯಾವ ಕೆಲಸವನ್ನೂ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಮನುಷ್ಯನಿಗೆ ಅಗತ್ಯವಾಗಿ ಬೇಕಾಗತಕ್ಕ ಆಹಾರದ ಪರಿಪೂರ್ಣತೆಯ ಬಗ್ಗೆ ಸರ್ಕಾರದವರು ಸರ್ವ ಪ್ರಯತ್ನವನ್ನೂ ಮಾಡಬೇಕು.

5-00 P.M.

ಈಗ ಖರ್ಚು ಮಾಡಿರುವುದರಲ್ಲಿ ಇನ್ನೂ ಅರ್ಧ ಭಾಗ ಹೆಚ್ಚು ಖರ್ಚು ಮಾಡಿದರೂ ಚಿಂತೆಯಿಲ್ಲ. ಇರತಕ್ಕಂಥ ನದಿಗಳ ನೀರನ್ನು ಪೂರ್ತಿಯಾಗಿ ಉಪಯೋಗಿಸಬೇಕು. ಇದಕ್ಕಾಗಿ ಸಾಲಮಾಡಿದರೂ ಚಿಂತೆಯಿಲ್ಲ. ನಮ್ಮ ರಾಜ್ಯದಲ್ಲಿರತಕ್ಕಂಥ ಶೇಕಡ 20 ರಷ್ಟು ಪೊಟೆನ್ಷಿಯಾಲಿಟಿ ನೀರಾವರಿ ತೆಗೆದು ಕೊಳ್ಳಬಹುದು. ಇದು ಆಂಧ್ರದಲ್ಲಿ ಶೇಕಡ 38 ರಷ್ಟು ಆಗಬಹುದು. ಮದ್ರಾಸ್ ರಾಜ್ಯದಲ್ಲಿ ಇದು ಶೇಕಡ 40 ಕ್ಕಿಂತ ಜಾಸ್ತಿ ಇದೆ. ಎರಡು ಲಕ್ಷ ನೀರಾವರಿ ಬಾವಿಗಳನ್ನು ಮಾಡಲಾಗುವುದೆಂದು ಕೇಳಿದ್ದೇನೆ. ಒಟ್ಟಿನಲ್ಲಿ ಹೆಚ್ಚು ನೀರಾವರಿ ಸೌಲಭ್ಯ ಒದಗಿಸಿ ಕೊಡಬೇಕು. ದೊಡ್ಡ ನದಿಗಳ ನೀರನ್ನು ಉಪಯೋಗಿಸಿದರೂ ಕೂಡ ನಮ್ಮ ಯೋಜನೆ ಪರಿಪೂರ್ಣವಾಗವೆ ಶೇಕಡ 20 ರಷ್ಟು ನೀರಾವರಿಯಾಗುತ್ತದೆ. ಆದುದರಿಂದ ನೀರಾವರಿ ಬಾವಿಗಳನ್ನು ಮಾಡುವುದಲ್ಲದೆ ಲಿಫ್ಟ್ ಇರಿಗೇಷನ್ ತೆಗೆದು ಕೊಂಡರೆ ಹೆಚ್ಚು ಆಹಾರ ಧಾನ್ಯ ಉತ್ಪಾದನೆ ಮಾಡುವುದಕ್ಕೆ ಅನುಕೂಲ ವಾಗುತ್ತದೆ. ಇದನ್ನು ಸರಕಾರ ಯೋಚನೆಮಾಡಿ ಇನ್ನೊಂದು ಸಲ ಆಹಾರ ಕೊರತೆ ಬಾರದಂತೆ ಮಾಡಬೇಕು. ಜೋಳ, ರಾಗಿ ವಿಚಾರದಲ್ಲಿ ಕೊರತೆ ಇಲ್ಲದೆ ಪರಿಪೂರ್ಣತೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅಕ್ಕಿಯ ವಿಚಾರದಲ್ಲಿ ಮಾತ್ರ 17 ಪರ್ಸೆಂಟ್ ಡೆಫಿಸಿಟ್ ಇದೆ. ಗೋಧಿ ಅಕ್ಕಿಯ ವಿಚಾರದಲ್ಲಿ ಮಾತ್ರ ಕೊರತೆ ಇದೆ. ಹೆಚ್ಚು ಗೊಬ್ಬರ, ಸುಧಾರಿತ ಬೀಜ ಒದಗಿಸಿದರೆ ಶ್ರೀಘ್ರದಲ್ಲಿ ಹೆಚ್ಚು ಭತ್ತ ಬೆಳೆಯಬಹುದು. ಮಳೆಯಿಲ್ಲದೆ ಅನೇಕ ಸಲ ಕಷ್ಟ ಬರುತ್ತದೆ. ಇಂಥ ಆಹಾರ ಧಾನ್ಯದ ಕೊರತೆಯ ಸಮಯದಲ್ಲಿ ನಮ್ಮ ಪ್ರಧಾನಿಯವರು ಸೋಮವಾರ ಒಂದು ಉಪವಾಸ ಮಾಡಬೇಕು ಆಹಾರ ಧಾನ್ಯ ಉಳಿಸಬೇಕು ಎಂದು ಒಳ್ಳೇ ಸೂಚನೆ ಮಾಡಿದ್ದಾರೆ. ಇಂಥ ಕಷ್ಟದ ಕಾಲ ಬಂದುದರಿಂದ ಜನ ಕೂಡ ಕಣ್ಣು ತೆರೆದಿದ್ದಾರೆ. ಆದುದರಿಂದ ಕಷ್ಟ ಬರುವುದು ಒಳ್ಳೆಯದು ಎಂದು ನಾನು ತಿಳಿದುಕೊಂಡಿದ್ದೇನೆ. ಮೈಸೂರು ದೇಶದಲ್ಲಿ ಅಂಥ ಕೊರತೆ ಇಲ್ಲ. ಸರ್ಪ್ಲಸ್ ಜಿಲ್ಲೆಗಳಿಂದ ಕೆಲವು ಜಿಲ್ಲೆಗಳಿಗೆ ಆಹಾರ ಧಾನ್ಯ ಹೋಗುತ್ತದೆ. ಮುಖ್ಯವಾಗಿ ಸಣ್ಣ ಸಣ್ಣ ಕಾರ್ಯಗಳಿಗೆ ಪ್ರಾಧಾನ್ಯತೆ ಕೊಟ್ಟರೆ ಕೊಂದರೆ ಕಡಿಮೆಯಾಗುತ್ತದೆ. ಒಳ್ಳೇ ಬೀಜ ಒದಗಿಸುವುದಕ್ಕೆ ಒಂದು ಸೀಡ್ ಕಾರ್ಪೋರೇಷನ್ ಮಾಡಬೇಕೆಂದು ಯೋಜನೆ ಮಾಡಿದ್ದಾರೆ. ಒಂದು ಕಡೆ ಐದು ಸಾವಿರ ಎಕರೆಯಲ್ಲಿ ಉತ್ತಮ ಬೀಜ ತಯಾರುಮಾಡಿ ಒದಗಿಸಿದರೆ ಬಹಳ ಅನುಕೂಲವಾಗುತ್ತದೆ. ದೇಶದಲ್ಲಿ ಆಹಾರದ ಕೊರತೆ ಉಳಿಯುವುದಿಲ್ಲ. ಬೇರೆ ರಾಜ್ಯಕ್ಕೆ ಆಹಾರ ಧಾನ್ಯ ಸರಬರಾಜು ಮಾಡುವ ಶಕ್ತಿ ನಮಗೆ ಬರುತ್ತದೆ. ಆದುದರಿಂದ ಹೆಚ್ಚು ಪ್ರಯತ್ನ ಸರಕಾರ ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಇನ್ನೊಂದು ವಿಷಯವನ್ನು ಶ್ರೀಮಾನ್ ಗೋಪಾಲ ಗೌಡರು ಹೇಳಿರುವುದು ನನ್ನ ಮನಸ್ಸಿಗೆ ಬಂದಿದೆ. ನಮ್ಮ ಕನ್ನಡ ರಾಜ್ಯದಲ್ಲಿ ಕನ್ನಡ ಭಾಷೆಗೆ ಪ್ರಾಧಾನ್ಯತೆ ಇರಬೇಕು. ಇದುವರೆಗೆ ಎಲ್ಲ ಹಂತಗಳಲ್ಲಿ ಕನ್ನಡ ಮಾಧ್ಯಮವಾಗಿಲ್ಲ. ಕನ್ನಡವು ಅಧಿಕೃತ ಭಾಷೆಯಾಗಬೇಕು. ಜನರಲ್ಲಿ ಭಾಷಾಭಿಮಾನ ಇರುತ್ತದೆ. ಇದರ ಬಗ್ಗೆ ಪ್ರಯೋಗ ಮಾಡಬೇಕಾಗಿಲ್ಲ. ಅತ್ಯಗತ್ಯವಾಗಿ ಎಷ್ಟು ಜಾಗ್ರತೆ ಕನ್ನಡವು ಅಧಿಕೃತ ಭಾಷೆಯೆಂದು ಮಾಡುತ್ತೇವೋ ಅಷ್ಟು ಒಳ್ಳೆಯದು. ಸಾಮಾನ್ಯ ರೈತನ ಭಾಷೆ ಸರಕಾರದ ಭಾಷೆಯಾದರೆ ಅನುಕೂಲವಾಗುತ್ತದೆ. ಇಂಗ್ಲೀಷ್ ಮಾತನಾಡತಕ್ಕಂಥವರು ಮೇಲ್ಮಟ್ಟದವರು, ಇಂಗ್ಲಿಷ್ ಬಾರದೇ ಇದ್ದವರು ಕಡಿಮೆ ಮಟ್ಟದವರು ಎಂಬ ಭಾವನೆ ಹೋಗಬೇಕು. ಬೇರೆ ರಾಜ್ಯಗಳಲ್ಲಿ ಆ ರಾಜ್ಯದ ಅಧಿಕೃತ ಭಾಷೆ ಬಾರದೆ ಇದ್ದರೆ ಕೆಲಸ ಕೊಡುವುದಿಲ್ಲ. ಮದ್ರಾಸ್ ರಾಜ್ಯದಲ್ಲಿ ತಮಿಳು ಭಾಷೆ ಬಾರದೇ ಇದ್ದರೆ ಕೆಲಸ ಕೊಡುವುದಿಲ್ಲ. ನಮ್ಮ ರಾಜ್ಯದಲ್ಲಿ ಕೂಡ ಎಲ್ಲ ಉನ್ನತ ಅಧಿಕಾರಿಗಳು ಕನ್ನಡ ಭಾಷೆ ತಿಳಿದುಕೊಂಡವರಾಗಿರಬೇಕು. ಇದರಿಂದ ಆಡಳಿತದಲ್ಲಿರುವ ಅಧಿಕಾರಿ ವರ್ಗದವರಿಗೂ ಸಾಮಾನ್ಯ ಜನರಿಗೂ ಪರಸ್ಪರ ಒಳ್ಳೇ ಭಾವನೆ ಉಂಟಾಗುತ್ತದೆ. ಆದುದರಿಂದ ಆದಷ್ಟು ಜಾಗ್ರತೆ ಕನ್ನಡ ಭಾಷೆ ಅಧಿಕೃತಭಾಷೆ ಮಾಡಿ ಎಂದು ಸರಕಾರಕ್ಕೆ ತಿಳಿಸುತ್ತೇನೆ.

ಒಟ್ಟಿನಲ್ಲಿ ರಾಜ್ಯಪಾಲರವರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ಶ್ರೀಮಾನ್ ಮಂಜಯ್ಯ ಶೆಟ್ಟಿಯವರ ನಿರ್ಣಯಕ್ಕೆ ಸರ್ವ ಬೆಂಬಲ ಕೊಟ್ಟು ನನ್ನ ಭಾಷಣ ಮುಗಿಸುತ್ತೇನೆ.

† Sri L. B. BIRJE (Khanapur).—[Spoke in Marathi]

Mr. SPEAKER.—I would like to know how much time is required by the Minister because tomorrow by 5 O'clock this debate should be over. I would like to know so that I may accommodate others.

Sri B. D. JATTI.—We may not require more than two hours in all.

†ಶ್ರೀ ಬಿ. ಎಚ್. ಲಕ್ಷ್ಮಣಯ್ಯ (ಬೇಲೂರು).—ಮಾನ್ಯ ಸಭಾಪತಿಗಳೇ ಈಗ ನಮ್ಮ ಮುಂದಿರತಕ್ಕ ರಾಜ್ಯಪಾಲರ ಭಾಷಣದ ವಂದನಾರ್ಪಣೆಯಕ್ಕೆ ಬೆಂಬಲ ಕೊಡುತ್ತಾ ನಾನು ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಮಾಡಬೇಕೆಂದು ಇಷ್ಟಪಡುತ್ತೇನೆ.

ಈ ವರ್ಷ ನಮ್ಮ ರಾಜ್ಯದಲ್ಲಿ ಮಳೆಬೆಳೆಗಳು ಹೋಗಿ ಎಲ್ಲೆಲ್ಲಿಯೂ ಆಹಾರಾಭಾವ ಉಂಟಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ಅನ್ನದ ಕೊರತೆ ದನಕರುಗಳಿಗೆ ಹುಲ್ಲು ನೀರಿನ ಕೊರತೆಯುಂಟಾಗಿರತಕ್ಕದ್ದು ಎಲ್ಲೆಲ್ಲೂ ಕಂಡುಬರುತ್ತಿದೆ. ಜನರಿಗೆ ಕೂಲಿ ಕೆಲಸ ಕೂಡ ಸಿಕ್ಕದೆ ಜೀವನವು ಬಹಳ ಚಿಂತಾಜನಕವಾಗಿದೆ. ರಾಜ್ಯ ಸರ್ಕಾರದವರು ಅಭಾವ ಪ್ರದೇಶಗಳಲ್ಲಿ ಜನರ ಜೀವನೋಪಾಯಕ್ಕಾಗಿ ಅಲ್ಲಲ್ಲೆ ಕಾಮಗಾರಿಗಳನ್ನು ಪ್ರಾರಂಭಿಸಲು ಹಣವನ್ನು ಖರ್ಚು ಮಾಡಿದ್ದಾರೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿರುವುದರಿಂದ ಅದಕ್ಕಾಗಿ ಅವರಿಗೆ ನಮ್ಮ ವಂದನೆಗಳನ್ನು ಸಲ್ಲಿಸಬೇಕಾಗಿದೆ. ಆದರೆ ಆ ಹಣ ಏನೇನು ಸಾಲದು. ಆದುದರಿಂದ ಆ ಹಣವನ್ನು ಇನ್ನೂ ಜಾಸ್ತಿ ಮಾಡಿ ಜನರಿಗೆ ತೊಂದರೆಯಾಗಿರತಕ್ಕ ಕಾಲದಲ್ಲಿ ಸಹಾಯ ಮಾಡಬೇಕಾದುದು ರಾಜ್ಯ ಸರ್ಕಾರದ ಕರ್ತವ್ಯವಾಗಿರುತ್ತೆಂದು ನಾನು ಅಭಿಪ್ರಾಯ ಪಡುತ್ತೇನೆ. ಅಭಾವ ಪೀಡಿತ ಪ್ರದೇಶಗಳಲ್ಲಿ ಕೆರೆ ಬಾವಿಗಳ ದುರಸ್ತಿ ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಅನೇಕ ಕಡೆ ಕುಡಿಯುವ ನೀರಿಗೂ ಬಹಳ ತೊಂದರೆಯುಂಟಾಗಿದೆ. ಅಂಥಾ ಬಾವಿಗಳ ಕಾಮಗಾರಿಯನ್ನು ಸಹ ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಮೇಲಾಗಿ ಅಭಾವ ಪ್ರದೇಶಗಳಲ್ಲಿ ಎಲ್ಲೆಲ್ಲಿ ಹಳ್ಳಗಳಿಗೆ ಪಿಕಪ್‌ಗಳನ್ನು ಹಾಕಲು ಅನುಕೂಲವಿದೆಯೋ ಅಂಥಾ ಕಡೆಗಳಲ್ಲೆಲ್ಲಾ ಪಿಕಪ್‌ಗಳನ್ನು ಹಾಕಿದರೆ ಸಾವಿರಾರು ಎಕರೆಗಳ ತರಿ ವ್ಯವಸಾಯಕ್ಕೆ ಅನುಕೂಲವಾಗುತ್ತದೆ. ಅದರಿಂದ ಹೆಚ್ಚು ಆಹಾರ ಬೆಳೆಯಲು ಅವಕಾಶವಾಗುತ್ತದೆ. ಆದರೆ ಇಲ್ಲಿಯವರೆಗೂ ಈ ಪಿಕಪ್‌ಗಳ ಕೆಲಸಕ್ಕೆ ಸರ್ಕಾರದವರು ಹೆಚ್ಚಿನ ನಿಗಾ ಕೊಟ್ಟಿಲ್ಲ. ಈಗಲಾದರೂ ಸರ್ಕಾರದವರು ಈ ವಿಚಾರದಲ್ಲಿ ಹೆಚ್ಚಿನ ಆಸಕ್ತಿ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಪರಿಹಾರ ಕಾಮಗಾರಿಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ನಡೆಸತಕ್ಕ ಅಧಿಕಾರಿಗಳು ಯಾರಿರುತ್ತಾರೋ ಅಂಥವರು ಮಾನವೀಯತೆಯ ದೃಷ್ಟಿಯಿಂದ ಕೆಲಸ ಮಾಡುವಂತಹ ಜನರನ್ನೇ ಆರಿಸಿ ಅಲ್ಲಿಗೆ ಹಾಕಬೇಕಾದುದು ಅಗತ್ಯವೆಂದು ಅಭಿಪ್ರಾಯ ಪಡುತ್ತೇನೆ. ಇಲ್ಲವಾದರೆ ಜನರಿಗೆ ಅಲ್ಲಿ ಹೆಚ್ಚಿನ ಕಿರುಕುಳಗಳಾಗುತ್ತದೆ. ಆದ ಕಾರಣ ಆ ಜಾಗಗಳಿಗೆ ಒಳ್ಳೆಯ ಅಧಿಕಾರಿಗಳನ್ನು ಹಾಕಿದರೆ ಜನರಿಗೂ ಅನುಕೂಲವಾಗಿ, ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆಂದು ಹೇಳಬಯಸುತ್ತೇನೆ.

ಇನ್ನು ಲಿಫ್ಟ್ ಇರಿಗೇಷನ್ ವಿಚಾರಕ್ಕೆ ಬಂದರೆ ನಮ್ಮ ಜಿಲ್ಲೆಯಲ್ಲಿ ಸಹಕಾರ ಪದ್ಧತಿಯ ಮೇಲೆ ಅಲ್ಲಿ ಕೆಲಸವನ್ನು ಪ್ರಾರಂಭಿಸಿದ್ದಾರೆ. ಅದರಿಂದ ಅಲ್ಲಿ ತುಂಬಾ ಅನುಕೂಲ ಕಂಡುಬಂದಿದೆ. ಅಲ್ಲಿ ನೂರಾರು ಸಣ್ಣ ಸಣ್ಣ ಹೊಳೆಗಳಿರುತ್ತವೆ. ಅಲ್ಲಿ ಈ ಯೋಜನೆಯನ್ನು ಇನ್ನೂ ವಿಸ್ತರಿಸುವುದಕ್ಕೆ ಹೆಚ್ಚಿನ ಅವಕಾಶವಿದೆ. ನಮ್ಮ ಜಿಲ್ಲೆಯೊಂದರಲ್ಲೇ ಈ ಲಿಫ್ಟ್ ಇರಿಗೇಷನ್ನಿಗೆ ಸಂಬಂಧಪಟ್ಟಹಾಗೆ 55-60 ಯೋಜನೆಗಳನ್ನು ಸರ್ಕಾರದವರ ಮುಂದಿಟ್ಟಿದ್ದೇವೆ. ಸರ್ಕಾರದವರು ಆ ಬಗ್ಗೆ ಕೂಡಲೇ ಕಾರ್ಯಕ್ರಮ ಕೈಗೊಂಡರೆ ಬಹಳ ಅನುಕೂಲವಾಗುತ್ತದೆ. ಎಲ್ಲೆಲ್ಲಿ ಜನರು ಈ ಯೋಜನೆಯನ್ನು ಕೈಗೊಳ್ಳಲು ಮುಂದೆ ಬರುವುದಿಲ್ಲವೋ ಅಂಥಾ ಕಡೆಗಳಲ್ಲಿ ಸರ್ಕಾರದವರೇ ಆ ಕಾರ್ಯವನ್ನು ಆದಷ್ಟು ತ್ವರಿತವಾಗಿ ಕೈಗೊಂಡರೆ ದೇಶದಲ್ಲಿ ಹೆಚ್ಚು ಆಹಾರ ಬೆಳೆಯಲು ಅನುಕೂಲವಾಗುತ್ತದೆ ಎಂದು ಸೂಚನೆ ಮಾಡುತ್ತೇನೆ.

ಇನ್ನು ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ಇಲಾಖೆಗೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣವನ್ನು ಒದಗಿಸಿದ್ದರೋ ಅಷ್ಟನ್ನೂ ಖರ್ಚುಮಾಡುವುದಕ್ಕಾಗಲಿಲ್ಲ. ಇತ್ತೀಚೆಗೆ ರಾಜ್ಯಾದ್ಯಂತವೂ ಒಂದೇ ಸಮನಾಗಿ 'the remoral of untouchability' ಯನ್ನು ಜಾರಿಗೆ ತರುವುದರಲ್ಲಿ ರಾಜ್ಯ ಸರ್ಕಾರ ತಾತ್ಸಾರಭಾವನೆಯನ್ನು ತಾಳಿದೆ ಎಂದು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಇನ್ನು ಹರಿಜನರ ವಾಸದ ಹಾಗೂ ಹಾಸ್ಟಲುಗಳ ನಿರ್ಮಾಣದ ಕಾರ್ಯವನ್ನು ಹಿಂದಿನ ಸರ್ಕಾರ ಕೈಗೊಂಡು ಎಲ್ಲಿಯವರೆಗೆ ಆ ಕೆಲಸಗಳಾಗಿದ್ದವೋ ಅಲ್ಲಿಗೇ ಅವು ನಿಂತುಹೋಗಿವೆ. ಆದರೆ ಇತ್ತೀಚೆಗೆ ಜನರಲ್ ಹಾಸ್ಟಲುಗಳನ್ನು

(ಶ್ರೀ ಬಿ. ಎಚ್. ಲಕ್ಷ್ಮಣಯ್ಯ)

ಜಾಸ್ತಿ ಮಾಡಿದ್ದಾರೆ. ಬಹಳ ಸಂತೋಷ. ಆದರೆ ಆ ಹಾಸ್ಟಲುಗಳಲ್ಲಿರತಕ್ಕ ಪ್ರತಿಯೊಬ್ಬ ವಿದ್ಯಾರ್ಥಿಗೂ ಒಂದು ತಿಂಗಳಿಗೆ 18 ರೂಪಾಯಿಗಳ ಗ್ರ್ಯಾಂಟನ್ನು ಕೊಡುತ್ತಿದ್ದಾರೆ. ಸಮಾಜ ಕಲ್ಯಾಣ ಶಾಖೆಯವರು ಕೆಲವು ಕಡೆ 20 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಆದರೆ ಇಷ್ಟು ಅಲ್ಪ ಹಣದಲ್ಲಿ ಒಬ್ಬ ವಿದ್ಯಾರ್ಥಿಗೆ ಒಂದು ತಿಂಗಳು ಊಟ ಹಾಕಲು ಸಾಧ್ಯವೇ ಎಂಬುದನ್ನು ತಾವೆಲ್ಲರೂ ಯೋಚಿಸಬೇಕಾದ ವಿಚಾರ. ಪ್ರತಿಯೊಂದು ಸಾಮಾನುಗಳ ಧಾರಣೆಯೂ ದಿನದಿನಕ್ಕೂ ಏರುತ್ತಿರುವಾಗ ಈ ಹಣ ಏತಕ್ಕೂ ಸಾಲದಾಗಿದೆ. ಸರ್ಕಾರದವರು ಈ ವಿಚಾರವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಇನ್ನು ಹರಿಜನ ಗಿರಿಜನರ ವಾಸದ ಮನೆಗಳ ಬಗ್ಗೆ ಎಷ್ಟರಮಟ್ಟಿಗೆ ಸೌಲಭ್ಯವನ್ನು ಒದಗಿಸಲಾಗಿದೆ ಎಂಬುದನ್ನು ಸರ್ಕಾರದವರು ಉತ್ತರ ಕೊಡುವಾಗ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ಅನೇಕ ಹರಿಜನರ ಮನೆಗಳು ಅರ್ಧಮರ್ಧ ಕೆಲಸವಾಗಿ ಅವು ಹಾಗೆಯೇ ನಿಂತುಹೋಗಿವೆ. ಸರ್ಕಾರದವರು ಆಗಾಗ್ಗೆ ಅವುಗಳನ್ನು ಪೂರ್ತಿ ಮಾಡುತ್ತೇವೆಂದು ಭರವಸೆ ಕೊಡುತ್ತಿದ್ದಾಗ್ಯೂ ಕೆಲಸವಂತೂ ಆಗಿಲ್ಲ. ಸರ್ಕಾರದವರು ಆದಷ್ಟು ಬೇಗ ಈ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

5-30 P.M.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಮಾನ್ಯ ಸಭಾಪತಿಗಳೇ, ಈ ರಾಜ್ಯಪಾಲರ ಭಾಷಣದ ಚರ್ಚೆಯಲ್ಲಿ ಭಾಗವಹಿಸುತ್ತಾ ಅನೇಕ ಸದಸ್ಯರು ಇದರಲ್ಲಿ ಸರ್ಕಾರದ ನೀತಿ ಸ್ಪಷ್ಟವಾಗಿ ನಿರೂಪಣೆಯಾಗಿಲ್ಲ ಎಂದು ಈ ಸಭೆಯ ಮುಂದೆ ತಿಳಿಸಿದ್ದಾರೆ. ಆದರೆ ನಾವು ನಮ್ಮ ಕೇಂದ್ರ ಸರ್ಕಾರದಿಂದ ಹಿಡಿದು ನಮ್ಮ ರಾಜ್ಯಸರ್ಕಾರದವರೆಗೂ ಒಂದು ಸಮಾಜವಾದಿ ರಾಷ್ಟ್ರ ನಿರ್ಮಾಣದ ಗುರಿಯನ್ನು ಇಟ್ಟುಕೊಂಡು ಕೆಲಸಮಾಡುತ್ತಾ ಇದ್ದೇವೆ ಎನ್ನುವುದನ್ನು ನಾವ್ಯಾರೂ ಮರೆತು ಹೋಗಬಾರದು. ಈ ದಿವಸ ಸಮಾಜವಾದಿ ರಾಷ್ಟ್ರದ ಗುರಿ ನಮ್ಮ ಮುಂದಿದೆ. ಬೇರೆಯವರು ನಮ್ಮನ್ನು ಕಾರ್ಯತಃ ಬಲಪಂಥವಾದಿಗಳು ಎಂದು ಏನು ಹೇಳುತ್ತಾರೋ ಹಾಗೆ ನಾವು ಕೆಲಸದಲ್ಲಿ ಅವರಿಗಿಂತಲೂ ಹೆಚ್ಚಿನ ಬಲಪಂಥವಾದಿಗಳು ಎಂಬುದನ್ನು ತೋರಿಸಿಕೊಟ್ಟಿದ್ದೇವೆ. ಆದರೆ ಕೆಲವು ವಿಷಯಗಳನ್ನು ನೋಡಿದರೆ, ಇವರ ಎಲ್ಲಾ ಕೆಲಸಗಳೂ ನಿಜವಾಗಿ ಬಹಳ ಚೆನ್ನಾಗಿ ನಡೆಯುತ್ತಿದೆಯೇ ಎಂದು ನಾನು ಸ್ಪಷ್ಟವಾಗಿ ಕೇಳುತ್ತಿದ್ದೇನೆ. ಏಕೆಂದರೆ ಈಗ ವಿಧಾನ ಸೌಧದ ಮುಂದೆ ಕೆಲವು ಸತ್ಯಾಗ್ರಹಗಳು ನಡೆಯುತ್ತಾ ಇದೆ. ಪಶುವೈದ್ಯ ಕಾಲೇಜಿನ ವಿದ್ಯಾರ್ಥಿಗಳು ಸುಮಾರು ಎರಡೂವರೆ ತಿಂಗಳುಗಳಿಂದ ಕಾಲೇಜಿಗೆ ಹೋಗದೆ ಮುಷ್ಕರವನ್ನು ನಡೆಸುತ್ತಿದ್ದಾರೆ. ಸಂಬಂಧಪಟ್ಟ ರವಿನ್ಯೂ ಮಂತ್ರಿಗಳ ಬಳಿ ಅವರು ಹೋದರೆ ಅವರ ಬಗ್ಗೆ ಸಹಾನುಭೂತಿಯನ್ನು ತೋರಿಸಿ ಅವರ ಬೇಡಿಕೆಯನ್ನು ಪರಿಶೀಲಿಸುತ್ತೇವೆಂದು ಹೇಳಿದ್ದಾರೆ. ಮುಖ್ಯಮಂತ್ರಿಗಳ ಹತ್ತಿರ ಹೋದರೆ ಅವರ ಬೇಡಿಕೆ ವಿಚಾರವನ್ನು ಮಂತ್ರಿಮಂಡಲದಲ್ಲಿಟ್ಟು ಅಂತ್ಯ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಅವರ ಬೇಡಿಕೆ ಸಾಧುವಾದುದಾದರೂ ಇನ್ನೇನು ಅವರ ಪ್ರಶ್ನೆ ಇತ್ಯರ್ಥದ ಕೊನೆಮುಟ್ಟುತ್ತದೆ ಎಂದು ಬಾಯಲ್ಲಿ ಹೇಳುತ್ತಾರೆಯೇ ಹೊರತು ಕಾರ್ಯದಲ್ಲಿ ಇನ್ನೂ ಆ ಪ್ರಶ್ನೆ ತೀರ್ಮಾನವಾಗಿಲ್ಲ. ಪರಿಶೀಲನೆ ಮಾಡುವುದರಲ್ಲಿಯೇ ಸುಮಾರು ಎರಡೂವರೆ ತಿಂಗಳುಗಳಾಗಿವೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳು ಕಾಲೇಜಿಗೆ ಹೋಗಿಲ್ಲವೆಂದು ಹೇಳಿದರೆ, ಈ ಸಾಲಿನಲ್ಲಿ ಇಡೀ ಆ ಕಾಲೇಜಿನ ವಿದ್ಯಾರ್ಥಿಗಳು ಒಂದು ವರ್ಷದ ಅವಧಿಯ ಪಾಠಪ್ರವಚನಗಳನ್ನು ಹೇಗೆ ಕಲಿತುಕೊಳ್ಳುತ್ತಾರೆ? ಪರೀಕ್ಷೆಗಳಿಗೆ ಕೂಡುವುದಕ್ಕೆ ಖಂಡಿತವಾಗಿ ಅವಕಾಶವಾಗುವುದಿಲ್ಲವೆಂಬುದನ್ನು ಮರೆಯಬಾರದು. ಈ ವಿಚಾರದಲ್ಲಿ ಸರ್ಕಾರದವರು ಬಹಳ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಆ ಕಾಲೇಜಿನ ವಿದ್ಯಾರ್ಥಿಗಳು ಹಣವನ್ನು ಏನಾದರೂ ಕೇಳಿದರೇ? ಅದೇನೂ ಇಲ್ಲ. ಬೇರೆರಾಜ್ಯಗಳಲ್ಲಿರುವ ಹಾಗೆ ಇಲ್ಲಿ ವೆಟರಿನರಿ ಇನ್‌ಸ್ಪೆಕ್ಟರ್ ಎಂದು ಇರುವುದನ್ನು ವೆಟರಿನರಿ ಆಫೀಸರ್ಸ್ ಎಂಬುದಾಗಿ ಬದಲಾಯಿಸಬೇಕೆಂದು ಕೇಳಿದ್ದಾರೆ. ಮೆಡಿಕಲ್ ಇಲಾಖೆಯಲ್ಲಿ ಮೆಡಿಕಲ್ ಆಫೀಸರ್ಸ್ ಎಂದು ಕರೆಯುವ ಹಾಗೆ ವೆಟರಿನರಿ ಆಫೀಸರ್ಸ್ ಎಂದು ಕರೆಯುವುದಕ್ಕೆ ಅದರ ಬಗ್ಗೆ ಒಂದು ಸರ್ಕಾರೀ ಆಜ್ಞೆಯನ್ನು ಹೊರಡಿಸುವುದಕ್ಕೆ ಇವರಿಗೇನು ಕಷ್ಟವೋ ಗೊತ್ತಾಗಲಿಲ್ಲ. ಹಾಗೆಯೇ ಅವರ ಸಂಬಳ ಸಾರಿಗೆಗಳನ್ನೂ ಸಹ ಇತರ ಇಲಾಖೆಗಳವರ ಸಂಬಳ ಸಾರಿಗೆಗಳನ್ನು ಏರಿಸಿದ ಹಾಗೆ ಕೂಡಲೇ ಇವರ ಸಂಬಳ ಸಾರಿಗೆಗಳನ್ನು ಏರಿಸಬೇಕು. ಇವರಿಗೆ ಕೇವಲ ಕಡಿಮೆ ಸಂಬಳ ಸಾರಿಗೆಯನ್ನು ಕೊಡುವುದು ನ್ಯಾಯವಲ್ಲ. ಅದನ್ನು ಖಂಡಿತವಾಗಿ ಜಾಸ್ತಿ ಮಾಡಬೇಕು. ಅದರ ವಿಚಾರದಲ್ಲಿ ಸರ್ಕಾರದವರು ಖಚಿತವಾಗಿ ಏನಾದರೂ ಒಂದು ತೀರ್ಮಾನ

ವನ್ನು ಮಾಡದೆ ಸುಮ್ಮನೆ ಕಾಲಹರಣಮಾಡಿ ಆ ವಿದ್ಯಾರ್ಥಿಗಳ ಬಗ್ಗೆ ಇವರು ಅಕ್ಷಮ್ಯ ಅಪರಾಧ ಮಾಡಿದ್ದಾರೆ. ಆದ್ದರಿಂದ ಕೂಡಲೇ ಅವರ ಬೇಡಿಕೆಗಳನ್ನು ಈಡೇರಿಸಿ ಆ ಕಾಲೇಜಿನ ವಿದ್ಯಾರ್ಥಿಗಳೆಲ್ಲರೂ ಕೂಡಲೇ ಕಾಲೇಜಿಗೆ ವಾಪಸ್ಸು ಹೋಗುವ ಹಾಗೆ ಮಾಡಬೇಕೆಂದು ನಾನು ಈ ದಿವಸ ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ.

ಇನ್ನು ಈ ದಿವಸ ನನ್ನ ಸ್ನೇಹಿತರುಗಳು ತಿಳಿಸಿದ ಹಾಗೆ ಆಹಾರೋತ್ಪತ್ತಿ ಹೆಚ್ಚಾಗಬೇಕು. ಅದರಲ್ಲಿ ಯಾವ ನಮ್ಮ ನೆರೆಹೊರೆಯ ಪ್ರಾಂತಗಳಲ್ಲಿ ಈಗಾಗಲೇ ಎರಡನೇ ಬೆಳೆಯನ್ನು ಬೆಳೆಯುತ್ತಿದ್ದಾರೆ. ಆದರೆ ಇಲ್ಲಿ ನಮಗೆ ಕಾಣುವುದು ಕೇವಲ ತಾಲ್ಲೂಕು ಮತ್ತು ಜಿಲ್ಲಾಮಟ್ಟಗಳಲ್ಲಿ ಸಮ್ಮೇಳನಗಳು ನಡೆಯುತ್ತಾ ಇವೆ; ಕಾರ್ಯತಃ ನಮ್ಮ ದೇಶದಲ್ಲಿ ಆಹಾರವನ್ನು ಹೆಚ್ಚು ಬೆಳೆಯಲಿಕ್ಕೆ ಏನೂ ಮಾಡುತ್ತಾ ಇಲ್ಲ.

ಇನ್ನು ಕೋಲಾರ ಜಿಲ್ಲೆಯ ವಿಷಯ ಹೇಳಬೇಕಾದರೆ ಅಲ್ಲಿ ಬಾವಿಗಳ ಕೆಲಸ ಸುಮಾರು ಹತ್ತು ವರ್ಷಗಳಿಂದಲೂ ನಡೆದು ಈಗ ಕೇವಲ ಸಾವಿರಾರು ಬಾವಿಗಳಾಗಿವೆ. ಆದರೂ ಆ ಬಾವಿಗಳಲ್ಲಿ ನೀರೇ ಇಲ್ಲ. ಮಳೆ ಇಲ್ಲದೇ ಇರುವಾಗ ಅವಕ್ಕೆ ಬೋರ್‌ವೆಲ್ಸ್ ಹಾಕಿಸಿ ಎಂದು ಹೇಳಿದರೆ ಅವನ್ನು ಹಾಕಿಸುವುದಕ್ಕೇ ಇವರಿಗೆ ಸಾಧ್ಯವಿಲ್ಲ. ಆದ್ದರಿಂದ ಭಾಷಣ, ಸಮ್ಮೇಳನಗಳನ್ನು ಇವರು ಏರ್ಪಾಡು ಮಾಡುವುದಕ್ಕಿಂತ ಒಂದೊಂದು ತಾಲ್ಲೂಕಿಗೆ ಒಂದೆರಡು ಬೋರ್‌ವೆಲ್‌ಗಳನ್ನು ಮಾಡಿಸಿದರೆ ಕನಿಷ್ಠಪಕ್ಷ ಒಂದೆರಡು ಎಕರೆಗಳಷ್ಟು ಜಮೀನಿಗೆ ಸಾಗುವಳಿ ಮಾಡಲು ತಕ್ಕ ನೀರು ದೊರಕುತ್ತದೆ. ಈ ಕೆಲಸ ಮಾಡುವುದನ್ನು ಬಿಟ್ಟು ಸುಮ್ಮನೆ ಹೆಚ್ಚಿಗೆ ಭಾಷಣಗಳನ್ನು ಮಾಡಿ, ಸಮ್ಮೇಳನಗಳನ್ನು ಮಾಡಿ ಹೂವಿನ ಹಾರಗಳನ್ನು ಹಾಕಿಸಿಕೊಳ್ಳುವುದು, ಇಂತಹ ಸಭೆಗಳನ್ನು ಕರೆದು ವ್ಯಥಾ ಕಾಲಹರಣ ಮಾಡುವುದರಲ್ಲಿ ಏನೂ ಅರ್ಥವಿಲ್ಲ. ಈ ದಿವಸ ಬಹು ಮುಖ್ಯವಾಗಿ ಆಹಾರೋತ್ಪತ್ತಿಯನ್ನು ಜಾಸ್ತಿ ಮಾಡಲು ಬರೀ ಭಾಷಣಗಳನ್ನು ಮಾಡುವುದನ್ನು ಬಿಟ್ಟು ರೈತರಿಗೆ ಬೇಕಾದಂತಹ ನೆರವನ್ನು ಎಲ್ಲ ವಿಧಗಳಲ್ಲಿಯೂ ಸರ್ಕಾರದವರು ಕೊಡಬೇಕು. ಯುದ್ಧಕಾಲದಲ್ಲಿ ಯಾವರೀತಿ ಎಮರ್ಜೆನ್ಸಿ ಎಂದು ಎಷ್ಟರ ಮಟ್ಟಿಗೆ ಸರ್ಕಾರೀ ಕಾರ್ಯಗಳು ನಡೆದುವೋ ಆ ರೀತಿ ಈಗ ನಡೆಯಬೇಕು. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಪ್ಪಣೆ ಕೊಡಿಸಿದ್ದೂ ಉಂಟು.

ಇನ್ನು ಕೋಲಾರ ತಾಲ್ಲೂಕಿನ ವಿಷಯವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಅಲ್ಲಿ ಅನೇಕ ಜನರು ಪಂಪುಸೆಟ್ಟುಗಳಿಗಾಗಿ ದುಡ್ಡು ಸರ್ಕಾರಕ್ಕೆ ಕೊಟ್ಟಿದ್ದರೂ ಸಾಲದರೂಪವಾಗಿ ಸರ್ಕಾರ ಹಣ ಸಹಾಯಮಾಡಿ ಅವನ್ನು ಒದಗಿಸಬೇಕೆಂದು ಕೇಳಿ ಒಂದುವರ್ಷವಾಗಿದ್ದರೂ, ಅವರಿಗೆ ಈಗ ಕರೆಂಟ್ ಬೇಕು ಎಂದು ಕೇಳಿದರೆ ಕಂಬ ಇಲ್ಲ; ಕಂಬ ಇಲ್ಲವೆಂದು ಹೇಳುತ್ತಿದ್ದಾರೆ. ಚೇರ್‌ಮನ್ ಅವರಿಂದ ಹಿಡಿದು ಅಸಿಸ್ಟೆಂಟ್ ಇಂಜನಿಯರ್‌ವರೆಗೆ ನಾನೇ ಕೆಲವು ಸಂದರ್ಭಗಳಲ್ಲಿ 10 ಸಾರಿ ಹೋಗಿ ಬಂದಿದ್ದೇನೆ. ಅನೇಕ ಕೆಲಸಗಳು ಅಲ್ಲಿ ಬಹಳವಾಗಿ ನಿಧಾನವಾಗುತ್ತವೆ. ಕಂಬ ಇಲ್ಲ, ಕಂಬ ಇಲ್ಲವೆಂದು ಹೇಳಿಕೊಂಡೇ ಸುಮಾರು ಒಂದೂವರೆ ವರ್ಷಗಳೇ ಕಳೆದುಹೋಗಿವೆ. ಆದ್ದರಿಂದ ನಾನು ಸರ್ಕಾರದವರಿಗೆ ಹೇಳುವುದಿಷ್ಟೆ. ಯಾವ ಕೆಲಸವನ್ನು ಮಾಡಬೇಕೋ ಆ ಕೆಲಸವನ್ನು ಮಾಡದೆ ಇವರು ಬರೀ ಭಾಷಣಗಳನ್ನು ಮಾಡುವುದನ್ನು ಬಿಟ್ಟು ಕಾರ್ಯತಃ ನಿಜವಾಗಿ ಏನೇನು ಮಾಡಬೇಕೋ ಅದನ್ನು ಸರ್ಕಾರ ಕೂಡಲೇ ಮಾಡಬೇಕು. ಮುಖ್ಯವಾಗಿ ಪಂಪು ಸೆಟ್ಟುಗಳಿಗೆ ಸರ್ಕಾರದವರು ಬೇಕಾದಷ್ಟು ಹಣವನ್ನು ಕೊಟ್ಟು ಪಂಪು ಸೆಟ್ಟುಗಳಿಗಾಗಿ ರೈತರು ಕೊಟ್ಟಿರತಕ್ಕ ಅರ್ಜಿಗಳನ್ನು ಒಂದು-ಒಂದೂವರೆ ವರ್ಷಗಳ ಕಾಲ ಮೂಲೆಗೆ ಇಡುವ ಪರಿಸ್ಥಿತಿಯನ್ನು ಕೊನೆಗಾಣಿಸಬೇಕು ಎಂಬುದಾಗಿ ನಾನು ಸರ್ಕಾರಕ್ಕೆ ಒತ್ತಾಯಪಡಿಸುತ್ತೇನೆ. ಈಗಿನ ಅಭಾವ ಪರಿಸ್ಥಿತಿಯನ್ನು ಬಗೆಹರಿಸುವುದಕ್ಕಾಗಿ ಮತ್ತು ಜನಗಳಿಗೆ ಆಹಾರ ಹಾಗೂ ದನಗಳಿಗೆ ಹುಲ್ಲು ಪ್ರತಿಯೊಂದು ಗ್ರಾಮದಲ್ಲೂ ಒದಗಿಸುವುದಕ್ಕಾಗಿ ಒಬ್ಬೊಬ್ಬ ಮಂತ್ರಿಗಳನ್ನೂ ಒಂದೊಂದು ಜಿಲ್ಲೆಗೆ ಇನ್-ಚಾರ್ಜಾಗಿ ಇರುವ ಹಾಗೆ ಏರ್ಪಾಡು ಮಾಡಬೇಕೆಂದು ಆಜ್ಞೆ ಹೊರಡಿಸುತ್ತೇವೆಂಬುದಾಗಿ ಇವರು ಹೇಳಿದ ಅಂಶ ವರ್ತಮಾನ ಪತ್ರಿಕೆಗಳಲ್ಲಿಯೂ ಬಂತು. ಆ ಮೇಲೆ ಮಂತ್ರಿಗಳು ಈ ರೀತಿ ಸುಳ್ಳು ವರದಿಯನ್ನು ಕೊಟ್ಟಿದ್ದರೋ ಏನೋ ಎಂಬ ಸಂದೇಹ ಬರುವಂತಾಯಿತು. ಸ್ಕೂಲುಗಳಲ್ಲಿ ಅಸಿಸ್ಟೆಂಟ್ ಮಾಸ್ಟರುಗಳ ಮೇಲೆ ಹೆಡ್‌ಮಾಸ್ಟರ್ ಮೇಲ್ವಿಚಾರಣೆ ಮಾಡುವ ಹಾಗೆ ಮುಖ್ಯ ಮಂತ್ರಿಗಳು ತಮ್ಮ ಇತರ ಮಂತ್ರಿಗಳ ಮೇಲೆ ಮೇಲ್ವಿಚಾರಣೆ ಮಾಡುವುದಾಗಿದೆ. ಇದರಿಂದೇನೂ ಪ್ರಯೋಜನವಾಗಲಿಲ್ಲವೆಂದು ನನಗೆ ಕಾಣುತ್ತಿದೆ. ಸುಮ್ಮನೆ ಜಿಲ್ಲೆಗಳಲ್ಲಿ ಓಡಾಡಿ ವರದಿಗಳನ್ನು ಕೊಡುವುದಕ್ಕೆ ಬದಲಾಗಿ ಕಾರ್ಯತಃ ಎಲ್ಲಾ ಯೋಜನೆಗಳನ್ನು ಕೈಗೊಳ್ಳಬೇಕು. ಅದರೆ ಮಂತ್ರಿಗಳ ಮೇಲೆ ಮೇಲ್ವಿಚಾರಣೆಯನ್ನು ನೋಡತಕ್ಕ ಮಾನ್ಯ ಮುಖ್ಯ ಮಂತ್ರಿಗಳು ಇದುವರೆಗೆ ಕೋಲಾರ ಜಿಲ್ಲೆಗೆ ಬರುವುದಕೆ

(ಶ್ರೀ ಎ. ವೆಂಕಟಗಿರಿಯಪ್ಪ)

ಕಾಲಾವಕಾಶವಾಗಲಿಲ್ಲವೆಂದರೆ ಹೇಗೆ? ಒಂದು ದಿವಸ ಮಾತ್ರ ರೆವಿನ್ಯೂ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಿದ್ದರು. ಅಲ್ಲಿನವರ ಅಹವಾಲನ್ನು ಕೇಳಿ ಹೋಗುವುದು, ಪುನಃ ಬರುತ್ತೇನೆಂದು ಹೇಳುವುದು ಇಷ್ಟೇ ಹೊರತು, ಕೊಟ್ಟ ಭರವಸೆಯನ್ನು ಇದುವರೆಗೂ ಈಡೇರಿಸಿಲ್ಲ. ಎಷ್ಟೋ ವರ್ಷಗಳಿಂದ ಇವರು ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸುತ್ತಾ ಇಲ್ಲವೆಂಬುದನ್ನು ನಾನು ನೋಡುತ್ತಿದ್ದೇನೆ. ಜಿಲ್ಲಾ ಮಟ್ಟದಲ್ಲಿ ಒಂದು ಸಮ್ಮೇಳನದಲ್ಲಿ ಭಾಷಣ ಮಾಡಲು ಮಂತ್ರಿಗಳು ಬಂದಿದ್ದರು. ಇವರ ಬೇಜವಾಬ್ದಾರಿ ವರ್ತನೆಯನ್ನು ಮೊದಲಿನಿಂದಲೂ ನಾನು ನೋಡುತ್ತಾ ಇದ್ದುದರಿಂದ ನಾನು ಆ ಸಮ್ಮೇಳನಕ್ಕೆ ಹೋಗಲಿಲ್ಲ. ನಾವು ಇಲ್ಲಿ ಏನು ಹೇಳಿದರೂ, ಅವರು ನಮ್ಮ ಜಿಲ್ಲೆಗೆ ಬಂದು ಏನೇನು ಭರವಸೆಯನ್ನು ಕೊಟ್ಟರೂ ಯಾವುದನ್ನೂ ಕಾರ್ಯಗತ ಮಾಡುವುದಿಲ್ಲವೆಂದು ನಾನು ಆ ಸಭೆಗೇ ಹೋಗಲಿಲ್ಲ. ಆದ್ದರಿಂದ ಸರ್ಕಾರದವರು ಈ ದಿವಸ ಮುಖ್ಯವಾಗಿ ಬರೀ ಮಾತಿನಲ್ಲಿ ಹೇಳುವುದನ್ನು ಬಿಟ್ಟು ಆಹಾರ ಸಮಸ್ಯೆಯ ಬಗ್ಗೆ ಹೆಚ್ಚು ತೀವ್ರವಾಗಿ ಒಳ್ಳೆಯ ಯೋಜನಾ ಕಾರ್ಯಗಳನ್ನು ಕೈಗೊಳ್ಳಬೇಕು. ಶ್ರೀಮಾನ್ ಆರ್. ಎಸ್. ಹೆಗ್ಗಡೆಯವರು ಮಾತನಾಡುತ್ತಾ ಜನರಿಗೆ ಅಷ್ಟೇನು ಕಷ್ಟವಿಲ್ಲ; ಅಭಾವ ಪರಿಸ್ಥಿತಿಗೆ ಸರ್ಕಾರ ಹೆಚ್ಚಿನ ವ್ಯವಸ್ಥೆ ಮಾಡುತ್ತಿದೆ ಎಂದು ಹೇಳಿದರು. ಅಲ್ಲದೆ ವಿರೋಧ ಪಕ್ಷದವರು ತಮ್ಮ ಒಂದು ರಾಜಕೀಯ ದೃಷ್ಟಿಕೋಣದಿಂದ ಈ ವಿಚಾರವನ್ನು ದೊಡ್ಡದು ಮಾಡಿ ಹೇಳುತ್ತಿದ್ದಾರೆಂದೂ ಹೇಳಿದರು. ಅದು ಖಂಡಿತವಾಗಿ ಸಾಧುವಾದುದಲ್ಲ. ಕಷ್ಟ ಎಲ್ಲಾ ಕಡೆಯಲ್ಲಿದೆ ಎಂಬುದು ಅವರಿಗೆ ಗೊತ್ತಿಲ್ಲದೇ ಇಲ್ಲ. ಅನೇಕ ಜನ ಕಾಂಗ್ರೆಸ್ಸಿಗರಿಗೂ ಗೊತ್ತಿದೆ.

ಇನ್ನು ಕೆಲವರಿಗೆ ಅದು ಗೊತ್ತಿಲ್ಲದೆ ಇರಬಹುದು. ಕಾಂಗ್ರೆಸ್ಸಿನವರಿಗೆ ಗೊತ್ತಿದೆ. ವ್ಯವಸಾಯಗಾರರ ಕೂಲಿಗಾರರ ಪರಿಸ್ಥಿತಿಯನ್ನು ತೆಗೆದುಕೊಂಡರೆ ನಿಜವಾಗಿಯೂ ಕೂಡ ಅವರು ತುಂಬಾ ಕಷ್ಟಪಡುತ್ತಿದ್ದಾರೆ. ಬೆಂಗಳೂರು ಮತ್ತು ಕೆ.ಜಿ.ಎಫ್.ಗಳಲ್ಲಿ ಜನಗಳು ಗಲಾಟೆ ಮಾಡುತ್ತಾರೆ. ಗತ್ಯಂತರವಿಲ್ಲದೆ ಆಹಾರ ಮಂತ್ರಿಗಳು ಹೆದರಿ ಅವರಿಗೆ ಆಹಾರವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದರೆ ಇಂಥಾ ಅಭಾವ ಪರಿಸ್ಥಿತಿಯಲ್ಲಿ ವ್ಯವಸಾಯ ಕೂಲಿಗಾರರು ಹಳ್ಳಿಗಾಡಿನಲ್ಲಿ ಜೀವನ ಮಾಡುವುದು ಹೇಗೆ? ಅವರು ಮಾರ್ಕೆಟ್ಟಿನಲ್ಲಿ ಆಹಾರ ಧಾನ್ಯವನ್ನು ಕೊಂಡುಕೊಳ್ಳ ಬೇಕಾದರೆ ಒಂದು ಕೆ.ಜಿ. ಅಕ್ಕಿಗೆ 1-30 ಪೈಸೆ ಕೊಡಬೇಕಾಗುತ್ತದೆ. ಒಂದು ಕೆ.ಜಿ. ರಾಗಿಯನ್ನು ಕೊಂಡುಕೊಳ್ಳಬೇಕಾದರೆ ಒಂದು ರೂಪಾಯಿಗೆ ಕಡಿಮೆ ಸಿಕ್ಕುವುದಿಲ್ಲ. ಇಂಥಾ ಪರಿಸ್ಥಿತಿಯಲ್ಲಿ ಅವರು ಜೀವನ ಮಾಡಿ ಬದುಕುವುದಕ್ಕೆ ಸಾಧ್ಯವಿಲ್ಲ. ಹಳ್ಳಿಗಾಡಿನಲ್ಲಿ ಇರತಕ್ಕ ಜನರಿಗೆ ಉದ್ಯೋಗವನ್ನು ದೊರಕಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಸರ್ಕಾರದವರು ಹೇಳುತ್ತಾರೆ. ಆದರೆ ಅದನ್ನು ಆಚರಣೆಗೆ ತರುತ್ತಿಲ್ಲ. ಮೈನರ್ ಇರಿಗೇಷನ್ ಬಗ್ಗೆ ಏನೇನೂ ಮಾಡಿಲ್ಲ. ಬಾವಿಗಳನ್ನು ತೆಗೆಯುವುದಕ್ಕೆ ರೈತರಿಗೆ ಹಣವನ್ನು ಕೊಟ್ಟರೆ ವ್ಯವಸಾಯಕ್ಕೂ ಅನುಕೂಲವಾಗುತ್ತದೆ ಮತ್ತು ಜನಗಳಿಗೆ ಉದ್ಯೋಗವೂ ಸಿಕ್ಕಿದಹಾಗಾಗುತ್ತದೆಂದು ಹೇಳುತ್ತಾರೆ. ನಮ್ಮ ತಾಲ್ಲೂಕಿನಲ್ಲಿ ನಾನು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಅಧ್ಯಕ್ಷನಾಗಿದ್ದೇನೆ. ಒಂದು ಸಂದರ್ಭದಲ್ಲಿ ಅಲ್ಲಿಗೆ ಮಾನ್ಯ ಮುಖ್ಯ ಮಂತ್ರಿಗಳು, ಸಹಕಾರ ಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಎಲ್ಲರೂ ಬಂದಿದ್ದರು. ಆಗ ಅವರು ಬಾವಿಗಳಿಗೆ ಹೆಚ್ಚು ಹಣವನ್ನು ಕೊಡೋಣ ಎಂದು ಹೇಳಿದ್ದರು. ಆದರೆ ಕಾರ್ಯತಃ ಬಾವಿಗಳನ್ನು ತೆಗೆಸುವುದಕ್ಕೆ ರೈತರಿಗೆ ಹೆಚ್ಚು ಹಣವನ್ನು ಕೊಡುತ್ತಿಲ್ಲ. ಆದ್ದರಿಂದ ಬಾವಿಗಳಿಗೋಸ್ಕರ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ. ಬಾವಿಗಳಿಗೆ 3 ಪರ್ಸೆಂಟ್ ಸಬ್ಸಿಡಿ ಕೊಟ್ಟರೆ ಜಾಸ್ತಿ ಹಣವನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ 6 ಪರ್ಸೆಂಟ್ ಬಡ್ಡಿ ಮಾಡಿ ಬಾವಿಗಳಿಗೆ ಹೆಚ್ಚು ಹಣವನ್ನು ಸಾಲ ಕೊಟ್ಟರೆ ಅದರಿಂದ ಜನಗಳಿಗೆ ಅನುಕೂಲವಾಗುತ್ತದೆ, ಒಂದು ಶಾಶ್ವತವಾದ ಇಂಪ್ರೂವ್‌ಮೆಂಟ್ ಆಗುತ್ತದೆ. ಮತ್ತು ಅದರಿಂದ ಜನಗಳಿಗೆ ಉದ್ಯೋಗ ಸಿಕ್ಕುತ್ತದೆ. ಈ ವರ್ಷ ವಿಶೇಷವಾಗಿ ಜನಗಳಿಗೆ ಉದ್ಯೋಗ ಸಿಕ್ಕುವುದಕ್ಕೆ ಏನು ಕೆಲಸ ಮಾಡಬೇಕೋ ಅದನ್ನೆಲ್ಲಾ ಮಾಡಬೇಕೆಂದು ಸರ್ಕಾರದವರನ್ನು ಎಷ್ಟು ರೀತಿಯಲ್ಲಿ ಪ್ರಾರ್ಥನೆ ಮಾಡಿಕೊಂಡರೂ ಕೂಡ ಅದನ್ನು ಮಾಡಿಕೊಟ್ಟಿಲ್ಲ. ಅದನ್ನ ಮಾಡಿಕೊಡುವುದಕ್ಕೆ ಯಾವ ಪ್ರಯತ್ನವನ್ನೂ ಸಹ ಮಾಡಿಲ್ಲ.

ಇನ್ನು ಹೊಸವಾಗಿ ಈಗ ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜ್ ಮಸೂದೆಯನ್ನು ಬೇರೆ ಈ ಸಭೆಯಲ್ಲಿ ತಂದು ಸಣ್ಣ ಪುಟ್ಟ ರೈತರಿಗೆ ತೆರಿಗೆಯ ಭಾರವನ್ನು ಹೊರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ರೀತಿ ಮಾಡುವುದಾದರೆ ಸಮತವಾದ ಸಮಾಜದ ಗುರಿಯನ್ನು ಮುಟ್ಟುವುದಕ್ಕೆ ಯಾವ ರೀತಿ ಕೆಲಸವನ್ನು ಮಾಡುತ್ತಾರೆ ಎಂದು ವಿಷಾದದಿಂದ ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ಮಾನ್ಯ ಸಭಾಪತಿಯವರೇ, ಈ ಸಾಲಿನಲ್ಲಿ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಧೋರಣೆಯಲ್ಲಿ ಬದಲಾವಣೆಗಳನ್ನು ನಾವು ನಿರೀಕ್ಷೆ ಮಾಡುತ್ತಿದ್ದೆವು. ಏತಕ್ಕೆಂದರೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 18 ವರ್ಷಗಳಾದರೂ ಕೂಡ ಜನಗಳಿಗೆ ಅತಿ ಮುಖ್ಯವಾಗಿ ಬೇಕಾಗಿರತಕ್ಕಂಥ ಆಹಾರ, ಬಟ್ಟೆ ಮತ್ತು ವಿದ್ಯೆ ಈ ಮೂರು ಅಗತ್ಯವಾದ ವಸ್ತುಗಳನ್ನು ಜನಗಳಿಗೆ ಒದಗಿಸಿಕೊಡುವುದರಲ್ಲಿ ಸರ್ಕಾರದವರು ವಿಫಲರಾಗಿದ್ದಾರೆ. ಯಾವ ಒಂದು ಕಾರ್ಯವನ್ನು ಅವರು ಮಾಡಿಲ್ಲ. ಈ ವರ್ಷ ದೇಶಾದ್ಯಂತ ಮಳೆ ಬೆಳೆ ಹೋಗಿರುವುದರಿಂದ ಸರ್ಕಾರದವರು ಯಾವ ಒಂದು ಮಟ್ಟದಲ್ಲಿ ಜನಗಳಿಗೆ ಅನುಕೂಲಮಾಡಿಕೊಡಬೇಕೆಂದು ನಿರೀಕ್ಷಣೆ ಮಾಡಿದ್ದರೋ ಅದರಲ್ಲಿ ಸರ್ಕಾರದವರು ವಿಫಲರಾಗಿದ್ದಾರೆ. ರೈತ ಇವತ್ತು ಕುಸಿದು ಬೀಳುವಂತಹ ಪರಿಸ್ಥಿತಿ ಬಂದಿದೆ. ಈಗ 15 ವರ್ಷಗಳಿಂದ ಯೋಜನೆಗಳಿಗೋಸ್ಕರ ಸರ್ಕಾರದವರು ಖರ್ಚುಮಾಡುವ ಹಣ ಯಾವ ಫಲವನ್ನು ಕೊಟ್ಟಿದೆ ಎಂದು ನಾನು ಪ್ರಶ್ನೆ ಮಾಡುತ್ತೇನೆ ? ನಮ್ಮ ದೇಶದಲ್ಲಿ 100ಕ್ಕೆ 80 ಜನ ವ್ಯವಸಾಯಗಾರರಿದ್ದಾರೆ. ಈಗ ಕ್ಷಾಮ ಬಂದಿರುವ ಪ್ರದೇಶದಲ್ಲಿ ಬಾವಿಗಳಿಗೆ ಯಥೇಚ್ಛವಾಗಿ ಹಣವನ್ನು ಕೊಡುತ್ತೇವೆ. ಐ. ಪಿ. ಸೆಟ್ಟುಗಳಿಗೆ ಹಣವನ್ನು ಕೊಡುತ್ತೇವೆ, ಮೈನರ್ ಇರಿಗೇಷನ್ನಿನಲ್ಲಿ ಕೆರೆಗಳ ಕೆಲಸವನ್ನು ಕೂಡಲೇ ತೆಗೆದುಕೊಂಡು ಜನಗಳಿಗೆ ಕೆಲಸವನ್ನು ಕೊಡುತ್ತೇವೆಂದು ಹೇಳುತ್ತಾರೆ. ಮಂತ್ರಿಗಳು ಜಾಗಕ್ಕೆ ಬಂದು ವರ್ಕ್ ಆರ್ಡರ್ ಮಾಡುತ್ತಾರೆ ಎಂದು ಭಾಷಣ ಮಾಡುತ್ತಾರೆ. ಆದರೆ ವಾಸ್ತವವಾಗಿ ಅವನ್ನು ಆಚರಣೆ ಮಾಡುತ್ತಿಲ್ಲ. ಈಗ್ಗೆ ಮೂರು ತಿಂಗಳ ಹಿಂದೆ ನಮ್ಮ ತಾಲ್ಲೂಕಿನಲ್ಲಿ ಲ್ಯಾಂಡ್ ಡೆವಲಪ್‌ಮೆಂಟ್ ಸೊಸೈಟಿಯ ಒಂದು ಮೀಟಿಂಗ್ ಆಯಿತು. ಆಗ ಸರ್ಕಾರದವರು ಮೂರು ಪರ್ಸೆಂಟ್ ಬಡ್ಡಿಯಂತೆ ರೈತರಿಗೆ ಬಾವಿ ತೆಗೆಯಲು ಹಣವನ್ನು ಸಾಲಕೊಡುತ್ತಾರೆಂದು ಸಾವಿರಾರು ಜನಗಳು ಸಾಲಕ್ಕಾಗಿ ಅರ್ಜಿಗಳನ್ನು ಹಾಕಿದ್ದರು. ಆದರೆ ಕೇವಲ 50-60 ಬಾವಿಗಳಿಗೆ ಮಾತ್ರ ಸರ್ಕಾರದವರು ಸಾಲವನ್ನು ಮಂಜೂರು ಮಾಡಿದ್ದಾರೆ. ಒಬ್ಬ ರೈತ ಒಂದು ಬಾವಿಯನ್ನು ತೆಗೆಸಲು ಸರ್ಕಾರದಲ್ಲಿ ಸಾಲವನ್ನು ತೆಗೆದುಕೊಳ್ಳಬೇಕಾದರೆ ಕೊನೆಯ ಪಕ್ಷ 100 ರಿಂದ 200 ರೂಪಾಯಿಗಳವರೆಗೆ ಹಣವನ್ನು ಖರ್ಚುಮಾಡಬೇಕಾಗುತ್ತದೆ. ಯಾರು ಅಧಿಕಾರಿಗಳ ಹತ್ತಿರ ಹೋಗಿ ಲಂಚ ಕೊಟ್ಟು ದುಡ್ಡಿನ ಮೂಲಕ ಅವರನ್ನು ಒಲಿಸಿಕೊಳ್ಳುತ್ತಾರೆಯೋ ಅವರಿಗೆ ಮಾತ್ರ ಬಾವಿ ತೆಗೆಯುವುದಕ್ಕೆ ಸಾಲದ ಹಣ ಸಿಕ್ಕುತ್ತದೆ. ಎರಡು ಎಕರೆ ಡಣ್ಣೆ ಜಮೀನು ಇರುವವರಿಗೆ ಬಾವಿ ತೆಗೆಯಲು ಸಾಲದ ಹಣ ಮಂಜೂರು ಆಗಿದೆ. ಆದರೆ 6-7 ಎಕರೆ ಒಳ್ಳೆಯ ಜಮೀನು ಇದ್ದರೂ ಅಂಥವರಿಗೆ ಬಾವಿ ತೆಗೆಯಲು ಹಣ ಮಂಜೂರು ಆಗಿಲ್ಲ. ಅದಕ್ಕೋಸ್ಕರವಾಗಿ ನಾನು ಒಂದು ಸಲಹೆಯನ್ನು ಮಾಡುತ್ತೇನೆ. ಅದೇನೆಂದರೆ, ಒಂದು ವೆಲ್‌ಸ್ಕೀಮ್ ಬೋರ್ಡ್ ಎಂದು ಮಾಡಿ ಎಲ್ಲೆಲ್ಲಿ ಯಥೇಚ್ಛವಾಗಿ ನೀರು ಸಿಕ್ಕುತ್ತದೆ ಎಂದು ತಜ್ಞರನ್ನು ಕರೆದುಕೊಂಡು ಹೋಗಿ ಅವರಿಂದ ಪರೀಕ್ಷೆ ಮಾಡಿಸಿ ಯಾವ ಕಡೆ ಬಾವಿಯನ್ನು ತೆಗೆದರೆ ಯಥೇಚ್ಛವಾಗಿ ನೀರು ಬರುತ್ತದೆ ಮತ್ತು ಹೆಚ್ಚು ಜಮೀನು ಉಳುಮೆ ಮಾಡುವುದಕ್ಕೆ ವ್ಯವಸಾಯ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಡುತ್ತಾರೆಯೋ ಅಂಥಾ ಕಡೆ ಬಾವಿಯನ್ನು ತೆಗೆಸಲು ರೈತನಿಗೆ ಒಂದು ಕಂತಿಗೆ ಒಂದು ಸಾವಿರ ರೂಪಾಯಿನಂತೆ ಸಾಲವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದರೆ ರೈತರಿಗೆ ಅದರಿಂದ ಅನುಕೂಲವಾಗುತ್ತದೆ. ಸುಮ್ಮನೆ ಪೊಳ್ಳು ಹೇಳಿಕೆಗಳನ್ನು ಕೊಟ್ಟರೆ ಪ್ರಯೋಜನವಿಲ್ಲ. ರೈತ ಹೊಟ್ಟೆಗಿಲ್ಲದೆ ಸಾಯುತ್ತಿದ್ದಾನೆ. ನಮ್ಮ ತಾಲ್ಲೂಕಿನಲ್ಲಿ ಜನಗಳು ಹೊಟ್ಟೆಗಿಲ್ಲದೆ ಕಷ್ಟಪಡುತ್ತಿರುವ ದೃಶ್ಯವನ್ನು ನೋಡುವುದಕ್ಕಾಗುವುದಿಲ್ಲ. ಆಹಾರ ಪರಿಸ್ಥಿತಿ ತೀರಾ ಉಲ್ಬಣ ಸ್ಥಿತಿಗೆ ಬಂದಿದೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಸೇರಿ ಅವರಿಗೆ ನೆರವು ನೀಡಬೇಕಾದ್ದು ಪ್ರತಿಯೊಬ್ಬರ ಕರ್ತವ್ಯ ಎಂದು ನಾನು ಹೇಳುತ್ತೇನೆ. ಸರ್ಕಾರದವರು ಈ ಬಗ್ಗೆ ದಿಟ್ಟತನದಿಂದ ಕ್ರಮವನ್ನು ಕೈಗೊಳ್ಳದಿದ್ದರೆ ಅವರಿಗೆ ತುಂಬಾ ಕಷ್ಟವಾಗುತ್ತದೆ. ಉದಾಹರಣೆಗೆ ಹೇಳಬೇಕಾದರೆ ನಮ್ಮ ಜಿಲ್ಲೆಯಲ್ಲಿ ಭೂಮೇನಹಳ್ಳಿ ಎಂಬ ಊರಿನಲ್ಲಿರುವ ಶ್ರೀಮತಿ ರಂಗಮ್ಮ ಎನ್ನುವವರು ಆಹಾರಕ್ಕಾಗಿ ತಮ್ಮಲ್ಲಿರತಕ್ಕ ಒಡವೆಗಳನ್ನೆಲ್ಲಾ ಮಾರಿ ಆ ಹಣವನ್ನು ಖರ್ಚುಮಾಡಿ ಕೊನೆಗೆ ಆಹಾರವಿಲ್ಲದೆ ನೇಣುಹಾಕಿಕೊಂಡಿದ್ದಾರೆ. ಜನಗಳು ಉಪವಾಸ ಮಾಡಿ ಸಾಯುತ್ತಿದ್ದಾರೆ. ಆದ್ದರಿಂದ ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಸರ್ಕಾರದವರು ದಿಟ್ಟತನದಿಂದ ಕೆಲಸ ಮಾಡಿ ಸಣ್ಣ ನೀರಾವರಿಗೆ ಸಂಬಂಧಪಟ್ಟ ಹಾಗೆ ಕೆರೆಗಳ ಕೆಲಸಗಳನ್ನೂ ಮತ್ತು ಬಾವಿಗಳ ಕೆಲಸವನ್ನು ಮಾಡಿಸುವುದಕ್ಕೆ ಪ್ರಯತ್ನಮಾಡಬೇಕೆಂದು ನಾನು ಹೇಳುತ್ತೇನೆ. ಕೆಲವು ಸಂದರ್ಭಗಳಲ್ಲಿ ರೈತ ಬಾವಿಯನ್ನು ತೆಗೆದು ಅದಕ್ಕೆ ಪಂಪು ಸೆಟ್ಟು ಹಾಕಬೇಕೆಂದು ತಂದಿಟ್ಟುಕೊಂಡು ಎಲೆಕ್ಟ್ರಿಸಿಟಿಯನ್ನು ಕೊಡಿ ಎಂದು ಕೇಳಿದರೆ ಆಫೀಸಿನಲ್ಲಿ ವೈರು ಇಲ್ಲ, ಪೋಲು ಇಲ್ಲ, ಎಂದು ಹೇಳುತ್ತಾರೆ ಅವರಿಗೆ ದುಡ್ಡು ಕೊಟ್ಟರೆ ವೈರೂ ಸಿಕ್ಕುತ್ತದೆ, ಪೋಲೂ ಸಿಕ್ಕುತ್ತದೆ ಎಲ್ಲಾ ಸಲಕರಣೆಗಳೂ ಸಿಕ್ಕುತ್ತವೆ. ಈ ವಿಷಯದಲ್ಲಿ ಏನಾದರೂ ದೂರು ಕೊಟ್ಟರೆ ಲಕ್ಷ್ಮೀಪತಿಯವರು ಕಂಪ್ಲೇಂಟ್ ಕೊಡುತ್ತಾರೆ

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ಎಂದು ಯಾವ ಕೆಲಸಕ್ಕೆ ಹೋದರೂ ಅವಕ್ಕೆ ಕ್ಯೂರಿ ಹಾಕುತ್ತಾರೆ. ಆದ್ದರಿಂದ ಇವೊತ್ತು ಸತ್ಯಕ್ಕೆ ಬೆಲೆಯಿಲ್ಲ. ಲಂಚಕೋರರಿಗೆ ಪ್ರೋತ್ಸಾಹವನ್ನು ಕೊಡಬೇಕು, ಇಲ್ಲದಿದ್ದರೆ ಖಂಡಿತ ಕೆಲಸ ಆಗುವುದಿಲ್ಲ. ಅದಕ್ಕೋಸ್ಕರ ದಯವಿಟ್ಟು ಸರ್ಕಾರದವರು ಪರ್ಮನೆಂಟ್ ಇರಿಗೇಷನ್ ಬೋರ್ಡ್ ಎಂದು ಮಾಡಿದರೆ ಅವರು ಎಲ್ಲಾದರೂ ಬ್ಲಾಕ್ ಮಾರ್ಕೆಟ್ಟಿನಲ್ಲಿ ಸಲಕರಣೆಗಳನ್ನು ತಂದು ಬಾವಿಗಳಿಗೆ ವೈರ್ ಹಾಕಿ ಎಲೆಕ್ಟ್ರಿಸಿಟಿ ಸರ್ವೀಸ್ ಕೊಡುತ್ತಾರೆ. ರೈತ ಕೇಳಿದ ತಕ್ಷಣ ಬಾವಿ ತೆಗೆಸುವುದಕ್ಕೆ ಹಣವನ್ನು ಕೊಡುತ್ತಾರೆ, ಐ. ಪಿ. ಸೆಟ್ಟುಗಳನ್ನು ಕೊಡುತ್ತಾರೆ. ರೈತರು ಬಾವಿಯ ನೀರಿನ ಸಹಾಯದಿಂದ ಬೆಳೆಯನ್ನು ಬೆಳೆಯುತ್ತಾರೆ. ಆ ರೀತಿ ಸರ್ಕಾರದವರು ಅನುಕೂಲಮಾಡಿ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರಿಲೀಫ್ ಕಾಮಗಾರಿಗಳ ಬಗ್ಗೆ ಹೇಳುವುದಾದರೆ ಅಲ್ಲಲ್ಲಿ ಒಂದೊಂದು ತುಣುಕು ಕೆಲಸಗಳನ್ನು ತೆಗೆದುಕೊಳ್ಳುತ್ತಾರೆ. ಅದರಲ್ಲಿ ಒಂದು ರೀತಿ ನೀತಿ ಏನೂ ಇಲ್ಲ. ಈ ಕಾಮಗಾರಿ ಕೆಲಸ ಮಾಡುವವರಿಗೆ ಒಂದು ದಿವಸಕ್ಕೆ 3 ರೂಪಾಯಿ, 4 ರೂಪಾಯಿ, 4½ ರೂಪಾಯಿ ಕೊಡುತ್ತಿದ್ದಾರೆ. ಯಾವ ಹಳ್ಳಿಗೆ ಹೋಗಿ ನೋಡಿದರೂ ಕೂಡ ಇದೇ ರೀತಿ ಕೊಡುತ್ತಿದ್ದಾರೆ. ಈ ವಿಷಯವನ್ನು ನಾನು ಡೆಪ್ಯುಟಿ ಕಮಿಷನರ ಗಮನಕ್ಕೆ ತಂದಾಗ ಅವರು ಎಷ್ಟು ಕೊಡಬೇಕು ಎಂದು ಕೇಳಿದರು. ನಾನು ಒಂದು ದಿವಸಕ್ಕೆ ಏಳು ರೂಪಾಯಿಗಳನ್ನು ಕೊಡಬೇಕೆಂದು ಹೇಳಿದೆ. ಆದರೆ ಅದರ ಬಗ್ಗೆ ಕ್ರಮವನ್ನು ತೆಗೆದುಕೊಂಡಹಾಗೆ ಕಾಣಲಿಲ್ಲ. ಸರ್ಕಾರ ದಿಟ್ಟತನದಿಂದ ಕೆಲಸವನ್ನು ಮಾಡಬೇಕು. ಸರ್ಕಾರದಲ್ಲಿ ಒಂದು ಗುಂಪು, ಒಂದು ರಾಜಕೀಯ ನಡೆಯುತ್ತಿದೆಯೇ ಹೊರತು ದೇಶದ ಜನತೆಗೆ ಅನುಕೂಲವಾಗುತ್ತಿಲ್ಲ. ದೇಶಕ್ಕೆ ಅದರಿಂದ ಕಲ್ಯಾಣವಾಗುತ್ತಿಲ್ಲ. ಧೈರ್ಯವಾಗಿ ಅಧಿಕಾರಿಗಳಿಗೆ ವಿಶೇಷವಾದ ಅಧಿಕಾರವನ್ನು ಕೊಡುತ್ತೇವೆ ಎಂದು ಹೇಳುತ್ತಾರೆ, ಅವರೂ ಕಮ್ಮಿ ಅಧಿಕಾರವನ್ನು ಚಲಾಯಿಸುವುದಕ್ಕೆ ಅವಕಾಶ ವಿಲ್ಲದಂತಾಗುತ್ತಿದೆ. ಇಂಥಾ ಒಂದು ಪರಿಸ್ಥಿತಿಯನ್ನು ಮುಂದುವರಿಸಿದರೆ, ಹಳ್ಳಿಗಾಡಿನ ಜನಗಳಿಗೆ ಸರ್ಕಾರದವರು ಸಾಕಷ್ಟು ಸಹಾಯವನ್ನು ಮಾಡದಿದ್ದರೆ ಜನಗಳು ಸಾಯುತ್ತಾರೆ. ಪಟ್ಟಣದಲ್ಲಿರುವವರು ಒಂದು ಕೂಗು ಹಾಕಿದರೆ ಅವರಿಗೆ ಸರ್ಕಾರದವರು ಆಹಾರವನ್ನು ಕೊಡುತ್ತಾರೆ. ನಮ್ಮ ಹಳ್ಳಿಗಾಡಿನಲ್ಲಿ ಒಂದು ಸೇರು ರಾಗಿಗೆ ಒಂದು ರೂಪಾಯಿ ಕೊಟ್ಟರೂ ಸಿಕ್ಕುವುದಿಲ್ಲ. ನಮಗೆ ಹಿಂದೂಪುರ ಬಾರ್ಡರಿನಲ್ಲಿದೆ ಅಲ್ಲಿಗೆ ಹೋಗಿ ಜನ ರಾಗಿಯನ್ನು ತರುತ್ತಿದ್ದಾರೆ. ಅಲ್ಲಿಂದ ತರುವ ರಾಗಿಯ ಬೆಲೆ ಹೇಗಿದೆ ಎಂದರೆ, ಒಂದು ಸೇರಿಗೆ ಒಂದೂಕಾಲು ರೂಪಾಯಿನಷ್ಟು ಬೀಳುತ್ತದೆ. ಆದರೆ ಅದು ಹೇಗೋ ಬೆಂಗಳೂರಿನಂತಹ ಪಟ್ಟಣಗಳಲ್ಲಿ ಸಿಗುತ್ತದೆ. ಆದರೆ ಹಳ್ಳಿಗಾಡಿನಲ್ಲಿ ಒಂದು ತಿಂಗಳಿಗೆ ಸುಮಾರು ಅರು ಮೂಟೆಗಳಷ್ಟು ರಾಗಿ ಎಂದು ಕೊಡುತ್ತಾರೆ. ಅದನ್ನು ಎಲ್ಲ ಜನಕ್ಕೆ ಹೇಗೆ ಹಂಚುವುದು ಎನ್ನುವುದೇ ಅಲ್ಲಿ ಒಂದು ದೊಡ್ಡ ಗೊಂದಲಕ್ಕೆ ಕಾರಣವಾಗಿದೆ. ಕಳ್ಳತನ ಮಾಡುವುದಕ್ಕೆ ಬರುವುದಿಲ್ಲ, ಭಿಕ್ಷೆ ಮಾಡೋಣ ಎಂದರೆ ಅಲ್ಲಿರುವಂತಹ ಜನ ಭಿಕ್ಷೆ ಮಾಡಲು ಹೋಗುವುದಿಲ್ಲ. ಹೀಗಾದರೆ ಹಳ್ಳಿಗಾಡಿನ ಜನ ಹೇಗೆ ಬದುಕಬೇಕು ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಸುಮ್ಮನೆ ಪ್ರಚಾರ ಮಾಡಿ ಹಳ್ಳಿಗಳು ಕೂಡ ಇವೊತ್ತು ಅಭಿವೃದ್ಧಿಗೆ ಬರಬೇಕು ಎಂದರೆ ಅವು ಹೇಗೆ ತಾನೇ ಅಭಿವೃದ್ಧಿಗೆ ಬರಬೇಕು ಎನ್ನುವುದೇ ನಮಗೆ ಗೊತ್ತಾಗುತ್ತಿಲ್ಲ. ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಒಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ವಿದ್ಯಾಭ್ಯಾಸವನ್ನೇನೋ ಈಗ ಉಚಿತವಾಗಿ ಮಾಡಬೇಕೆಂದು ಅನೇಕ ರೀತಿಯಾಗಿ ಪ್ರಚಾರ ಮಾಡುತ್ತಿದ್ದಾರೆ. ನಾನು ಕೆಲವು ಹೈಸ್ಕೂಲುಗಳಲ್ಲಿ ಹೋಗಿ ಅಲ್ಲಿರುವ ವಿದ್ಯಾರ್ಥಿಗಳಿಗೆ ಎಷ್ಟು ಖರ್ಚು ಬರುತ್ತದೆ ಎನ್ನುವುದನ್ನು ನೋಡಿದಾಗ ಅವರು ಕೊಡುವ ಅನೇಕ ಡೊನೇಷನ್ನುಗಳ ಹಾಗೂ ಇತರ ಫೀಸುಗಳನ್ನು ಏನು ಕೊಡುತ್ತಿದ್ದಾರೋ ಅದು ನ್ಯಾಯವಾದ ಫೀಸುಗಳಿಗಿಂತ ಜಾಸ್ತಿಯಾಗಿರುವುದು ಕಂಡುಬಂತು. ಆದುದರಿಂದ ವಿದ್ಯಾಭ್ಯಾಸವನ್ನು ಜನತೆಗೆ ಪೂರ್ತಿಯಾಗಿ ಉಚಿತವಾಗಿ ಕೊಡಲು ಹೇಗೆ ಸಾಧ್ಯ ಎನ್ನುವುದು ನನಗಂತೂ ಅರ್ಥವಾಗುತ್ತಿಲ್ಲ. ಯಾವ ಕಾರಣದಿಂದಲೂ ಕೂಡ ಸರಕಾರದವರು ಯಾವ ರೀತಿಯ ಫೀಜುಗಳನ್ನೂ ವಸೂಲು ಮಾಡಬಾರದು. ಇದಕ್ಕೆ ತಾವು ಅನುಕೂಲ ಮಾಡಿಕೊಡಿ. ವಿದ್ಯಾ ಸಚಿವರು ಇದೊಂದು ಮಾನವ ಜೀವನದ ಪ್ರಶ್ನೆ ಎಂದು ತಿಳಿದುಕೊಂಡು ಯಾವ ಸಂಘ ಸಂಸ್ಥೆಗಳವರೇ ಆಗಲಿ ಹುಡುಗರಿಂದ ಕಡ್ಡಾಯವಾಗಿ ಫೀಜುಗಳನ್ನು ವಸೂಲು ಮಾಡಬಾರದು ಮತ್ತು ವಿದ್ಯಾಭ್ಯಾಸವನ್ನು ಸೆಕಂಡರಿ ಮಟ್ಟದವರೆಗೆ ಉಚಿತವಾಗಿ ಕೊಡುವಂತೆ ಏರ್ಪಾಡು ಮಾಡಬೇಕೆಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಂ. ಪಾಟೀಲ್ (ಟಿಕೋಟ) — ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಮಾಡಿರುವ ಭಾಷಣದ ವಂದನಾರ್ಪಣೆಯ ನಿರ್ಣಯದ ಬಗ್ಗೆ ನಾನು ಇಲ್ಲಿ ಒಂದೆರಡು ಸೂಚನೆಗಳನ್ನು ಕೊಡ ಬಯಸುತ್ತೇನೆ. ಈಗಾಗಲೇ ಇದರ ಬಗ್ಗೆ ಮಾನ್ಯ ಮಿತ್ರರುಗಳು ಅನೇಕರು ಮಾತನಾಡಿದ್ದಾರೆ.

ಸರಕಾರ ಇಲ್ಲಿಯವರೆಗೆ ಮಾಡಿರುವ ಪ್ರಗತಿ ಏನು ಹಾಗೂ ಮುಂದೆ ಏನೇನು ಕಾರ್ಯಗಳನ್ನು ಮಾಡುವವರಾಗಿದ್ದಾರೆ ಇತ್ಯಾದಿ ಅನೇಕ ಪ್ರಶ್ನೆಗಳನ್ನು ಇಲ್ಲಿ ಎತ್ತಿದ್ದಾರೆ. ಇವೊತ್ತಿನ ದಿವಸ ನೋಡಿದರೆ ನಮ್ಮ ದೇಶದಲ್ಲಿ ಮಹತ್ವಪೂರಿತವಾದ ಕೆಲಸಗಳು ರಾಜ್ಯದ ಘನತೆ ಹಾಗೂ ಕೀರ್ತಿಗಳನ್ನು ಮೇಲೆ ಎತ್ತುವಂತಹ ಕೆಲಸಗಳನ್ನು ನಮ್ಮ ಜನತೆ ಮಾಡಿ ತೋರಿಸಿದೆ. ಹೊರದೇಶಗಳವರ ಆಕ್ರಮಣವನ್ನು ಧೈರ್ಯವಾಗಿ ಎದುರಿಸಿ ತಮ್ಮ ಸಾಮರ್ಥ್ಯವನ್ನು ತೋರಿಸಿದೆ. ಇದು ಜನತೆಯ ಯೋಗ್ಯವಾದ ರಾಷ್ಟ್ರಾಭಿಮಾನವನ್ನು ತೋರಿಸುತ್ತದೆ. ಮೂರನೆಯ ಯೋಜನೆಗಾಗಿ ಸುಮಾರು 250 ಕೋಟಿಗಳಷ್ಟು ಎಂದು ನಿಗದಿ ಮಾಡಿರುವ ಹಣದಲ್ಲಿ ಸುಮಾರು 243 ಕೋಟಿಗಳಷ್ಟು ಹಣವನ್ನು ಸರಕಾರ ಖರ್ಚು ಮಾಡಿದ್ದಾರೆ, ಎಂದರೆ, ಸುಮಾರು ಶೇಕಡಾ 97 ರಷ್ಟು ಪ್ರಗತಿಯನ್ನು ಸಾಧಿಸಿದೆ ಎಂದು ಹೇಳಬಹುದು, ಆದರೆ ಇನ್ನೂ ಸಾಕಷ್ಟು ಮಾಡುವುದೂ ಇದೆ. ಇದೇ ರೀತಿ ನಾಲ್ಕನೇ ಯೋಜನೆಗಾಗಿ ಕಾರ್ಯಗಳನ್ನು ಮಾಡಲು ಸುಮಾರು 537 ಕೋಟಿಯಷ್ಟು ಹಣವನ್ನು ಖರ್ಚು ಮಾಡಬೇಕು ಎಂದು ಇಟ್ಟುಕೊಂಡಿದ್ದಾರೆ. ಇದನ್ನು ನೋಡಿದರೆ ನಮ್ಮ ಸಂಪನ್ಮೂಲಗಳನ್ನು ದೇಶಕ್ಕಾಗಿ ಹೇಗೆ ಬಳಸಿಕೊಳ್ಳುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ನಾಲ್ಕನೆ ಯೋಜನೆಯ ಮೊದಲನೆಯ ವರ್ಷದಲ್ಲಿ ಸುಮಾರು 50.72 ಕೋಟಿಯಷ್ಟು ಖರ್ಚು ಮಾಡಬೇಕೆಂದು ಇದೆ. ಇದರಲ್ಲಿ ಅವರೇ ಇಲ್ಲಿ ಹೇಳಿರುವಂತೆ ಸುಮಾರು 17.3 ಕೋಟಿಯಷ್ಟನ್ನು ವ್ಯವಸಾಯ ಹಾಗೂ ಸಹಕಾರ ಖಾತೆಗಳಿಗಾಗಿ ಖರ್ಚು ಮಾಡಬೇಕೆಂದು, ವಿದ್ಯುಚ್ಛಕ್ತಿ ಯೋಜನೆಗಳಿಗಾಗಿ ಸುಮಾರು 19.2 ಕೋಟಿಯಷ್ಟನ್ನು ಖರ್ಚು ಮಾಡಬೇಕೆಂದು ಒಂದು ಗುರಿಯನ್ನು ಇಟ್ಟುಕೊಂಡಿದ್ದಾರೆ. ಸರಕಾರದವರು ನೀರಾವರಿ ಯೋಜನೆಗಳಿಗಾಗಿ ಹೆಚ್ಚು ಹೆಚ್ಚಾಗಿ ಖರ್ಚು ಮಾಡಬೇಕೆಂದು ಇದಕ್ಕಾಗಿ ಅಲ್ಲಲ್ಲಿ ಕಟ್ಟೆಗಳನ್ನು ಕಟ್ಟಿ ನೀರಾವರಿಗೆ ಅನುಕೂಲ ಮಾಡಬೇಕೆಂದು ಇದ್ದಾರೆ ಮತ್ತು ಇದರಿಂದ ಹೆಚ್ಚು ಉತ್ಪಾದನೆ ಮಾಡಲೂ ಸಹಾಯವಾಗುತ್ತದೆ. ನಮ್ಮ ರಾಜ್ಯದ ವ್ಯವಸಾಯದ ಚಿತ್ರವನ್ನು ನೋಡುವಾಗ ನಮ್ಮಲ್ಲಿ ವಿದ್ಯುಚ್ಛಕ್ತಿ ಹೇರಳವಾಗಿ ದೊರೆಯುತ್ತಿರುವುದರಿಂದ ಅದನ್ನುಪಯೋಗಿಸಿಕೊಂಡು ಚಿಕ್ಕ ನೀರಾವರಿ ಯೋಜನೆಗಳನ್ನು ಹೆಚ್ಚಾಗಿ ಮಾಡಬೇಕೆಂದು ಇದ್ದಾರೆ. ಮೂರನೆ ಯೋಜನೆಯಲ್ಲಿ ಚಿಕ್ಕ ನೀರಾವರಿ ಯೋಜನೆಗಳಿಗಾಗಿ ಏನು ಅಂದಾಜು ಮಾಡಿದ್ದರೋ ಅವರಲ್ಲಿ ಶೇಕಡಾ ಇನ್ನೂರರಷ್ಟು ಖರ್ಚು ಮಾಡುತ್ತಿದ್ದೇವೆಂದು ಇಲ್ಲಿ ಹೇಳಿದ್ದಾರೆ. ಇದರಿಂದ ನೋಡುವುದಾದರೆ, ಚಿಕ್ಕ ನೀರಾವರಿ ಯೋಜನೆಗಳ ಸಹಾಯದಿಂದ ಸುಮಾರು 1,69,765 ಎಕರೆಗಳಷ್ಟು ಭೂಮಿಗೆ ನೀರು ಸಿಕ್ಕಿ ವ್ಯವಸಾಯ ಮಾಡಲು ಸಾಧ್ಯವಿದೆ. ಇದಕ್ಕೂ ಹೆಚ್ಚಾಗಿ ಇನ್ನೂ ಒಂದು ಲಕ್ಷ ಎಕರೆಗಳಷ್ಟು ಜಮೀನಿನವರೆಗೆ ಹೆಚ್ಚಿಸಲು ಸಾಧ್ಯವಿದೆ. ಇದನ್ನು ನೋಡಿದರೆ ನಮ್ಮ ದೇಶದ ಸರಕಾರ ಸಾಕಷ್ಟು ಪ್ರಗತಿಪರವಾಗಿ ಮುಂದುವರಿಯುತ್ತಿದೆ ಎಂದು ಹೇಳಬಹುದು. ಇದೇ ರೀತಿ ದೊಡ್ಡ ಪ್ರಮಾಣದ ನೀರಾವರಿ ಯೋಜನೆಗಳನ್ನು ಏನು ಮಾಡಬೇಕೆಂದು ಇದೆ, ಅವು ಯಾವ ರೀತಿಯಾಗಿ ಮುಂದುವರಿಯಬೇಕೋ ಆ ರೀತಿ ಮುಂದುವರಿಯದಿದ್ದರೆ ಹೆಚ್ಚು ಪ್ರಗತಿಪರವಾದ ಕೆಲಸಗಳನ್ನು ನಡೆಸುವುದಕ್ಕಾಗುವುದಿಲ್ಲ. ಅದರಿಂದಾಗಿ ಅಪ್ಪರ್ ಕೃಷ್ಣಾ ಯೋಜನೆ ಮಾಡಬೇಕೆಂದು ಏನಿತ್ತೋ ಅದು ಇನ್ನೂ ಜಾಗ್ರತೆಯಿಂದ ಮುಂದುವರಿಯುತ್ತಿಲ್ಲ. ಸರಕಾರ ಈ ದಿಸೆಯಲ್ಲಿ ಕಾರ್ಯಗಳನ್ನು ಮಾಡಲು ಕೇಂದ್ರದವರ ಸಹಾಯಗಳನ್ನು ಹೆಚ್ಚಾಗಿ ಪಡೆಯದೆ ಇವು ಮುಂದುವರಿಯಲು ತಡವಾಗುತ್ತವೆ. ಈಗಲಾದರೂ ಇವನ್ನು ಬೇಗನೆ ಮಾಡಲು ಪ್ರಯತ್ನ ನಡೆಸಬೇಕೆಂದು ಇಲ್ಲಿ ಒತ್ತಾಯದಿಂದ ಹೇಳುತ್ತೇನೆ. ಏಕೆಂದರೆ, ಇಂತಹ ಮಧ್ಯಮ ವರ್ಗದ ನೀರಾವರಿ ಯೋಜನೆಗಳು, ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಕಾರ್ಯರೂಪದಲ್ಲಿ ಬರಲು ಎಷ್ಟು ಪ್ರಗತಿಯಲ್ಲಿ ಬರಬೇಕಾಗಿತ್ತೋ ಆ ರೀತಿಯಾಗಿ ಬರುತ್ತಿರುವುದು ಕಾಣುತ್ತಿಲ್ಲ. ಆದುದರಿಂದ ಸರಕಾರ ಇದನ್ನು ಬೇಗನೆ ಮಾಡಬೇಕೆಂದು ಇಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಇದನ್ನು ಮಾಡಿದ್ದಾರೆ, ಅದನ್ನು ಮಾಡಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅವು ಯಾವ ಯಾವುವು ಎನ್ನುವುದನ್ನು ಸ್ವಲ್ಪ ವಿವರವಾಗಿ ಇಲ್ಲಿ ಹೇಳಿದರೆ ಚೆನ್ನಾಗಿರುತ್ತದೆ.

ಶ್ರೀ ಬಿ. ಎಂ. ಪಾಟೀಲ್.—ಅವನ್ನೆಲ್ಲಾ ತಾವು ಯೋಜನೆಯ ಕೆಲಸಗಳನ್ನು ಮಾಡಿರುವುದರಲ್ಲಿ ನೋಡುವಾಗ ಗೊತ್ತಾಗುತ್ತದೆ. ಅನೇಕ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡುವಾಗ ಹಿಂದೆ ವಿದ್ಯುಚ್ಛಕ್ತಿಯ ಕೊರತೆ ಇತ್ತು. ಆದರೆ ಈಗ ವಿದ್ಯುಚ್ಛಕ್ತಿ ಹೆಚ್ಚಾಗಿ ನಮ್ಮಲ್ಲೇ ಸಿಗುತ್ತಿರುವುದರಿಂದ ಇನ್ನೂ ಹೆಚ್ಚು ಕೆಲಸಗಳನ್ನು ತ್ವರಿತವಾಗಿ ಮಾಡಲು ಸಾಧ್ಯವಿದೆ ಎನ್ನುವುದನ್ನು ತಾವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಇದರಿಂದ ಸರಕಾರಕ್ಕೆ ಉತ್ಪಾದನೆಯೂ ಹೆಚ್ಚಾಗುತ್ತದೆ. ಇದರ ಕಡೆಗೆ ಮನಃಪೂರ್ವಕವಾಗಿ ಪ್ರಯತ್ನ ಮಾಡುತ್ತಾರೆಂದು ಆಶಿಸುತ್ತೇನೆ. ಈಗ ರಾಜ್ಯದಲ್ಲಿ ಆಹಾರದ ಪರಿಸ್ಥಿತಿ ಬಹು ನಿರಾಶಾದಾಯಕವಾಗಿದೆ ಮತ್ತು ಇದೇ ರೀತಿಯಾಗಿ ಇನ್ನೂ ಮುಂದುವರಿದರೆ ಇನ್ನೂ ಉಗ್ರವಾದಂತಹ ಪರಿಸ್ಥಿತಿ ಒದಗಬಹುದು ಎನ್ನುವ ಹೆದರಿಕೆಯನ್ನು ಇಲ್ಲಿ ನನ್ನ ಅನೇಕ ಮಾನ್ಯ ಮಿತ್ರರು

(ಶ್ರೀ ಬಿ. ಎಂ. ಪಾಟೀಲ್)

ಹೇಳಿದರು. ಅದಕ್ಕಾಗಿ ರಾಜ್ಯ ಸರಕಾರದವರು ಈಗಾಗಲೇ ಪ್ರತಿಯೊಬ್ಬರಿಗೂ ಆಹಾರವನ್ನು ಒದಗಿಸಿಕೊಡಬೇಕೆಂದು ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಈ ಆಹಾರದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಒಂದೇ ಅಲ್ಲ. ಬೇರೆ ಇತರ ರಾಜ್ಯಗಳಲ್ಲಿಯೂ ಇವೆ. ಈಗ ಸ್ವಲ್ಪಮಟ್ಟಿಗಾದರೂ ಇಲ್ಲಿ ಪ್ರತಿಯೊಬ್ಬರಿಗೂ ಆಹಾರವಸ್ತುಗಳು ಸಿಗುತ್ತಿವೆ. ಆದರೆ ಇದರಲ್ಲಿ ಸಾಕಷ್ಟು ಯಶಸ್ಸನ್ನು ಗಳಿಸಲು ಇನ್ನೂ ಆಗಲಿಲ್ಲ. ಆದರೂ ಕಷ್ಟದಿಂದ ಸರಕಾರದವರು ಮುಂದುವರಿಯುತ್ತಿದ್ದಾರೆ. ಕೆಲವರು ಇಲ್ಲಿ ಬಹಳ ದಾರುಣವಾದ ಒಂದು ಚಿತ್ರವನ್ನು ಕೊಟ್ಟಿದ್ದಾರೆ. ಇದು ರಾಷ್ಟ್ರೀಯವಾದ ಸಮಸ್ಯೆಯಂತೆ ಎಲ್ಲ ರಾಷ್ಟ್ರಗಳ ಸಹಕಾರದಿಂದ ಪ್ರತಿಯೊಬ್ಬರೂ ಈ ದೇಶದಲ್ಲಿ ಮುಂದುವರಿಯಬೇಕಾಗುತ್ತದೆ. ಈಗ ದೇಶದಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿ ಹೆಚ್ಚಾಗಿರುವುದರಿಂದ ಇದನ್ನುಪಯೋಗಿಸಿಕೊಂಡು ಇನ್ನೂ ಹೆಚ್ಚು ಉತ್ಪತ್ತಿ ಪಡೆಯಲು ಸಾಧ್ಯವಿದೆ. ಆದರೂ ಸರಕಾರ ಸಾಕಷ್ಟು ಯಶಸ್ಸನ್ನು ಸಾಧಿಸಿದೆ ಎಂದು ಹೇಳಬಹುದು. ಈಗಾಗಲೇ ನಮಗೆ ತುಂಗಭದ್ರಾ ಯೋಜನೆ ಪೂರ್ತಿಯಾಗಿದೆ ಮತ್ತೆ ಶರಾವತಿಯ ಎರಡನೇ ಫೇಸು ಮುಗಿದು ಅದರಿಂದ ದೇಶಕ್ಕೆ ಸಾಕಷ್ಟು ವಿದ್ಯುಚ್ಛಕ್ತಿ ಸಿಗುವುದರಲ್ಲಿದೆ. ಇದನ್ನು ಉಪಯೋಗಿಸಿಕೊಂಡು ಇನ್ನೂ ಹೆಚ್ಚು ಉತ್ಪಾದನೆಮಾಡಬಹುದು ಎನ್ನುವ ಒಂದು ಆಶಾದಾಯಕವಾದ ಪರಿಸ್ಥಿತಿ ಇದೆ ಎಂದು ನಾವು ಹೇಳಬಹುದು. ಇದೆ ರೀತಿ ವಿದ್ಯುಚ್ಛಕ್ತಿಯನ್ನು ಪಡೆದು ರಾಜ್ಯದಲ್ಲಿ ಬೇರೆ ಭಾಗಗಳಲ್ಲಿಯೂ ಸಾಕಷ್ಟು ಉತ್ಪಾದನೆಯನ್ನು ಪಡೆಯಲು ಸಾಧ್ಯವಿದೆ. ಹಾಗಿದ್ದರೂ ನಮ್ಮ ಬಿಜಾಪುರದ ಭಾಗದಲ್ಲಿ ಸರಕಾರದವರೇ ಹಾಕಿಕೊಂಡಿದ್ದ ಯೋಜನೆಗಳನ್ನು ಇಲ್ಲಿಯವರೆಗೂ ಪೂರ್ತಿ ಮಾಡಲು ಶಕ್ಯವಾಗಲಿಲ್ಲ. ಇದಕ್ಕೆ ಬಹಳ ಕಾರಣಗಳೂ ಇವೆ. ಆದುದರಿಂದ ಸರಕಾರ ಈಗಲಾದರೂ ನಮ್ಮ ಬಿಜಾಪುರ ಭಾಗದಲ್ಲಿ ವಿದ್ಯುಚ್ಛಕ್ತಿಯ ಸಹಾಯವನ್ನು ಕೊಟ್ಟು ತಕ್ಕ ಕಾರ್ಯಕ್ರಮಗಳನ್ನು ಬೇಗನೆ ಮಾಡಬೇಕೆಂದು ಸರಕಾರದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ನಮ್ಮ ಬಿಜಾಪುರ ಭಾಗದಲ್ಲಿ ಸಾಯಿಲ್ ರೆಕ್ಲಮೇಷನ್ ಕೆಲಸ ಮಾಡಬೇಕೆಂದು ಇದೆ. ಇಲ್ಲಿ ಹರಿಯುವ ರೋಣ್ ಎಂಬ ನದಿಯ ನೀರು ತೀರಾ ಉಪ್ಪು ಮಿಶ್ರವಾಗಿ ಕೂಡಿರುವುದರಿಂದ ಇಲ್ಲಿ ಸಾಯಿಲ್ ರಿಕ್ಲಮೇಷನ್ ಸ್ಕೀಂ ತೆಗೆದು ಕೊಳ್ಳಬೇಕೆಂದು ಸರಕಾರ ಅಂದಾಜು ಮಾಡಿತ್ತು. ಅದಕ್ಕಾಗಿ ಸ್ವಲ್ಪ ಹಣವನ್ನೂ ಖರ್ಚು ಮಾಡಿದ್ದಾರೆ. ಆದರೆ ಈ ಭಾಗದಲ್ಲಿ ಎಷ್ಟುಮಟ್ಟಿಗೆ ಕಾರ್ಯರೂಪಕ್ಕೆ ಬರಬೇಕೆಂದು ಇತ್ತೊ ಅಷ್ಟುಮಟ್ಟಿಗೆ ಕೆಲಸಗಳು ಇಲ್ಲಿಯವರೆಗೂ ನಡೆಯಲಿಲ್ಲ. ಇಲ್ಲಿರುವ ಉಪ್ಪು ಕ್ಷಾರವಾದ ನೀರನ್ನುಪಯೋಗಿಸಲು ಆಗುವುದಿಲ್ಲ. ಅದಕ್ಕಾಗಿ ಸರಕಾರ ಬೇಗನೆ ಇಲ್ಲಿ ಮಾಡಿರುವ ಸ್ಕೀಂನ್ನು ಕಾರ್ಯರೂಪಕ್ಕೆ ತರಲು ಸಹಾಯ ಮಾಡಬೇಕೆಂದು ಸೂಚಿಸುತ್ತೇನೆ. ಇದಕ್ಕಾಗಿ ಇನ್ನು ಹೆಚ್ಚು ಹಣದ ಸಹಾಯವನ್ನು ಮಾಡಿ ಜನತೆಗೆ ಸಹಾಯವಾಗಲು ಇವುಗಳನ್ನು ಬೇಗನೆ ಕಾರ್ಯ ರೂಪಕ್ಕೆ ತರಲು ಸರಕಾರ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

6-00 P.M.

ಮಾನ್ಯ ಮಿತ್ರರಾದ ಶ್ರೀ ಆರ್. ಎಂ. ದೇಸಾಯಿ ಅವರು ಹೇಳಿದ ಹಾಗೆ ಬಿಜಾಪುರದಲ್ಲಿ ಒಳ್ಳೆಯ ಗೊಬ್ಬರ ಮತ್ತು ಬೀಜವನ್ನು ಕೂಡುವುದರಿಂದ ಮಿಶ್ರತಳಿಯ ಜೋಳವನ್ನು ಬೆಳೆಯುತ್ತಿದ್ದಾರೆ. ವ್ಯವಸಾಯ ಡೈರೆಕ್ಟರವರ ಆಫೀಸಿನವರು ಬಹಳ ಸಹಾಯ ಮಾಡಿ ಒಳ್ಳೆಯ ರೀತಿಯ ಹುಮ್ಮಸಿನಿಂದ ಮುಂದೆ ಬಂದು ರೆಡ್ ಟೇಪಿಸಂ ಎಂದು ಏನು ಇತ್ತು ಆ ರೀತಿ ಮಾಡದೆ ಒಕ್ಕಲುತನಕ್ಕೆ ಸಹಾಯ ಮಾಡಲು ಮುಂದೆ ಬರುತ್ತಿರುವುದು ಅಭಿನಂದನೀಯವೆಂದು ಹೇಳಬೇಕಾಗಿದೆ. ಅಗ್ರಿಕಲ್ಚರಲ್ ಡೈರೆಕ್ಟರ್ ಆಫೀಸಿನವರು ಫೋರ್ಡ್ ಫೌಂಡೇಷನ್‌ನೊಂದಿಗೆ ಸಹಕರಿಸಿ ಸ್ಥಳದಲ್ಲಿಯೇ ಇನ್‌ಸ್ಪಕ್ಷನ್ ಮಾಡಿ ಯಾವ ರೀತಿ ಮುಂದುವರಿಯಬೇಕು ಎನ್ನುವ ತಿಳುವಳಿಕೆಯನ್ನು ಕೊಡುತ್ತಿರುವುದಕ್ಕಾಗಿ ಆ ಇಲಾಖೆಗೆ ಅಭಿನಂದನೆಗಳನ್ನು ಸಲ್ಲಿಸಬೇಕು.

ಇನ್ನು ಶಿಕ್ಷಣದಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಕಾಲೇಜು ಶಿಕ್ಷಣದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ. ಪಾಶ್ಚಾತ್ಯ ದೇಶಗಳಲ್ಲಿ, ಇನ್ನಿತರ ದೇಶಗಳಲ್ಲಿ ಸಾರ್ವಜನಿಕ ಸಂಸ್ಥೆಗಳು ಶಿಕ್ಷಣ ಕಾರ್ಯದಲ್ಲಿ ತೊಡಗಿವೆ. ಹೀಗಿರುವಾಗ ನಮ್ಮ ರಾಜ್ಯದಲ್ಲಿಯೂ ಕೂಡ ಶಾಲೆಗಳಲ್ಲಿ ಉಚಿತ ಶಿಕ್ಷಣವನ್ನು ಕೊಡಲು ಸಾರ್ವಜನಿಕ ಸಂಸ್ಥೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಖಾಸಗಿ ಸಂಸ್ಥೆಗಳಿಗೆ ಶಿಕ್ಷಣ ಕಾರ್ಯವನ್ನು ಏಕೆ ಕೊಡಬೇಕು ಎಂದು ಕೆಲವು ಮಿತ್ರರು ಹೇಳಿದರು. ಖಾಸಗಿ ಸಂಸ್ಥೆಗಳು ಜವಾಬ್ದಾರಿಯನ್ನು ಹೊತ್ತುಕೊಂಡು ಮುಂದೆ ಬಂದು ಉಚಿತ ಶಿಕ್ಷಣವನ್ನು ಕೊಡಲು ತಯಾರಿದ್ದಾಗ ಅನೇಕ ಪಾಶ್ಚಾತ್ಯ ದೇಶಗಳಲ್ಲಿ ಇಂಥ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಟ್ಟು ಜನರ ಶಿಕ್ಷಣದ ಮಹತ್ವವಾದ ರಂಗದಲ್ಲಿ ಮುಂದುವರಿಯುವುದಕ್ಕೆ ಅವಕಾಶ ಮಾಡಿದ್ದಾರೆ. ಅದೇ ರೀತಿ ನಮ್ಮಲ್ಲಿಯೂ ಸರ್ಕಾರದವರು ಪ್ರೋತ್ಸಾಹವನ್ನು ಕೊಡಬೇಕು, ಅದಕ್ಕೆ ಯಾವ ಅಭ್ಯಂತರವೂ ಇರಬಾರದು ಎಂದು ಹೇಳುತ್ತಿದ್ದೇನೆ.

ಪಂಚಾಯತಿ ರಾಜ್ಯದಲ್ಲಿ ರಾಜ್ಯ ಸಂಸ್ಥೆಗಳು ಮತ್ತು ಪಂಚಾಯತಿಗಳು ಮಹತ್ವವಾದ ಪಾತ್ರವನ್ನು ಉತ್ಪಾದನೆಯಲ್ಲಿ ವಹಿಸಬೇಕಾಗಿದೆ. ಅದಕ್ಕೆ ಪ್ರೋತ್ಸಾಹ ಕೊಡುವ ಸಲುವಾಗಿ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಪಂಚಾಯತಿಗಳು ಆಂತರಿಕ ಸಂಪನ್ಮೂಲಗಳ ಜೊತೆಗೆ ಹೊರಗಿನ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಉತ್ಪಾದನೆ ಫಲಪ್ರದವಾಗುವಂತೆ ಮಾಡಲು ಅವಕಾಶಗಳನ್ನು ಕಲ್ಪಿಸಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—We have 14 hours for this Resolution. We have spent more than eleven and a half hours. So, I propose to-morrow to allow the general Debate, unless the Government or the Ministers intervene, till about 3 o'clock and after that Government will reply and it will be put to vote at 5 o'clock.

Sri B. D. JATTI.—Sir, to-morrow I may be permitted to intervene.

Mr. SPEAKER.—It is only tentative and I will adjust.

The House will now adjourn to reassemble to-morrow at 1 P.M.

The House adjourned at Five Minutes past Six of the Clock to meet again at One of the Clock on Thursday, the 3rd February 1966.

WD 6074—GPB—500—20-2-1966